

# ಕ್ರಿಯಾತ್ಮಕ ಆಧ್ಯಾತ್ಮಿಕತೆ

ಅಖಿಲ ಭಾರತ ಪತ್ರಿಕೆ
ಮಾರ್ಚ್ – 2014



The will of self-giving forces away
by its power the veil between God and man;
it annuls every error and
annihilates every obstacle.

- Sri Aurobindo

**ಶ್ರೀಮಾತೆಯವರು ಪಾಂಡಿಚೇರಿ ನಗರಕ್ಕೆ ಆಗಮಿಸಿ ಶ್ರೀ ಅರವಿಂದರನ್ನು ಭೇಟಿ ಮಾಡಿದ ಮೊದಲ ದಿನದ ಶತಾಬ್ದಿ ಆಚರಣೆ ನಿಮಿತ್ತ ಹೊರಡಿಸಲಾದ ವಿಶೇಷ ಸಂಚಿಕೆ**

"ಮೌನದಲ್ಲಿ ಅವರು ತಮ್ಮ ಆತ್ಮಗಳನ್ನು ಹಾಗೂ ಚಿಂತನಗಳನ್ನು ವಿನಿಮಯ ಮಾಡಿಕೊಂಡರು, ಕೈಕೊಳ್ಳಬೇಕಾದ ಕಾರ್ಯದ ಶ್ರೇಷ್ಠತೆ ಮತ್ತು ಬರಲಿರುವ ವಿಜಯದ ಭವ್ಯತೆ ಕುರಿತು ಮಾತನಾಡಿದರು. ಅದನ್ನು ಕುರಿತು ಶ್ರೀ ಅರವಿಂದರನ್ನು ಆವರಿಸಿದ್ದ ಕಣ್ಣು ಕುಕ್ಕಿಸುವ ತೇಜಸ್ಸು ಮಹಿಮಾನ್ವಿತ ವಾಗ್ದಾನ ನೀಡುತ್ತಿರುವಂತೆ ತೋರಿಬರುತ್ತಿತ್ತು. (ಶ್ರೀಮಾತೆಯವರ ದರ್ಶನ, ಬುಲೆಟಿನ್, ಅಗಸ್ಟ 1984, p. 19)

ಅದು ಕ್ರಿಯಾಶೀಲ ಆಧ್ಯಾತ್ಮಿಕತೆಯ ಹೊಸ ಯುಗದ ಉದ್ಘಾಟನೆ ಮಾಡಿತು. ಮತ್ತು ಪೃಥ್ವಿಯ ಮೇಲೆ ಅತಿಮಾನಸ ಸೃಷ್ಟಿಯನ್ನು ತರುವುದರಲ್ಲಿ ಪರಾಕಾಷ್ಠೆ ಕಂಡುಕೊಳ್ಳುವುದು.

"ದೈವೀ ದೇಹದಲ್ಲಿ ದೈವೀಜೀವನ ಎಂಬ ಆದರ್ಶದ ಸೂತ್ರವನ್ನು ಕುರಿತು ನಾವು ಆಲೋಚಿಸುತ್ತೇವೆ."

**– ಶ್ರೀ ಅರವಿಂದರು**

*

(ಶ್ರೀಮಾತೆಯವರ ಮೊಮ್ಮಗಳು ಪೂರ್ಣಪ್ರೇಮಾ ಫೆ. 1978ರಲ್ಲಿ ಶ್ರೀ ಅರವಿಂದಾಶ್ರಮದಲ್ಲಿಯ 8 ರಿಂದ 12 ವರ್ಷ ವಯಸ್ಸಿನ ಮಕ್ಕಳಿಗೆ ಹೇಳಿದ್ದನ್ನು ಶ್ರೀ ಅರವಿಂದಾಶ್ರಮ ಪ್ರಕಟಿಸಿದ "ಅನನ್ಯಳಾದ ಚಿಕ್ಕ ಬಾಲಿಕೆ" ಎಂಬ ಗ್ರಂಥದಿಂದ ಆಯ್ದು ಪುನರ್ಮುದ್ರಿಸಿದ್ದು.)

ಶ್ರೀ ಅರವಿಂದರನ್ನು ಭೇಟಿ ಮಾಡಲು ಮಧುರ ಮಾತೆಯವರು ಮಾರ್ಚ 1914ರಲ್ಲಿ ಪ್ಯಾರಿಸ್‌ನಿಂದ ಪ್ರಯಾಣ ಕೈಕೊಂಡರು.

ಅವರು ಕೊಲಂಬೋ ತಲುಪಿ ಅಲ್ಲಿಂದ ರೈಲುಗಾಡಿಯಲ್ಲಿ ಪ್ರಯಾಣವನ್ನು ಮುಂದುವರಿಸಿದರು. ಪಾಂಡಿಚೇರಿಯಲ್ಲಿ ಅವರು 'ರು ಫ್ರಾನ್ಸಿಸ್ ಮಾರ್ಟಿನ'ದಲ್ಲಿದ್ದ ಶ್ರೀ ಅರವಿಂದರು ವಾಸಿಸುತ್ತಿದ್ದ ಮನೆಯನ್ನು ತಲುಪಿದರು, ಅಲ್ಲಿದ್ದ ಚಿಕ್ಕ ಅಟ್ಟದ



ಮೇಲೇರಿ ಹೋದರು. ಆ ಮನೆ ಈಗ ಕ್ರೀಡಾಂಗಣದ ಬಳಿ ಇರುವ ಅತಿಥಿ ಗೃಹವಾಗಿದೆ. ಆ ಮನೆಯಲ್ಲಿ ಮಧುರ ಮಾತೆಯವರು ಶ್ರೀ ಅರವಿಂದರನ್ನು ಮೊದಲ ಸಲ ನೋಡಿದರು, ತಮಗೆ ಬಾಲ್ಯದಲ್ಲಾಗುತ್ತಿದ್ದ ದರ್ಶನಗಳಲ್ಲಿ ತಾವು ಶ್ರೀಕೃಷ್ಣ ಎಂದು ಕರೆಯುತ್ತಿದ್ದ ವ್ಯಕ್ತಿಯೇ ಶ್ರೀ ಅರವಿಂದರಾಗಿದ್ದರು. ಶ್ರೀ ಅರವಿಂದರು ಅವರಿಗಾಗಿ ಕಾದುಕೊಂಡಿದ್ದರು, ಆ ದಿನ ಮಾರ್ಚ 29, 1914 ಆಗಿತ್ತು.

ಅಲ್ಲಿ ಹತ್ತಿರವಿದ್ದ ಬಾಡಿಗೆ ಮನೆಯಲ್ಲಿ ವಾಸಿಸತೊಡಗಿದರು. ಆ ಮನೆ ಈಗ Archives Office ಆಗಿದೆ. ಶ್ರೀ ಅರವಿಂದರು ಸಾಯಂಕಾಲ ತಮ್ಮ ಮನೆಯ ಜಗುಲಿ(Veranda)ಯಲ್ಲಿ ಅತ್ತಿಂದಿತ್ತ ಅಡ್ಡಾಡುತ್ತಿದ್ದುದನ್ನು ಅವರು ತಮ್ಮ ಮನೆಯ ಮೇಲ್ಮಾಳಿಗೆಯಿಂದ ನೋಡುತ್ತಿದ್ದರು. ಹಗಲು ಹೊತ್ತಿನಲ್ಲಿ ಶ್ರೀ ಅರವಿಂದರನ್ನು ಭೇಟಿ ಮಾಡಲು ಹೋಗುತ್ತಿದ್ದರು. ಇತರರು ಶ್ರೀ ಅರವಿಂದರೊಡನೆ ಮಾತನಾಡುತ್ತಿದ್ದಾಗ ಮಧುರ ಮಾತೆಯವರು ಅಚಂಚಲರಾಗಿ ಮೌನದಿಂದ ಕುಳಿತುಕೊಂಡು ಶ್ರೀ ಅರವಿಂದರಿಂದ ಹೊರಸೂಸುತ್ತಿದ್ದ ಶಾಂತಿಯ ಮೇಲೆ ಏಕಾಗ್ರಚಿತ್ತರಾಗುತ್ತಿದ್ದರು. "'ಇದು ಪರಿಪೂರ್ಣವಾಗಿ ಅದ್ಭುತವಾದದ್ದು' ಎಂದು ನನಗೆ ನಾನೇ ಹೇಳಿಕೊಳ್ಳುತ್ತಿದ್ದೆ ಮತ್ತು ಈ ಅಮೂಲ್ಯ ಕಾಣಿಕೆಯನ್ನು ಕಾಳಜಿಯಿಂದ ರಕ್ಷಿಸಿಕೊಂಡು ಹೋಗಲು ಏಕಾಗ್ರಚಿತ್ತಳಾಗಿರುತ್ತಿದ್ದೆ. ಆಗಿನಿಂದ ಅದು ಯಾವಾಗಲೂ ನನ್ನೊಂದಿಗೆ ಉಳಿದುಕೊಂಡಿದೆ."

*

ಎ.ಬಿ. ಪುರಾಣಿ ಅವರು ರಚಿಸಿದ "ಶ್ರೀಅರಬಿಂದೋ ಅವರ ದರ್ಶನದ ಕೆಲವು ಮುಖಗಳು – ಹೊಸ ಯುಗದ ಅರುಣೋದಯ" Bhavan's Book University ಗ್ರಂಥದಿಂದ ಆಯ್ದು ಪುನರ್ಮುದ್ರಿಸಿದ್ದು:

ಶ್ರೀ ರಾಮಕೃಷ್ಣರು ಭಾರತದಲ್ಲಿ ಹೊಸ ಆಧ್ಯಾತ್ಮಿಕತೆಗೆ ಜನ್ಮ ನೀಡಿದರು, ಅದನ್ನು ಅದರ ಎಲ್ಲ ಬಾಹ್ಯ ರೂಪಗಳಿಂದ ಮುಕ್ತಗೊಳಿಸಿದರು ಮತ್ತು ಅನುಭವವೇ ಅಗ್ನಿಪರೀಕ್ಷೆ (acid test) ಎಂದು ಒತ್ತಿ ಹೇಳಿದ್ದರು. ತಮ್ಮ ಅನುಭವದ – ಅದನ್ನು ಸಿದ್ಧಿ ಎಂದು ಕರೆಯಬಹುದು – ಆಧಾರದ ಮೇಲಿಂದ ಅವರು ಎಲ್ಲ ಧರ್ಮಗಳ ಏಕತೆ ಕುರಿತು ಸಾರಿ ಹೇಳಿದರು. ಶ್ರೀ ಅರವಿಂದರು ಭೂತಕಾಲ ಮತ್ತು ಭವಿಷ್ಯತ್ತಿನ ನಡುವೆ ಸಂಬಂಧಕ(link)ವನ್ನು ಒದಗಿಸುತ್ತಾರೆ ಮತ್ತು ಮಾನವ ಕುಲ ತನ್ನ ಜೀವನವನ್ನು ಸರ್ವವ್ಯಾಪಿಯಾದ ದೈವೀ ನೈಜತೆಯ

ಆಧಾರದ ಮೇಲೆ ನಿರ್ಮಾಣ ಮಾಡಲೆಂದು ಆಶಿಸುತ್ತಾರೆ. ಅವರ ದೃಷ್ಟಿಯಲ್ಲಿ ಜೀವನ ಮತ್ತು ಭಗವಂತ ಪರಿಪೂರ್ಣವಾಗಿ ಸುಸಂಗತವಾಗಿರುವುದು ಸಾಧ್ಯವಿದೆ, ದೈವೀ ಪ್ರಕಟಣೆಗೆ ಪೃಥ್ವಿ ಯೋಗ್ಯವಾಗಿದೆ. ಮಾನವ ಮನೋಧರ್ಮ ಭಗವಂತನಿಂದ ಪ್ರತ್ಯೇಕಗೊಂಡಿರುವುದು ಮಾನವ ಅಜ್ಞಾನಕ್ಕೆ ಕಾರಣವಾಗಿದೆ, – ದೈವೀಸತ್ಯದತ್ತ ಮಾನವ ಆತ್ಮದ ಬೆಳವಣಿಗೆಗಾಗಿ ತೆರೆದುಕೊಳ್ಳುತ್ತಿರುವ ವಿಶ್ವದಲ್ಲಿ ಈ ಅಜ್ಞಾನದ ಸ್ಥಿತಿ ಸಂಕ್ರಮಣಕ್ಕೊಳಗಾಗುವಂತಹದು, ಇಲ್ಲವೆ ಸಾಗಿ ಹೋಗಲಿರುವ ಹಂತ. ವಿಶ್ವ ಮತ್ತು ದೈವೀ ನೈಜತೆ ಇವು ನಿಶ್ಚಲವಾಗಿಲ್ಲ, ಆದರೆ ಅವು ಕ್ರಿಯಾಶೀಲವಾಗಿವೆ ಮತ್ತು ಉತ್ಕ್ರಾಂತಿ ಎಂದರೆ ಅದು ಅಚೇತನದಲ್ಲಿ ತೊಡಗಿಕೊಂಡಿರುವ ಭಗವಂತ ತನ್ನನ್ನು ತೆರೆದುಕೊಳ್ಳುವ ವಿಧಾನ ಎಂಬುದನ್ನು ಅವರು ದೃಢೀಕರಿಸುತ್ತಾರೆ:

"ಪಶು ಜೀವಂತವಿರುವ ಪ್ರಯೋಗಶಾಲೆ, ಅದರಲ್ಲಿ ಪ್ರಕೃತಿ ಮನುಷ್ಯ ಹೊರಬರುವಂತೆ ಕಾರ್ಯಕೈಕೊಂಡಿತು. ಮನುಷ್ಯನೇ ಸ್ವತಃ ಯೋಚಿಸುವ ಹಾಗೂ ಜೀವಂತವಿರುವ ಪ್ರಯೋಗಶಾಲೆಯಾಗಿದ್ದಾನೆ. ಅವನಲ್ಲಿ ಹಾಗೂ ಅವನ ಸಹಕಾರದಿಂದ ಪ್ರಕೃತಿ ಅತಿಮಾನವನನ್ನು ಇಲ್ಲವೆ ದೇವನನ್ನು ಹೊರತರುವ ಸಂಕಲ್ಪ ಮಾಡಿದೆ. ಇಲ್ಲವೆ, ಅದಕ್ಕೂ ಹೆಚ್ಚಾಗಿ, ಭಗವಂತನನ್ನು ಪ್ರಕಟಿಸುವುದಕ್ಕಾಗಿ ಸಂಕಲ್ಪ ಮಾಡಿದೆ ಎಂದು ಏಕೆ ಹೇಳಬಾರದು?"

**– ಶ್ರೀ ಅರವಿಂದರು**

*

ರಿಷಭಚಂದ ರಚಿಸಿದ 'ಶ್ರೀ ಅರವಿಂದರು – ಅವರ ಅನನ್ಯ ಜೀವನ' ಗ್ರಂಥ (1981ರ ಆವೃತ್ತಿ, ಪು. 398) ದಿಂದ ಆಯ್ದ ಭಾಗ.

ಪ್ರಭು (ಶ್ರೀ ಅರವಿಂದರು) ವಿನೊಂದಿಗೆ 29/3/1914 ರಂದು ಆದ ಶ್ರೀಮಾತೆ–ಯವರ ಭೇಟಿ ಅಳತೆ ಮೀರಿದಷ್ಟು ಭವ್ಯವಾದ ಆಧ್ಯಾತ್ಮಿಕ ಪ್ರಾಮುಖ್ಯತೆಯನ್ನು ಹೊಂದಿತ್ತು, ಅದು ಯುಗಪ್ರವರ್ತಕ ಘಟನೆ, ಮನುಷ್ಯನ ಆಧ್ಯಾತ್ಮಿಕ ಸಂಸ್ಕೃತಿಯಲ್ಲಿ ಒಂದು ಹೆಗ್ಗುರುತು. ಅದು ಹೊಸ ಕ್ರಿಯಾಶೀಲ ಆಧ್ಯಾತ್ಮಿಕ ಯುಗದ ಉದ್ಘಾಟನೆ ಮಾಡಿತು, ಇತಿಹಾಸಕ್ಕೆ ಹಾಗೂ ಮಾನವ ಕುಲಕ್ಕೆ ಅಪರಿಚಿತವಾಗಿದ್ದ ಚಲನೆಯೊಂದನ್ನು ಪ್ರಾರಂಭಿಸಿತು. ಮನುಷ್ಯನನ್ನು ಅವನ ಮನಸ್ಸಿನ ನಸುಬೆಳಕಿನಿಂದ ಅತಿಮಾನಸದ ದೈವೀಪ್ರಕಾಶ ಹಾಗೂ ಶಕ್ತಿಯ ಅನಂತ ದಿವ್ಯಪ್ರಕಾಶ ಇರುವಲ್ಲಿಗೆ ಕರೆದೊಯ್ಯುವ ಮಣಿಹದ ಈಡೇರಿಕೆಗಾಗಿ



ದಣಿದುಕೊಳ್ಳದ ಸಹಕಾರದತ್ತ ಅದು ಕೊಂಡೊಯ್ದಿತು. ಬಹುಕಾಲದಿಂದ ಅಸ್ತಿತ್ವದಲ್ಲಿದ್ದ ಕ್ರಿಯೆಯ ಜಗತ್ತಿನಿಂದ ವೈರಾಗ್ಯದಿಂದ ಹಿಂದೆ ಸರಿದುಕೊಳ್ಳುವ ಒಲವಿನ ರೂಢಿಗತ ಮುಖವಾಡವನ್ನು ಕಿತ್ತೆಸೆಯಲಾಯಿತು, ಆ ಒಲವನ್ನು ಸಮಗ್ರ ಆಧ್ಯಾತ್ಮಿಕತೆಯ ಪ್ರಕಾಶದೆಡೆಗೆ ತೆರೆದಿರಿಸಲಾಯಿತು ಮತ್ತು ಹಳೆಯ ಒಲವನ್ನು ಭೂತಕಾಲದ ಅಧೋಲೋಕದಲ್ಲಿ ಎಸೆಯಲಾಯಿತು. ಜೀವನವನ್ನು ದೃಢೀಕರಿಸಲಾಯಿತು ಮತ್ತು ಅದನ್ನು ದೈವೀ ಪ್ರಕಟಣೆಯ ಕ್ಷೇತ್ರವೆಂದು ಸ್ವೀಕರಿಸಲಾಯಿತು, ಬಹಳ ಕಾಲದಿಂದ ಭದ್ರವಾಗಿ ನೆಲೆವೂರಿದ ಅಚೇತನ ಹಾಗೂ ಅವಿದ್ಯೆಯ ಸಾಮರ್ಥ್ಯಗಳೊಡನೆ ಕೈ ಕೈ ಮಿಲಾಯಿಸುವಿಕೆ ತನ್ನ ವಿನಾಶಕಾರಿ ವೃತ್ತಿಯನ್ನು ಪ್ರಾರಂಭಿಸಿತು. ಜಗತ್ತಿನಲ್ಲಿಯ ಜೀವನವನ್ನು ದುಃಖಕ್ಕೀಡುಮಾಡಿದ ಅಂಧಕಾರದ, ವೇದನೆಯ ಮತ್ತು ಮೃತ್ಯುವಿನ ಸಾರ್ವಭೌಮತ್ವವನ್ನು ಅತಿಮಾನಸ ಪ್ರಕಾಶವಿರುವ ದೈವೀಶಕ್ತಿ ಮಾತ್ರ ತೊಡೆದು ಹಾಕಬಲ್ಲದು. ಆ ಅತಿಮಾನಸವನ್ನು ಕೆಳಗಿಳಿಸಿ ತರಲಾಯಿತು ಮತ್ತು ಭವಿಷ್ಯತ್ತನ್ನು ರೂಪಿಸುವ ಕಾರ್ಯದಲ್ಲಿ ಹಾಗೂ ಮನುಕುಲದ ಅದೃಷ್ಟವನ್ನು ಸಿದ್ಧಿಸಿಕೊಳ್ಳುವುದರಲ್ಲಿ ಅದನ್ನು ತೊಡಗಿಸಲಾಯಿತು. ಪೃಥ್ವಿ ಸ್ವರ್ಗವನ್ನು ಸ್ವೀಕರಿಸಲು ತಯಾರಾಯಿತು. ದಿವ್ಯಾತ್ಮ ಭೌತದ್ರವ್ಯವನ್ನು ಅಪ್ಪಿಕೊಳ್ಳಲು ಅವರೋಹಣ ಮಾಡಿತು.

*

## ಅಖಿಲ ಭಾರತ ಪತ್ರಿಕೆ

**ಸಂಪಾದಕರು**
ಡಾ॥ ಕೆ.ಎಸ್. ಆಮೂರ
ಎಂ.ಎಸ್‌ಸಿ, ಪಿಎಚ್‌ಡಿ,
ಶಿವಗಿರಿ, ಧಾರವಾಡ – 580 007.
ಫೋನ್ : 0836 – 2774044

**ಪರಿಶೀಲನಾ ಸಮಿತಿ, ಧಾರವಾಡ**
ಡಾ॥ ಗುರುಲಿಂಗ ಕಾಪಸೆ
ಡಾ॥ ಪಾರ್ವತಿ ನಾರಾಯಣರಾವ್
ಡಾ॥ ಸುಶೀಲಾ ಬಳುಂಡಗಿ

**ಡಿ.ಟಿ.ಪಿ**
ಗಣಕಯಂತ್ರ ಕೇಂದ್ರ
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಆಫ್‌ಸೆಟ್ ಮುದ್ರಣ :**
ಶೇಷ ಸಾಯಿ ಇ ಫಾರ್ಮ್ಸ್ ಪ್ರೈ.ಲಿ.
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಕಾಶಕರು :**
ಶ್ರೀ ಅಜಿತ್ ಸಬ್ನೀಸ್,
ಕಾರ್ಯಾಧ್ಯಕ್ಷರು, ಶ್ರೀ ಅರವಿಂದೋ
ಸೊಸೈಟಿ ರಾಜ್ಯ ಸಮಿತಿ, ಕರ್ನಾಟಕ,
"ಶ್ರೀ ಅರವಿಂದ ಮಾರ್ಗ"
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು – 560 078.

**ಪ್ರಾಯೋಜಕರು :**
ಶ್ರೀ ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್ (ರಿ)
ಜೆ.ಪಿ. ನಗರ, ಮೊದಲನೇ ಹಂತ,
ಬೆಂಗಳೂರು–560078.
ಫೋನ್ : 080 – 2244 9882
http://abp.sirinudi.org

**ಬೆಲೆ : 15/–**


## ಪರಿವಿಡಿ

### "ಕ್ರಿಯಾತ್ಮಕ ಆಧ್ಯಾತ್ಮಿಕತೆ"
### (ಶ್ರೀ ಅರವಿಂದರ ಹಾಗೂ ಶ್ರೀಮಾತೆಯವರ ನುಡಿಗಳು)


**ಅನು : ಶ್ರೀ ಪುರುಷೋತ್ತಮ ಗಲಗಲಿ**

ನಿಶ್ಚಲ ಆಧ್ಯಾತ್ಮಿಕತೆ ಹಾಗೂ ಕ್ರಿಯಾತ್ಮಕ ಆಧ್ಯಾತ್ಮಿಕತೆ 3

**ಅನು : ಡಾ. ಕೆ.ಎಸ್. ಆಮೂರ**

ಕ್ರಿಯಾತ್ಮಕ ಆಧ್ಯಾತ್ಮಿಕತೆ – ಶಾಶ್ವತತೆಯತ್ತ ಇನ್ನೊಂದು ಹೆಜ್ಜೆನ ಹೆಜ್ಜೆ 6

ಆಧ್ಯಾತ್ಮಿಕತೆ ಎಂದರೇನು? 10

ಕ್ರಿಯಾತ್ಮಕ ಆಧ್ಯಾತ್ಮಿಕತೆ: ದೈವೀ ಜೀವನದಲ್ಲಿ ಒಂದು ಬೆಳವಣಿಗೆ 12

ನಿರ್ವಾಣ – ದೈವೀ ಜೀವನದತ್ತ ಒಂದು ಹೆಜ್ಜೆ 14

**ಅನು : ಶ್ರೀ ವೀರೇಂದ್ರ ಸಿಂಪಿ**

ಅಹಂಕಾರದ ಸ್ಥಾನದಲ್ಲಿ ದೈವೀ ಪ್ರಜ್ಞೆಯನ್ನು ಸ್ಥಾಪಿಸಿರಿ 16

**ಅನು : ದಿ॥ ಎಂ. ಕೇಶವ ಭಟ್ಟ**

ಕ್ರಿಯಾತ್ಮಕ ಆಧ್ಯಾತ್ಮಿಕತೆಯನ್ನು ಜೀವನಕ್ಕೆ ಅನ್ವಯಿಸುವುದು 18

**ಅನು : ಡಾ. ಕೆ.ಎಸ್. ಆಮೂರ**

ಮನುಕುಲದ ಎಲ್ಲ ಪ್ರಶ್ನೆಗಳಿಗೆ ಉತ್ತರ 25

ಸಮಗ್ರ ಯೋಗವೆಂದರೇನು? 28

ಆಧ್ಯಾತ್ಮಿಕ ಜೀವನವನ್ನು ಜೀವಿಸುವುದು ಹೇಗೆ? 31

ಆಧ್ಯಾತ್ಮಿಕ ಪುನರ್ಜನ್ಮ 35

**ಅನುಬಂಧ :**

**ಜನವರಿ ಸಂಚಿಕೆಯಲ್ಲಿ ಪ್ರಕಟವಾಗಬೇಕಿದ್ದ ವಿಷಯಗಳು**

ಮನಸ್ಸಿನಲ್ಲಿ ನಿಶ್ಚಲ ನೀರವತೆಯನ್ನು ಸ್ಥಾಪಿಸುವುದು ಹೇಗೆ? 37

ಹೃದಯದ ಶುದ್ಧೀಕರಣ 40

ಶುದ್ಧೀಕರಣ ಹಾಗೂ ಏಕಾಗ್ರತೆ – ಇವೆರಡೂ ಅವಶ್ಯವಾಗಿವೆ 43

ಸ್ವಭಾವವನ್ನು ಪರಿಶುದ್ಧಗೊಳಿಸಲು ಮತ್ತು ತಯಾರು ಮಾಡಲು ಸರಳತರ ಸಾಧನ 45

ಭರವಸೆ ನೀಡುವ ಒಂದು ಶಬ್ದ 47

**ವಾರ್ತಾಪತ್ರ** 49


ಆಧ್ಯಾತ್ಮಿಕತೆಯಷ್ಟೇ ಸಾಲದು, ಅದು ಅಸಂಖ್ಯಾತ ಜನರನ್ನು ಸ್ವರ್ಗಕ್ಕಾಗಿ ತಯಾರು ಮಾಡುತ್ತದೆ, ಆದರೆ ಪೃಥ್ವಿಯನ್ನು ಅದಿದ್ದ ಹಾಗೆ ಇರಲು ಬಿಟ್ಟುಕೊಡುತ್ತದೆ.

**(16/393)** — **ಶ್ರೀ ಅರವಿಂದರು**

*

## ಅಖಿಲ ಭಾರತ ಪತ್ರಿಕೆ
### ಮಾರ್ಚ 2014

ಭೌತದ್ರವ್ಯ ದಿವ್ಯಾತ್ಮನ ಮುಖವನ್ನು ತೆರೆದು ತೋರಿಸುವುದು.

**– ಶ್ರೀ ಅರವಿಂದರು**

*

ಶ್ರೀಮಾತೆಯವರು ಪಾಂಡಿಚೇರಿಯಲ್ಲಿ ಶ್ರೀ ಅರವಿಂದರನ್ನು ಮಾರ್ಚ 29, 1914ರಂದು ಮೊದಲ ಸಲ ಭೇಟಿ ಮಾಡಿ ನೂರು ವರ್ಷಗಳಾದ ನಿಮಿತ್ತ ಹೊರಡಿಸಿದ ವಿಶೇಷ ಸಂಚಿಕೆ.

ಆ ಭೇಟಿ ಕ್ರಿಯಾತ್ಮಕ ಆಧ್ಯಾತ್ಮಿಕತೆಯ ಹೊಸ ಯುಗ ಪ್ರಾರಂಭವಾಗುವಂತೆ ಮಾಡಿತು ಮತ್ತು ಅದು ಪೃಥ್ವಿಯ ಮೇಲೆ ಪರಾಕಾಷ್ಠೆ ಕಂಡುಕೊಳ್ಳಲಿದೆ.

ನಾವು ಎದುರು ನೋಡುತ್ತಿರುವ ಆದರ್ಶದ ಸೂತ್ರ "ದೈವಿಕವಾದ ದೇಹದಲ್ಲಿ ದೈವೀ ಜೀವನ" ಎಂದು ಶ್ರೀ ಅರವಿಂದರು ಹೇಳಿದ್ದಾರೆ.

*

ಶ್ರೀ ಅರವಿಂದರ ಹಾಗೂ ಶ್ರೀಮಾತೆಯವರ ನುಡಿಗಳಿಂದ ಆಯ್ದ ಈ ಸಂಕಲನದಿಂದ ದೈವೀ ಜೀವನದಲ್ಲಿ ಬೆಳೆಯಲು ಓದುಗ ಕ್ರಿಯಾತ್ಮಕ ಆಧ್ಯಾತ್ಮಿಕತೆಯ ಸ್ಪರ್ಶ ಪಡೆಯುವನೆಂದು ನಾವು ಆಶಿಸುತ್ತೇವೆ.

*

## ನಿಶ್ಚಲ ಆಧ್ಯಾತ್ಮಿಕತೆ ಹಾಗೂ ಕ್ರಿಯಾತ್ಮಕ ಆಧ್ಯಾತ್ಮಿಕತೆ

"ದೈವೀ ಸತ್ಯವನ್ನು ಕಂಡುಕೊಳ್ಳಲು ಪೃಥ್ವಿಯನ್ನು ತ್ಯಜಿಸಿ ಹೋಗಬೇಕಾಗಿಲ್ಲ, ಮನುಷ್ಯ ತನ್ನ ಆತ್ಮವನ್ನು ಕಂಡುಕೊಳ್ಳುವುದಕ್ಕಾಗಿ ಪ್ರಾಣತ್ಯಾಗ ಮಾಡಬೇಕಾಗಿಲ್ಲ, ಭಗವಂತನೊಡನಿರುವ ಸಂಬಂಧದಲ್ಲಿ ಪ್ರವೇಶಿಸಲು ಜಗತ್ತನ್ನು ಕೈಬಿಡಬೇಕಾಗಿಲ್ಲ ಇಲ್ಲವೆ ಸೀಮಿತ ನಂಬಿಕೆಗಳನ್ನು ಹೊಂದಿರಬೇಕಾಗಿಲ್ಲ. ಭಗವಂತ ಎಲ್ಲೆಡೆಯಲ್ಲಿ, ಎಲ್ಲ ವಸ್ತು–ವಿಷಯಗಳಲ್ಲಿ ಇದ್ದಾನೆ, ಮತ್ತು ಅವನು ಮರೆಯಲ್ಲಿದ್ದರೆ ಅದಕ್ಕೆ ಕಾರಣ ಅವನನ್ನು ಶೋಧಿಸಲು ನಾವು ತೊಂದರೆ ತೆಗೆದುಕೊಳ್ಳುವುದಿಲ್ಲ" ಎಂದು ಹೇಳಲು ಶ್ರೀ ಅರವಿಂದರು ಬಂದಿದ್ದಾರೆ.

ನಿಷ್ಕಪಟವಾದ ಅಭೀಪ್ಸೆಯ ಮೂಲಕ ನಾವು ನಮ್ಮೊಳಗಿರುವ ಮುದ್ರೆ ಜಡಿದ ಬಾಗಿಲೊಂದನ್ನು ಸರಳವಾಗಿ ತೆರೆಯಬಲ್ಲೆವು ಮತ್ತು ದೈವಿಕವಾದ ಏನೋ ಒಂದನ್ನು ಕಂಡುಕೊಳ್ಳುವೆವು. ಅದು ಜೀವನದ ಇಡೀ ಪ್ರಾಮುಖ್ಯತೆಯನ್ನು ಬದಲು ಮಾಡುವುದು, ...

*

ಒಂದಾನೊಂದು ಕಾಲವಿತ್ತು, ಬಹಳ ಹಿಂದಿನದಲ್ಲ. ಆಗ ಮನುಷ್ಯರ ಆಧ್ಯಾತ್ಮಿಕ ಅಭೀಪ್ಸೆ ನಿಶ್ಚಲ ನೀರವತೆಯಲ್ಲಿರುವ, ನಿಷ್ಕ್ರಿಯ ಶಾಂತಿಯತ್ತ ಹೊರಳಿಕೊಂಡಿತ್ತು, ಅದು ಜಗತ್ತಿನ ಎಲ್ಲ ಪ್ರಾಪಂಚಿಕ ವಿಷಯಗಳಿಂದ ದೂರವಾಗಿತ್ತು, ಜೀವನದಿಂದ ಓಡಿ ಹೋಗುವುದಾಗಿತ್ತು, ಅದು ನಿಖರವಾಗಿ ಸಮರವನ್ನು ತಪ್ಪಿಸಿಕೊಳ್ಳುವುದಾಗಿತ್ತು, ಎಲ್ಲ ಹೋರಾಟದ ಮೇಲ್ಗಡೆ ಸಾಗುವುದಾಗಿತ್ತು, ಎಲ್ಲ ಪ್ರಯತ್ನದಿಂದ ದೂರ ಉಳಿದುಕೊಳ್ಳುವುದಾಗಿತ್ತು, ಎಲ್ಲ ರೂಪದ ವೇದನೆಗಳು ಅಲ್ಲಿ ನಿಂತು ಹೋಗುತ್ತಿದ್ದವು ಮತ್ತು ಇಂತಹದನ್ನು ನಿಜವಾದ ಆಧ್ಯಾತ್ಮಿಕ ಹಾಗೂ ದೈವಿಕ ಅಭಿವ್ಯಕ್ತಿ ಎಂದು ಪರಿಗಣಿಸಲಾಗುತ್ತಿತ್ತು. ತಳಮಳವಿರುವ, ದುಗುಡವಿರುವ, ರಕ್ತದ ಒತ್ತಡವಿರುವ ಇಂದಿನ ಈ ಯುಗದಲ್ಲಿಯೂ ಕೂಡ ಈ ಸಾರ್ವಭೌಮ ಶಾಂತಿ ದೊರಕಿಸಬಹುದಾದ ಅತ್ಯಂತ ಸಹಾಯಕವಾದ ವಿಷಯ, ಅತ್ಯಂತ ಸ್ವಾಗತಾರ್ಹವಾದದ್ದು, ಜನರು ಬೇಡಿ ದೊರಕಿಸುವ ಭರವಸೆ ಹೊಂದಿರುವಂತಹದು. ಬಹಳಷ್ಟು ಜನರಿಗೆ ಅದಿನ್ನೂ ದೈವೀ ಮಧ್ಯಸ್ಥಿಕೆ ಹಾಗೂ ದೈವೀ ಕೃಪೆ ಇರುವುದರ ನಿಜವಾದ ಕುರುಹಾಗಿದೆ.



ವಾಸ್ತವದಲ್ಲಿ ಮನುಷ್ಯ ಸಿದ್ಧಿಸಿಕೊಳ್ಳಬಯಸುತ್ತಿರುವುದು ಏನೇ ಆಗಿರಲಿ, ಅವನು ಈ ಪರಿಪೂರ್ಣ, ಬದಲಾಗದ ಶಾಂತಿಯನ್ನು ಸ್ಥಾಪಿಸಿಕೊಳ್ಳುವುದರಿಂದ ಪ್ರಾರಂಭಿಸಬೇಕು, ಕಾರ್ಯ ಕೈಕೊಳ್ಳಲು ಅದು ಅವನಿಗೆ ಆಧಾರ ಒದಗಿಸುತ್ತದೆ. ಅವನು ಪ್ರತ್ಯೇಕ, ವೈಯಕ್ತಿಕ ಹಾಗೂ ಅಹಂಕಾರಯುಕ್ತ ಮುಕ್ತಿಯ ಕನಸಿನಲ್ಲಿ ಇರದಿದ್ದರೆ ಅಲ್ಲಿಗೆ ನಿಲ್ಲಲಾರನು. ದೈವೀ ಕೃಪೆಯ ಇನ್ನೊಂದು ಅಂಶವಿದೆ, ಅದು ಪ್ರಗತಿ ಕುರಿತಾದ ಅಂಶ, ಅದು ಎಲ್ಲ ಅಡೆತಡೆಗಳ ಮೇಲೆ ಜಯ ಸಾಧಿಸುತ್ತದೆ. ಮಾನವ ಕುಲವನ್ನು ಒಂದು ಹೊಸ ಸಿದ್ಧಿಯತ್ತ ಮುಂದೂಡುತ್ತದೆ ಮತ್ತು ಆ ದೈವೀ ಸಿದ್ಧಿಯಿಂದ, ಆಯ್ದ ಕೆಲವರಷ್ಟೇ ಲಾಭ ಪಡೆದುಕೊಳ್ಳುವಂತಾಗುವುದಿಲ್ಲ, ಆದರೆ ಆ ಕೆಲವರ ಪ್ರಭಾವದಿಂದ, ಉದಾಹರಣೆಯಿಂದ ಹಾಗೂ ಸಾಮರ್ಥ್ಯದಿಂದ ಮನುಕುಲದ ಇತರರನ್ನು ಹೊಸ ಹಾಗೂ ಹೆಚ್ಚು ಉತ್ತಮ ಸ್ಥಿತಿಗಳಿಗೆ ತರುವುದು ಕೂಡ ಸಾಧ್ಯವಾಗುತ್ತದೆ.

ಮಾನವ ಕುಲದ ಒಂದು ಇಡಿಯಾದ ಭಾಗ ಪ್ರಜ್ಞಾಪೂರ್ವಕವಾಗಿ ಇಲ್ಲವೆ ಪ್ರಜ್ಞಾರಹಿತವಾಗಿ ಹೊಸ ಶಕ್ತಿಗಳಿಗೆ ತೆರೆದುಕೊಂಡಾಗ, ಉಚ್ಚತರ, ಹೆಚ್ಚು ಸಾಮರಸ್ಯವುಳ್ಳ, ಹೆಚ್ಚು ಪರಿಪೂರ್ಣವಾದ ಜೀವನದಲ್ಲಿ ಎತ್ತಿ ಹಿಡಿಯಲ್ಪಟ್ಟಾಗ ಅದು ಭವಿಷ್ಯತ್ತಿನಲ್ಲಿ ಸಿದ್ಧಿಯ ಹಾಗೂ ಈಗಾಗಲೇ ಪೂರ್ವಭಾವಿಯಾಗಿ ಕಂಡುಕೊಂಡ ಮಾರ್ಗಗಳನ್ನು ತೆರೆದಿರಿಸುತ್ತದೆ. ... ವ್ಯಕ್ತಿಗತ ಪರಿವರ್ತನೆಗೆ ಯಾವಾಗಲೂ ಅನುಮತಿ ದೊರಕದೆ ಇದ್ದಾಗಲೂ ಇಲ್ಲವೆ ದೊರಕಿದಾಗಲೂ ಅಲ್ಲಿ ಒಂದು ಬಗೆಯ ಸಾರ್ವತ್ರಿಕ ಮೇಲಕ್ಕೆತ್ತಿ ಹಿಡಿಯುವಿಕೆ ಹಾಗೂ ಸಾಮರಸ್ಯ–ಗೊಳಿಸುವಿಕೆಗಳಿರುತ್ತವೆ, ಅದು ಒಂದು ಹೊಸ ವ್ಯವಸ್ಥಿತ ಕ್ರಮ, ಹೊಸ ಸಾಮರಸ್ಯ ಸ್ಥಾಪಿತಗೊಳ್ಳುವಂತೆ, ಅವ್ಯವಸ್ಥೆ ಹಾಗೂ ಹೋರಾಟಗಳಿರುವ ಸದ್ಯದ ತಳಮಳ ಮಾಯವಾಗುವಂತೆ ಮತ್ತು ಅದರ ಸ್ಥಾನದಲ್ಲಿ ಇಡಿಯಾದ ಸಾಮರಸ್ಯ ಕಾರ್ಯ ನೆರವೇರಿಸುವಂತೆ ಮಾಡುತ್ತದೆ.

ಇನ್ನೂ ಬೇರೆ ಪರಿಣಾಮಗಳಿರುತ್ತವೆ, ಜೀವನದಲ್ಲಿ ಮನಸ್ಸಿನ ಮಧ್ಯಸ್ಥಿಕೆ ಸೃಷ್ಟಿಸಿದ್ದನ್ನು ವಿರುದ್ಧ ದಿಶೆಯಲ್ಲಿ ನಾಶಮಾಡುವ ಪ್ರವೃತ್ತಿಯನ್ನು ಅವು ಹೊಂದಿರುತ್ತವೆ. ಆ ಸೃಷ್ಟಿಯಲ್ಲಿ ವಿಕಾರಗಳು, ಕುರೂಪಗಳು, ವಿಕೃತಿಗಳ ಇಡೀ ಮೊತ್ತ ಇವೆಲ್ಲ ಇರುತ್ತವೆ, ಇವು ವೇದನೆಯನ್ನು, ವಿಷಣ್ಣತೆಯನ್ನು, ನೈತಿಕ ಬಡತನವನ್ನು, ಮಾನವ ಜೀವನವನ್ನು ಭಯಾನಕವಾಗಿಸುವ ತುಚ್ಛ ಹಾಗೂ

ಜುಗುಪ್ಸೆ ತರಿಸುವ, ದುಃಖ ಉಂಟುಮಾಡುವ ಇಡೀ ಕ್ಷೇತ್ರವನ್ನು ಹೆಚ್ಚಿಸಿವೆ. ಅದು ಮಾಯವಾಗಬೇಕು.

*

**ಪ್ರಶ್ನೆ :** ಮಧುರ ಮಾತೆಯವರೆ, ಕ್ರಿಯಾತ್ಮಕ ಸಿದ್ಧಿ ಎಂದರೇನು?

**ಶ್ರೀಮಾತೆ :** ಕ್ರಿಯೆಯಲ್ಲಿ ಅಭಿವ್ಯಕ್ತಗೊಳಿಸಲಾದ ಸಿದ್ಧಿಯಿದೆ. ನಿಷ್ಕ್ರಿಯೆಯಲ್ಲಿ ಸಾಧಿಸಬಹುದಾದ ಸಿದ್ಧಿಯಿದೆ, ನಿಶ್ಚಲವಾಗಿದ್ದುಕೊಂಡು ಧ್ಯಾನದಿಂದ ಹೊರಬರದೆ ದೊರಕಿಸುವ ಸಿದ್ಧಿಯಿದೆ. ಕ್ರಿಯಾತ್ಮಕ ಸಿದ್ಧಿಯಿದೆ, ಅದು ನಿಮ್ಮ ಎಲ್ಲ ಕ್ರಿಯೆಯನ್ನು, ಚಲನೆಗಳನ್ನು, ನೀವಿರುವ ರೀತಿಯನ್ನು, ಚಾರಿತ್ರ್ಯವನ್ನು ಪರಿವರ್ತನೆಗೆ ಒಳಪಡಿಸುತ್ತದೆ. ಮೊದಲಿನ ಸಂದರ್ಭದಲ್ಲಿ ಬಾಹ್ಯ ಸತ್ತೆ ಮೊದಲಿದ್ದ ಹಾಗೆ ಉಳಿದುಕೊಳ್ಳುತ್ತದೆ, ಅದರಲ್ಲಿ ಯಾವ ಬದಲಾವಣೆಯೂ ಆಗಿರುವುದಿಲ್ಲ ಮತ್ತು ಅದು ಕ್ರಿಯೆಯ ಎಲ್ಲ ಸಾಧ್ಯತೆಯನ್ನು ಹಾಳು ಮಾಡುತ್ತದೆ. ನಂತರ ಮನುಷ್ಯ ಏನನ್ನೂ ಮಾಡಲಾರ, ಕೇವಲ ಕುಳಿತುಕೊಂಡಿರುವ ಸ್ಥಿತಿಯಲ್ಲಿ ಉಳಿದುಕೊಳ್ಳುತ್ತಾನೆ. ಎರಡನೆಯ ಸಂದರ್ಭದಲ್ಲಿ ಅದು ಪ್ರತಿಯೊಂದನ್ನೂ ಬದಲಿಸುತ್ತದೆ, ನಿಮ್ಮ ಚಾರಿತ್ರ್ಯ, ನೀವಿರುವ ರೀತಿ, ಕಾರ್ಯ ಕೈಕೊಳ್ಳುವ ರೀತಿ, ನಿಮ್ಮೆಲ್ಲ ಕ್ರಿಯೆಗಳು, ನಿಮ್ಮ ಸುತ್ತುಮುತ್ತಲಿರುವುದೂ ಕೂಡ ಮತ್ತು ಕೊನೆಗೆ ನಿಮ್ಮ ಎಲ್ಲ ಅಸ್ತಿತ್ವ, ನಿಮ್ಮ ಇಡಿಯಾದ ಸತ್ತೆ ಇವೆಲ್ಲವನ್ನೂ ಬದಲಿಸುತ್ತದೆ: ಇದು ಕ್ರಿಯಾತ್ಮಕ ಸಿದ್ಧಿ, ಅದರ ಪರಾಕಾಷ್ಠೆ ದೇಹ ಪರಿವರ್ತನೆಗೆ ಒಳಗಾಗುವುದರಲ್ಲಿರುತ್ತದೆ.

ಕೆಲವು ಜನರು ತಮ್ಮ ಬುದ್ಧಿಮತ್ತೆಯನ್ನು ಪರಿವರ್ತನೆಗೆ ಒಳಪಡಿಸುವುದಕ್ಕಿಂತ ಮೊದಲು ದೇಹವನ್ನು ಪರಿವರ್ತನೆಗೆ ಒಳಪಡಿಸಲು ಪ್ರಯತ್ನಿಸುತ್ತಾರೆ, ಅದು ಸಂಪೂರ್ಣ ಪಲ್ಲಟತನವನ್ನುಂಟು ಮಾಡುತ್ತದೆ, ಅವರನ್ನು ಇಡಿಯಾಗಿ ಅಸಮತೋಲನಕ್ಕೆ ಒಳಪಡಿಸುತ್ತದೆ. ಮನುಷ್ಯ ಮೊದಲು ತನ್ನ ಚಿಂತನವನ್ನು, ತನ್ನೆಲ್ಲ ಮನಸ್ಸನ್ನು, ಮಾನಸಿಕ ಚಟುವಟಿಕೆಯನ್ನು ಪರಿವರ್ತನೆಗೆ ಒಳಪಡಿಸಬೇಕು, ಅದನ್ನು ಉಚ್ಚತರ ಜ್ಞಾನದಿಂದ ಸಂಘಟಿಸಬೇಕು; ಮತ್ತು ಅದೇ ಕಾಲಕ್ಕೆ ಅವನು ತನ್ನ ಚಾರಿತ್ರ್ಯವನ್ನು, ಪ್ರಾಣಿಕದ ಎಲ್ಲ ಚಲನೆಗಳನ್ನು, ಪ್ರಚೋದನೆಗಳನ್ನು ಹಾಗೂ ಪ್ರತಿಕ್ರಿಯೆಗಳನ್ನು ಪರಿವರ್ತನೆಗೆ ಒಳಪಡಿಸಬೇಕು. ಮತ್ತು ಕೊನೆಗೆ, ಸಂದರ್ಭ ಏನೇ ಇರಲಿ, ಸ್ವಲ್ಪಮಟ್ಟಿಗೆ ಇವೆರಡನ್ನೂ ಕೈಕೊಂಡಾಗ, ಮನುಷ್ಯ ತನ್ನ ದೇಹದ ಜೀವಕೋಶಗಳನ್ನು ಪರಿವರ್ತನೆಗೊಳಪಡಿಸುವುದನ್ನು ಪ್ರಾರಂಭಿಸುವುದನ್ನು



ಕುರಿತು ಯೋಚಿಸಬೇಕು, ಈ ಪ್ರಾರಂಭ ಕೊನೆಗೆ ಬರಬಾರದು, ಮೊದಲೇ ಬರಬೇಕು.

**ಪ್ರಶ್ನೆ :** ಮಧುರ ಮಾತೆಯವರೆ, ಕ್ರಿಯಾತ್ಮಕ ಬದಿ ಯಾವುದು?

**ಶ್ರೀಮಾತೆ :** ವಿಷಯ ಅದೇ ಆಗಿದೆ. ಅದು ಯೋಗದ ಈ ಬದಿ. ಎರಡು ಅಂಶಗಳಿವೆ: ನಿಶ್ಚಲವಾಗಿದ್ದುಕೊಂಡು ತಯಾರು ಮಾಡಿಕೊಳ್ಳುವಿಕೆ, ಒಂದು ಅಂಶವಾದರೆ ಇನ್ನೊಂದು ಅಂಶ ಕ್ರಿಯೆಯನ್ನು ಪರಿವರ್ತನೆಗೆ ಒಳಪಡಿಸುವುದಾಗಿದೆ, ಎಂದರೆ ಚೈತನ್ಯದಿಂದ ಕೂಡಿದ್ದು, ಅದರರ್ಥ ಮುನ್ನೂಕುವಿಕೆ, ಕ್ರಿಯೆ ಕೈಕೊಳ್ಳುವಿಕೆ.

**(9/374, 298–99, 7/201–02)** **– ಶ್ರೀಮಾತೆ**

*

## ಕ್ರಿಯಾತ್ಮಕ ಆಧ್ಯಾತ್ಮಿಕತೆ – ಶಾಶ್ವತತೆಯತ್ತ ಇನ್ನೊಂದು ಹೆಚ್ಚಿನ ಹೆಜ್ಜೆ

ಸ್ವಭಾವ ತಯಾರಾಗಿದೆ. ಆಧ್ಯಾತ್ಮಿಕ ಅಭೀಪ್ಸೆ ಮನುಷ್ಯನಲ್ಲಿ ಅಂತರ್ನಿಹಿತವಾಗಿದೆ, ಏಕೆಂದರೆ ಅವನು ಪಶುವಿನ ಹಾಗಿಲ್ಲ, ತನ್ನ ಅಪರಿಪೂರ್ಣತೆ ಹಾಗೂ ಸೀಮಿತತೆಗಳ ಬಗ್ಗೆ ಅರಿವುಳ್ಳವನಾಗಿದ್ದಾನೆ. ಸದ್ಯ ತಾನಿರುವುದಕ್ಕಿಂತ ಆಚೆಗಿರುವ ಏನೋ ಒಂದನ್ನು ಸಿದ್ಧಿಸಿಕೊಳ್ಳಬೇಕೆಂಬ ಭಾವನೆ ಅವನಲ್ಲಿದೆ. ಈ ಸ್ವ–ಅತಿಕ್ರಮಣದತ್ತ ಇರುವ ಅವನ ಹಂಬಲ ಮನುಕುಲದಲ್ಲಿ ಇಡಿಯಾಗಿ ಮೃತವಾಗಿ ಹೋಗುವ ಸಂಭವವಿಲ್ಲ.

**– ಶ್ರೀ ಅರವಿಂದರು (Life Divine, 19/942-43)**

ತಾನೇ ಜೀವಿಸುತ್ತಿರುವುದನ್ನು ಗಮನಿಸುವ ಮಾನಸಿಕ ಕ್ಷಮತೆ ಹೊಂದಿರುವುದು ಮನುಷ್ಯನ ಸ್ವರೂಪವನ್ನು ವಿಶೇಷವಾಗಿ ಚಿತ್ರಿಸುತ್ತದೆ. ಪಶು ಸ್ವಯಂಪ್ರೇರಿತವಾಗಿ, ಸ್ವಯಂಚಾಲಿತವಾಗಿ ಜೀವಿಸುತ್ತದೆ ಮತ್ತು ತಾನು ಜೀವಿಸುತ್ತಿರುವುದನ್ನು ಅದು ಗಮನಕ್ಕೆ ತಂದುಕೊಂಡರೆ ಅಂತಹದು ಅತಿ ಸೂಕ್ಷ್ಮ ಮತ್ತು ಗಮನಾರ್ಹವಲ್ಲದ ಮಟ್ಟದ್ದಾಗಿರುತ್ತದೆ. ಮತ್ತು ಆ ಕಾರಣದಿಂದಾಗಿಯೆ ಅದು ಶಾಂತಿಯಿಂದಿರುತ್ತದೆ, ಚಿಂತೆ ಮಾಡುವುದಿಲ್ಲ. ಅಪಘಾತ ಇಲ್ಲವೆ ಅನಾರೋಗ್ಯ ಇವುಗಳಂತಹ ಕಾರಣಗಳಿಂದ ಪಶು ವೇದನೆಗೆ ಒಳಗಾಗಿದ್ದರೆ, ಅದನ್ನು ಅದು ಅವಲೋಕಿಸದೆ ಇರುವುದರಿಂದ, ಪ್ರಜ್ಞೆಯಲ್ಲಿ ಹಾಗೂ ಭವಿಷ್ಯತ್ತಿನಲ್ಲಿ

ಪ್ರಕ್ಷೇಪಿಸದೆ ಇರುವುದರಿಂದ ಈ ವೇದನೆ ಕನಿಷ್ಠಮಟ್ಟದ್ದಾಗಿರುತ್ತದೆ, ಅದು ಅನಾರೋಗ್ಯವನ್ನಾಗಲಿ ಇಲ್ಲವೆ ಅಪಘಾತವನ್ನಾಗಲಿ ಕಲ್ಪನೆ ಮಾಡಿಕೊಳ್ಳುವುದಿಲ್ಲ.

ಮುಂದೇನಾಗಲಿದೆ ಎಂಬುದನ್ನು ಕುರಿತು ನಿರಂತರ ಚಿಂತೆಗೊಳಗಾಗುವುದು ಮನುಷ್ಯನಿಂದ ಪ್ರಾರಂಭವಾಗಿದೆ. ಮತ್ತು ಈ ಚಿಂತೆ ಅವನನ್ನು ಚಿತ್ರಹಿಂಸೆಗೆ ಈಡುಮಾಡುವ ಏಕಮಾತ್ರ ಕಾರಣವಲ್ಲದಿದ್ದರೂ ಪ್ರಮುಖ ಕಾರಣವಾಗಿದೆ. ವಸ್ತುನಿಷ್ಠವಾಗಿಸುವ ಈ ಪ್ರಜ್ಞೆಯೊಂದಿಗೆ ತಳಮಳ, ವೇದನಾಪೂರ್ಣ ಕಲ್ಪನೆಗಳು, ಚಿಂತೆ, ಚಿತ್ರಹಿಂಸೆ, ಭವಿಷ್ಯತ್ತಿನಲ್ಲಿ ಸಂಭವಿಸಬಹುದಾದ ಅನಾಹುತಗಳ ನಿರೀಕ್ಷೆ ಇವೆಲ್ಲ ಪ್ರಾರಂಭವಾಗಿವೆ. ಪರಿಣಾಮವಾಗಿ, ಬಹಳಷ್ಟು ಜನರು – ಅತ್ಯಂತ ಕಡಿಮೆ ರೀತಿಯಲ್ಲಿ ಪ್ರಜ್ಞಾವಂತರಾದವರಲ್ಲ, ಹೆಚ್ಚಿನ ಪ್ರಜ್ಞೆಯುಳ್ಳವರು – ನಿರಂತರ ಚಿತ್ರಹಿಂಸೆಯಲ್ಲಿ ಜೀವಿಸುತ್ತಾರೆ. ಔದಾಸೀನ್ಯ ತೋರಿಸಲು ಆಗದಷ್ಟು ಮನುಷ್ಯ ಪ್ರಜ್ಞಾವಂತನಾಗಿದ್ದಾನೆ. ಪೃಥ್ವಿಯ ಮೇಲಿನ ಜೀವಿಗಳಲ್ಲಿ ಅತ್ಯಂತ ದುಃಖ ಪೀಡಿತನಾದವನು ಮನುಷ್ಯ ಎಂದು ನಿಜವಾಗಿ, ತಪ್ಪು ಮಾಡದ ರೀತಿಯಲ್ಲಿ ಹೇಳಬಹುದಾಗಿದೆ. ಮಾನವ ಜೀವಿ ಹಾಗಿರುವುದನ್ನು ರೂಢಿಸಿಕೊಂಡಿದ್ದಾನೆ, ಏಕೆಂದರೆ ಅದು ಪೂರ್ವ ಪಿತೃರೋಗವಾಗಿದ್ದು ಅದನ್ನು ತನ್ನ ಪೂರ್ವಜರಿಂದ ಆನುವಂಶಿಕವಾಗಿ ಪಡೆದಿದ್ದಾನೆ, ಆದರೆ ಅದು ನಿಜವಾಗಿ ದುಃಖಪೀಡಿತ ಸ್ಥಿತಿ. ಪಶುವಿನ ಅಪ್ರಜ್ಞೆಯ ಸ್ಥಾನದಲ್ಲಿ ಉಚ್ಚ ಸ್ತರದ ಆಧ್ಯಾತ್ಮಿಕ ಅತಿಪ್ರಜ್ಞೆಯ ಕ್ಷಮತೆಯನ್ನು ತರುವುದರ ಮೂಲಕ ಮಾತ್ರ ಮಾನವ ಸತ್ತೆಯಲ್ಲಿ ಅಸ್ತಿತ್ವದ ಗುರಿಯನ್ನು ನೋಡುವ ಮತ್ತು ಪ್ರಯತ್ನದ ಪರಾಕಾಷ್ಠೆಯನ್ನು ಪೂರ್ವಭಾವಿಯಾಗಿ ಕಂಡುಕೊಳ್ಳುವ ಕ್ಷಮತೆ ಬರುತ್ತದೆಯಷ್ಟೇ ಅಲ್ಲ, ಆದರೆ ಮನುಷ್ಯನಿಗೆ ತಾನು ಶರಣಾಗತನಾಗಬಹುದಾದ, ತನ್ನ ಜೀವನದ ಹಾಗೂ ಅದರ ಭವಿಷ್ಯದ ಜವಾಬ್ದಾರಿ ವಹಿಸಿಕೊಡಬಹುದಾದ ಉಚ್ಚತರ ಆಧ್ಯಾತ್ಮಿಕ ಸಾಮರ್ಥ್ಯದಲ್ಲಿ ಸ್ಪಷ್ಟ ದೃಷ್ಟಿಯುಳ್ಳ ವಿಶ್ವಾಸ ಉಂಟಾಗುತ್ತದೆ, ಅದರಿಂದಾಗಿ ಅವನು ಎಲ್ಲ ಚಿಂತೆಗಳನ್ನು ಬಿಟ್ಟುಕೊಡಬಲ್ಲ.

*

ನಿಜ ಹೇಳುವುದಾದರೆ ಬೀಗದ ಕೈ ಗೊತ್ತಿರದ ಎಂದರೆ ಸಮಸ್ಯೆಗಳನ್ನು ಪರಿಹರಿಸಲು ಮಾರ್ಗದರ್ಶಕ ಎಳೆಗಳಿರದ ಅಸ್ತಿತ್ವಕ್ಕೆ ಜವಾಬ್ದಾರನಾಗಿರುವುದಕ್ಕಿಂತ ಹೆಚ್ಚು ದುಃಖಪೀಡಿತ ಸ್ಥಿತಿ ಬೇರೊಂದಿರುವುದಿಲ್ಲ. ಪಶು ತನಗಾಗಿ ಸಮಸ್ಯೆಗಳನ್ನು ಇಟ್ಟುಕೊಂಡಿರುವುದಿಲ್ಲ, ಅದು ಕೇವಲ ಜೀವಿಸುತ್ತದೆ, ಅದರ ಹುಟ್ಟುಗುಣ ಅದನ್ನು



ಮುಂದೂಡಿಕೊಂಡು ಹೋಗುತ್ತದೆ. ತನ್ನದಕ್ಕಿಂತ ಹೆಚ್ಚಿನದಾಗಿರುವ, ಅಂತರ್ನಿಹಿತ ಜ್ಞಾನವಿರುವ ಸಾಮೂಹಿಕ ಪ್ರಜ್ಞೆಯನ್ನು ಅದು ನೆಚ್ಚಿಕೊಂಡಿರುತ್ತದೆ, ಆದರೆ ಅದು ಸ್ವಯಂಚಾಲಿತವಾದದ್ದು ಮತ್ತು ಸ್ವಯಂಪ್ರೇರಿತವಾದದ್ದು. ಏನೋ ಒಂದನ್ನು ದೊರಕಿಸುವುದಕ್ಕಾಗಿ ಸಂಕಲ್ಪ ಮಾಡುವ ಹಾಗೂ ಅದನ್ನು ಈಡೇರಿಸಿಕೊಳ್ಳಲು ಪ್ರಯತ್ನ ಮಾಡುವ ಆವಶ್ಯಕತೆ ಅದಕ್ಕಿರುವುದಿಲ್ಲ, ಅದು ಬಹಳ ಸ್ವಾಭಾವಿಕವಾಗಿ ಹಾಗಿರುತ್ತದೆ ಮತ್ತು ಅದು ತನ್ನ ಜೀವನದ ಜವಾಬ್ದಾರಿ ಹೊತ್ತಿರದೇ ಇರುವುದರಿಂದ ಅದಕ್ಕೆ ಚಿಂತೆಯಿರುವುದಿಲ್ಲ. ಮನುಷ್ಯನೊಂದಿಗೆ ಅವನು ತನ್ನ ಮೇಲೆ ಅವಲಂಬಿಸಬೇಕಾದ ಭಾವನೆ ಹುಟ್ಟಿಕೊಂಡಿದೆ, ಅವಶ್ಯವಾದ ಜ್ಞಾನ ಅವನಲ್ಲಿ ಇಲ್ಲದೆ ಇರುವುದರಿಂದ ಪರಿಣಾಮ ನಿರಂತರ ಚಿತ್ರಹಿಂಸೆಗೆ ಒಳಗಾಗುವಂತಾಗಿದೆ. ತನ್ನದಕ್ಕಿಂತ ಉಚ್ಚತರವಾದ ಪ್ರಜ್ಞೆಗೆ ಶರಣಾಗುವುದರಿಂದ ಮಾತ್ರ ಈ ಚಿಂತ್ರಹಿಂಸೆ ಕೊನೆಗೊಳ್ಳಬಹುದು, ಆ ಉಚ್ಚತರ ಪ್ರಜ್ಞೆಗೆ ಅವನು ತನ್ನ ಜವಾಬ್ದಾರಿಯನ್ನು ಇಡಿಯಾಗಿ ವಹಿಸಿಕೊಡಬಹುದು, ತನ್ನ ಚಿಂತೆಗಳನ್ನು ಅದಕ್ಕೆ ಒಪ್ಪಿಸಿ ಬಿಡಬಹುದು, ತನ್ನ ಜೀವನಕ್ಕೆ ಮಾರ್ಗದರ್ಶನ ಮಾಡುವುದನ್ನೂ, ಪ್ರತಿಯೊಂದನ್ನು ಸಂಘಟಿಸುವುದನ್ನೂ ಅದಕ್ಕೆ ಬಿಟ್ಟುಕೊಡಬಹುದು.

ಸಮಸ್ಯೆಯೊಂದನ್ನು ಪರಿಹರಿಸುವುದಕ್ಕೆ ಮನುಷ್ಯನಲ್ಲಿ ಅವಶ್ಯವಾದ ಜ್ಞಾನವಿಲ್ಲದೆ ಇದ್ದಾಗ ಅವನು ಅದನ್ನು ಹೇಗೆ ಕೈಕೊಳ್ಳಬಲ್ಲ? ದುರ್ದೈವದ ವಿಷಯವೆಂದರೆ ಮನುಷ್ಯ ತನ್ನ ಜೀವನದ ಎಲ್ಲ ಸಮಸ್ಯೆಗಳನ್ನು ತಾನೇ ಬಗೆಹರಿಸಬೇಕಾಗುತ್ತದೆಂದು ನಂಬುತ್ತಾನೆ ಮತ್ತು ಅದಕ್ಕೆ ಅವಶ್ಯವಾದ ಜ್ಞಾನ ಅವನಲ್ಲಿರುವುದಿಲ್ಲ. ಅದು ಎಲ್ಲ ತೊಂದರೆಗಳ ಉಗಮ ಸ್ಥಾನ ಹಾಗೂ ಮೂಲ – "ನಾನೇನು ಮಾಡಲಿ?" ಎಂದು ನಿರಂತರವಾಗಿ ಎದುರಾಗುವ ಪ್ರಶ್ನೆಯಿರುತ್ತದೆ, ಅದನ್ನನುಸರಿಸಿ "ಏನು ಸಂಭವಿಸಲಿದೆ?" ಎಂಬ ಇನ್ನೊಂದು ಪ್ರಶ್ನೆಯಿರುತ್ತದೆ ಮತ್ತು ಅದೇ ಕಾಲಕ್ಕೆ ಅದಕ್ಕೆ ಉತ್ತರ ನೀಡುವುದು ಶಕ್ಯವಾಗುವುದಿಲ್ಲ.

ಆ ಕಾರಣದಿಂದಾಗಿಯೆ ಎಲ್ಲ ಆಧ್ಯಾತ್ಮಿಕ ಶಿಸ್ತುಪಾಲನೆಗಳು ಉಚ್ಚತರ ತತ್ವಕ್ಕೆ ಎಲ್ಲ ಜವಾಬ್ದಾರಿಯನ್ನು ವಹಿಸಿಕೊಡುವ ಆವಶ್ಯಕತೆಯಿಂದ ಪ್ರಾರಂಭವಾಗುತ್ತವೆ, ಹಾಗೆ ಮಾಡದೆ ಹೋದರೆ ಶಾಂತಿ ಅಸಾಧ್ಯವಾಗುವುದು.

ಆದಾಗ್ಯೂ ಮನುಷ್ಯನಿಗೆ ಪ್ರಜ್ಞೆಯನ್ನು ಕೊಡಲಾಗಿದೆ, ಅದರಿಂದಾಗಿ ಅವನು ಪ್ರಗತಿ ಸಾಧಿಸಬಲ್ಲ, ತನಗೆ ತಿಳಿಯದೆ ಇದ್ದುದನ್ನು ಶೋಧಿಸಬಲ್ಲ, ತಾನಿನ್ನೂ

ಆಗಿರದೆ ಇದ್ದುದನ್ನು ತನ್ನಲ್ಲಿ ಅಭಿವೃದ್ಧಿಪಡಿಸಿಕೊಳ್ಳಬಲ್ಲ. ಹಾಗಾಗಿ ನಿಶ್ಚಲ ಮತ್ತು ನಿಷ್ಕ್ರಿಯ ಸ್ಥಿತಿಗಿಂತ ಉಚ್ಚತರವಾದ ಸ್ಥಿತಿಯೊಂದಿದೆ ಎಂದು ಹೇಳಬಹುದು: ಅದು ಪ್ರಗತಿಗಾಗಿರುವ ಸಂಕಲ್ಪಕ್ಕಾಗಿ ಮನುಷ್ಯ ಸಾಕಷ್ಟು ಇಡಿಯಾದ ವಿಶ್ವಾಸವನ್ನು ಇರಿಸಿಕೊಳ್ಳುವುದಾಗಿದೆ, ಪರಿಣಾಮ ಹಾಗೂ ಫಲಗಳಿಗಾಗಿರುವ ಎಲ್ಲ ಕಾಳಜಿಯನ್ನು, ತಳಮಳವನ್ನು ತೊಡೆದು ಹಾಕಿ ಪ್ರಗತಿಗಾಗಿ ಪ್ರಯತ್ನವನ್ನು ಕಾಪಾಡಿಕೊಂಡು ಬರುವುದಾಗಿದೆ. ಇದು ನೈಷ್ಕರ್ಮ ಸಿದ್ಧಾಂತದ ವಿಧಾನಗಳು ಎಂದು ಕರೆಯಬಹುದಾದುದಕ್ಕಿಂತ ಒಂದು ಹೆಜ್ಜೆ ಮುಂದಿರುವಂತಹದು. ಆ ವಿಧಾನಗಳನ್ನು ಎಲ್ಲ ಕರ್ಮಗಳ ನಿರಾಕರಣ, ನಿಶ್ಚಲತೆಯಲ್ಲಿ, ಆಂತರಿಕ ನಿಶ್ಚಲ ನೀರವತೆಯಲ್ಲಿ ಮುಳುಗಿ ಹೋಗುವಿಕೆ ಇವುಗಳ ಆಧಾರದ ಮೇಲೆ ಸ್ಥಾಪಿಸಲಾಗಿದೆ. ಆ ವಿಧಾನಗಳು ಎಲ್ಲ ಜೀವನವನ್ನು ಕೈಬಿಡುತ್ತವೆ, ಏಕೆಂದರೆ ಒಮ್ಮೆಗೆ ಭಾವನೆಗೆ ಬಂದದ್ದೇನೆಂದರೆ ಶಾಂತಿಯಿಲ್ಲದೆ ಮನುಷ್ಯ ಯಾವುದೇ ಬಗೆಯ ಆಂತರಿಕ ಸಿದ್ಧಿಯನ್ನು ಪಡೆಯಲಾರ ಮತ್ತು, ಬಹಳ ಸ್ವಾಭಾವಿಕವಾಗಿ, ಬಾಹ್ಯ ಸ್ಥಿತಿಗಳಲ್ಲಿ ಜೀವಿಸಿರುವವರೆಗೆ ಮನುಷ್ಯನಿಗೆ ಶಾಂತಿಯಿರುವುದಿಲ್ಲ, ಸಮಸ್ಯೆಗಳನ್ನು ತಳಮಳದ ಸ್ಥಿತಿಯಲ್ಲಿ ಇರಿಸಲಾಗುವುದರಿಂದ ಅವುಗಳಿಗೆ ಪರಿಹಾರವಿರುವುದಿಲ್ಲ, ಏಕೆಂದರೆ ಪರಿಹರಿಸಲು ಅವಶ್ಯವಾಗಿರುವ ಜ್ಞಾನ ಮನುಷ್ಯನಲ್ಲಿರುವುದಿಲ್ಲ.

ಮುಂದಿನ ಹೆಜ್ಜೆ ಸಮಸ್ಯೆಯನ್ನು ಎದುರಿಸುವುದಾಗಿರುತ್ತದೆ, ಆದರೆ ಅದನ್ನು ಸ್ಥಿರವಾದ, ಎಲ್ಲವನ್ನೂ ಅರಿತ ಹಾಗೂ ನಿಮ್ಮನ್ನು ಕಾರ್ಯದಲ್ಲಿ ತೊಡಗಿಸುವ ಪರಮೋಚ್ಚ ದೈವೀ ಸಾಮರ್ಥ್ಯದಲ್ಲಿ ಸಂಪೂರ್ಣ ವಿಶ್ವಾಸವನ್ನಿರಿಸಿಕೊಂಡ ನಿಶ್ಚಿತತೆಯಿಂದ ಕೈಕೊಳ್ಳಬೇಕು. ಆಗ ಮನುಷ್ಯ ಕರ್ಮಗಳನ್ನು ಬಿಟ್ಟುಕೊಡುವುದರ ಬದಲಾಗಿ ಬಲವತ್ತರವಾದ ಮತ್ತು ಕ್ರಿಯಾತ್ಮಕ ಉಚ್ಚತರ ಶಾಂತಿಯಿಂದ ಕಾರ್ಯ ಕೈಕೊಳ್ಳಬಲ್ಲ.

ಇದನ್ನು ಜೀವನದಲ್ಲಿ ದೈವೀ ಮಧ್ಯಸ್ಥಿಕೆಯ ಮುಖ, ಅಸ್ತಿತ್ವದಲ್ಲಿರುವ ದೈವೀಶಕ್ತಿಗಳ ಮಧ್ಯಸ್ಥಿಕೆಯ ಹೊಸರೂಪ, ಆಧ್ಯಾತ್ಮಿಕ ಸಿದ್ಧಿಯ ಹೊಸಮುಖ ಎಂದು ಕರೆಯಲಾಗಿದೆ.

**(9/303–05)** **– ಶ್ರೀಮಾತೆ**

*



## ಆಧ್ಯಾತ್ಮಿಕತೆ ಎಂದರೇನು?

ಮನಸ್ಸು ಮತ್ತು ಪ್ರಾಣಗಳಿಗಿಂತ ಶ್ರೇಷ್ಠವಾದ ಏನೋ ಒಂದನ್ನು ಗುರುತಿಸುವುದು,
ನಮ್ಮ ಸಾಮಾನ್ಯ ಮಾನಸಿಕ ಮತ್ತು ಪ್ರಾಣಿಕ ಸ್ವಭಾವಗಳಾಚೆಗಿರುವ ಪರಿಶುದ್ಧ, ಶ್ರೇಷ್ಠ, ದೈವೀಪ್ರಜ್ಞೆಗಾಗಿ ಅಭೀಪ್ಸೆ ಪಡುವುದು,
ಮನುಷ್ಯ ತನ್ನ ನಿಮ್ನ ಭಾಗಗಳ ಬಂಧನದಿಂದ, ಅಲ್ಪತನದಿಂದ ಹೊರಗೆ ತನ್ನಲ್ಲಿರುವ ಶ್ರೇಷ್ಠತರ ವಿಷಯದತ್ತ ತಲುಪಲು ಅವನ ಆತ್ಮದ ಉಬ್ಬರ ಹಾಗೂ ಮೇಲಕ್ಕೆದ್ದು ಬರುವಿಕೆ,
ಇದೆಲ್ಲ ಆಧ್ಯಾತ್ಮಿಕತೆಯ ಅರ್ಥವಾಗಿತ್ತು.

*

ಅಹಂಕಾರದ ಪ್ರಜ್ಞೆಗಿಂತ ಭಿನ್ನವಾದ ಇನ್ನೊಂದು ಪ್ರಜ್ಞೆಯ ಬಗ್ಗೆ ನೀವು ಅರಿವನ್ನು ತಂದುಕೊಳ್ಳಲು ಪ್ರಾರಂಭಿಸಿದಾಗ,
ಮತ್ತು ನೀವು ಹೆಚ್ಚು ಹೆಚ್ಚಾಗಿ ಅದರಲ್ಲಿ ಇಲ್ಲವೆ ಅದರ ಪ್ರಭಾವದಡಿಯಲ್ಲಿ ಜೀವಿಸಲು ಪ್ರಾರಂಭಿಸಿದಾಗ,
ಅದು ಆಧ್ಯಾತ್ಮಿಕತೆಯಾಗಿರುತ್ತದೆ.
ವಿಸ್ತಾರವಾದ, ಅನಂತವಾದ, ಸ್ವ–ಅಸ್ತಿತ್ವದಲ್ಲಿರುವ, ಅಹಂಕಾರರಹಿತವಾಗಿ ಪರಿಶುದ್ಧಗೊಂಡ ದೇವ (ದಿವ್ಯಾತ್ಮ, ಬ್ರಹ್ಮನ್, ಭಗವಂತ)
ಆ ಪ್ರಜ್ಞೆಯಾಗಿರುತ್ತಾನೆ.

*

ಅತ್ಯುಚ್ಚ ಆತ್ಮವನ್ನು ಎಂದರೆ ಭಗವಂತನನ್ನು, ಎಲ್ಲವನ್ನೂ ಅಪ್ಪಿಕೊಳ್ಳುವ ಏಕತೆಯನ್ನು ಅರಿತುಕೊಳ್ಳಲು ಮತ್ತು ಅದರಲ್ಲಿ ಜೀವಿಸಲು,
ಮತ್ತು ಜೀವನವನ್ನು, ಅದರ ಎಲ್ಲ ಭಾಗಗಳಲ್ಲಿ ಸಾಧ್ಯವಾಗಬಹುದಾದ ಅತ್ಯುಚ್ಚ ದೈವಿಕ ಮೌಲ್ಯಗಳತ್ತ ಎತ್ತರಿಸಲು ಮಾಡುವ ಪ್ರಯತ್ನಕ್ಕೆ
ನಾವು ಆಧ್ಯಾತ್ಮಿಕತೆ ಎಂಬ ವ್ಯಾಖ್ಯೆ ಕೊಡುತ್ತೇವೆ.

ಆಧ್ಯಾತ್ಮಿಕತೆ ಉಚ್ಚಮಟ್ಟದ ಬೌದ್ಧಿಕತೆಯಲ್ಲ,
ಆದರ್ಶವಾದವಲ್ಲ,
ಮನಸ್ಸು ನೈತಿಕತೆಯತ್ತ ಹೊರಳುವುದಲ್ಲ,

ನೈತಿಕ ಪರಿಶುದ್ಧತೆಯಲ್ಲ, ವೈರಾಗ್ಯವಲ್ಲ,
ಧಾರ್ಮಿಕತೆ ಅಲ್ಲ,
ಇಲ್ಲವೆ ಉತ್ಸಾಹಭರಿತ ಮತ್ತು ಉನ್ನತಮಟ್ಟದ ಭಾವೋನ್ಮತ್ತತೆಯ ಉತ್ಕಟ ಆಸಕ್ತಿ ಅಲ್ಲ, ಈ ಎಲ್ಲ ಅತ್ಯುತ್ಕೃಷ್ಟ ವಿಷಯಗಳ ಸಂಯೋಜನೆಯೂ ಅಲ್ಲ.

ಮನಸ್ಸಿಗೆ ಮತ್ತು ಪ್ರಾಣಕ್ಕೆ ಈ ವಿಷಯಗಳು ಅಸಾಧಾರಣ ಮೌಲ್ಯವನ್ನು ಹೊಂದಿವೆ,
ಶಿಸ್ತಿಗೊಳಪಡಿಸುವ, ಪರಿಶುದ್ಧಗೊಳಿಸುವ ಇಲ್ಲವೆ ಸ್ವಭಾವಕ್ಕೆ ಔಚಿತ್ಯ ರೂಪ ಕೊಡುವ ತಯಾರಿ ರೂಪದ ಚಲನೆಗಳೆಂದು
ಆಧ್ಯಾತ್ಮಿಕ ಉತ್ಕ್ರಾಂತಿಗೇ ಸ್ವತಃ ಅವು ಮೌಲ್ಯವುಳ್ಳವುಗಳಾಗಿವೆ.
ಆದಾಗ್ಯೂ ಅವು ಮನಸ್ಸಿನ ಉತ್ಕ್ರಾಂತಿಗೆ ಸೇರಿದವುಗಳಾಗಿವೆ
– ಅದು ಆಧ್ಯಾತ್ಮಿಕ ಸಿದ್ಧಿಯ, ಅನುಭವದ ಪ್ರಾರಂಭ
ಬದಲಾವಣೆ ಇನ್ನೂ ಅಲ್ಲಿರುವುದಿಲ್ಲ.

ಸಾರದಲ್ಲಿ ಆಧ್ಯಾತ್ಮಿಕತೆ
ನಮ್ಮ ಸತ್ತೆಯ ಆಂತರಿಕ ನೈಜತೆಗೆ, ದೈವಿಕತೆಗೆ, ಆತ್ಮಕ್ಕೆ ಎಚ್ಚತ್ತುಕೊಳ್ಳುವುದಾಗಿದೆ,
ಅದು ನಮ್ಮ ಮನಸ್ಸು, ಪ್ರಾಣ ಹಾಗೂ ದೇಹಗಳಿಂದ ಭಿನ್ನವಾಗಿದೆ,
ವಿಶ್ವದ ಆಚೆಗಿರುವ ಹಾಗೂ ವಿಶ್ವವನ್ನು ಆವರಿಸಿರುವ, ನಮ್ಮ ಸತ್ತೆಯಲ್ಲೂ ಕೂಡ ವಾಸಿಸುತ್ತಿರುವ ಶ್ರೇಷ್ಠತರ ದೈವೀ ನೈಜತೆಯನ್ನು
ಅರಿತುಕೊಳ್ಳುವುದು, ಭಾವನೆಗೆ ತಂದುಕೊಳ್ಳುವುದು ಮತ್ತು ಅದೇ ಆಗಿಬಿಡುವುದು,
ಅದರ ಸಂಸರ್ಗದಲ್ಲಿರುವುದು, ಅದರೊಡನೆ ಏಕತೆ ಪಡೆಯುವುದು
ಇದೆಲ್ಲದಕ್ಕಾಗಿರುವ ಅಭೀಪ್ಸೆ ಆಧ್ಯಾತ್ಮಿಕತೆಯಾಗಿದೆ,
ಆ ಅಭೀಪ್ಸೆಯ, ಸಂಪರ್ಕದ, ಹೊಸ ಆತ್ಮ ಹಾಗೂ ಹೊಸ ಸ್ವಭಾವದಲ್ಲಿ ಬೆಳವಣಿಗೆಯ ಇಲ್ಲವೆ ಎಚ್ಚತ್ತುಕೊಳ್ಳುವಿಕೆಯ ಪರಿಣಾಮವೆಂದಾಗಿ
ನಮ್ಮ ಇಡೀ ಸತ್ತೆಯ ಹೊರಳುವಿಕೆ, ಬದಲಾವಣೆ ಹಾಗೂ ಪರಿವರ್ತನೆ ಆಧ್ಯಾತ್ಮಿಕತೆಯಾಗಿರುತ್ತದೆ.

*

**ಆಧ್ಯಾತ್ಮಿಕತೆಯ ಅರ್ಥ ಹೀಗಿದೆ:**
ಅದು ಮನುಷ್ಯನ ಒಂದು ಹೊಸ ಮತ್ತು ಶ್ರೇಷ್ಠತರ ಆಂತರಿಕ ಜೀವನವಾಗಿದ್ದು
ಅವನ ನಿಜವಾದ, ಆಳಾತಿ ಆಳದ, ಅತ್ಯುಚ್ಚ ಹಾಗೂ ಅತಿ ಭವ್ಯವಾದ



ಆತ್ಮದ ಹಾಗೂ ದೈವಿಕತೆಯ ಪ್ರಜ್ಞೆಯಲ್ಲಿ ಆಧಾರ ಪಡೆದಿರುತ್ತದೆ.
ಅದರ ಮೂಲಕ ಅಸ್ತಿತ್ವದ ಎಲ್ಲವನ್ನು ವಿಶ್ವದಲ್ಲಿ ತನ್ನ ಆತ್ಮದ ಪ್ರಗತಿಪರ ಪ್ರಕಟಣೆಯೆಂದು ಮತ್ತು ತನ್ನದೇ ಜೀವನವನ್ನು
ಸಾಧ್ಯವಾಗಬಹುದಾದ ಪರಿವರ್ತನೆಯ ಕ್ಷೇತ್ರವೆಂದು ಅವನು ಸ್ವೀಕರಿಸುತ್ತಾನೆ,
ಆ ಪರಿವರ್ತನೆಯಲ್ಲಿ ಅದರ ದೈವೀ ಅರ್ಥ ಹಾಗೂ
ಅದರ ಸಾಧ್ಯಗೊಳಿಸುವ ಶಕ್ತಿ ಹೆಚ್ಚಿನ ರೀತಿಯಲ್ಲಿ ಉತ್ಕ್ರಾಂತಿ ಹೊಂದಿರುತ್ತವೆ
ಅವನ ಸತ್ತೆಯ ಈ ಶ್ರೇಷ್ಠತರ ಸಾಧ್ಯತೆಗಳನ್ನು ನೋಡಲು ಮಾತ್ರವಲ್ಲ,
ಆದರೆ ಜೀವಿಸಿಬಿಡಲು ಒಂದು ಪ್ರಯತ್ನವಿರುತ್ತದೆ.

*

ದೈವೀ ಪರಿಪೂರ್ಣತೆ ನಮ್ಮ ಮೇಲ್ಗಡೆ ಸದಾ ಇರುತ್ತದೆ,
ಆದರೆ ಮನುಷ್ಯನಿಗೆ ಪ್ರಜ್ಞೆಯಲ್ಲಿ ದೈವಿಕವಾಗುವುದು ಮತ್ತು ಕಾರ್ಯ ಕೈಕೊಳ್ಳುವುದು, ಅಂತರಂಗದಲ್ಲಿ ಹಾಗೂ ಬಾಹ್ಯದಲ್ಲಿ ದೈವಿಕವಾಗಿ ಜೀವಿಸುವುದು ಆಧ್ಯಾತ್ಮಿಕತೆಯ ಅರ್ಥವಾಗಿರುತ್ತದೆ.
ಆ ಶಬ್ದಕ್ಕೆ ಕೊಟ್ಟ ಉಳಿದೆಲ್ಲವುಗಳು ಕಡಿಮೆ ಮಟ್ಟದ ಅರ್ಥಗಳು
ತೃಪ್ತಿಕರವಲ್ಲದ ತಡಕಾಡುವಿಕೆಗಳು ಇಲ್ಲವೆ ಮೋಸ ಮಾಡುವಂತಹವು ಆಗಿರುತ್ತವೆ.

*

ಆಧ್ಯಾತ್ಮಿಕ ಜೀವನವೆಲ್ಲ ಅದರ ತತ್ವದಲ್ಲಿ
ದೈವೀ ಜೀವನದಲ್ಲಿ ಒಂದು ಬೆಳವಣಿಗೆಯಾಗಿರುತ್ತದೆ.

**(14/65; 23/877; 14/433; 19/857, 9/251; 15/247; 19/1018)** – ಶ್ರೀ ಅರವಿಂದರು

*

## ಕ್ರಿಯಾತ್ಮಕ ಆಧ್ಯಾತ್ಮಿಕತೆ: ದೈವೀ ಜೀವನದಲ್ಲಿ ಒಂದು ಬೆಳವಣಿಗೆ

ಜೀವನದ ಕರ್ಮಗಳೊಂದಿಗೆ ಆಧ್ಯಾತ್ಮಿಕವಾಗಿ ವ್ಯವಹರಿಸುವಾಗ ತೊಂದರೆ ಮೇಲೆದ್ದು ಬರುವುದಕ್ಕೆ ಕಾರಣ ಜೀವನದಲ್ಲಿಯ ಸಂಕಲ್ಪವು ತನ್ನದೇ ಉದ್ದೇಶಗಳಿಗಾಗಿ ಅವಿದ್ಯೆಯಲ್ಲಿ ಮಿಥ್ಯೆಯಿಂದ ಕೂಡಿದ ಆಸೆಯ ಆತ್ಮವನ್ನು ಸೃಷ್ಟಿಸಿದೆ – ಮತ್ತು ಅದನ್ನು ದೈವೀ ಕಿಡಿಯ ಸ್ಥಾನದಲ್ಲಿರಿಸಿದೆ, ಆ ದೈವೀ ಕಿಡಿ

ನಿಜವಾದ ಚೈತ್ಯವಾಗಿರುತ್ತದೆ. ಜೀವನದ ಎಲ್ಲ ಇಲ್ಲವೆ ಹೆಚ್ಚಿನ ಮಟ್ಟಿಗಿನ ಕರ್ಮಗಳು ಸದ್ಯ ಆಸೆಯ ಆತ್ಮದಿಂದ ಪ್ರೇರಿತವಾಗಿವೆ ಮತ್ತು ದೋಷಯುಕ್ತವಾಗಿವೆ ಇಲ್ಲವೆ ಅವು ಹಾಗೆ ಆಗಿರುವಂತೆ ತೋರಿಬರುತ್ತವೆ; ನೈತಿಕವಾದ, ಧಾರ್ಮಿಕವಾದ, ಪರಹಿತ ಚಿಂತನೆಯ ಮತ್ತು ಪರೋಪಕಾರದ, ಸ್ವ–ಹಿತತ್ಯಾಗದ, ಸ್ವ–ನಿರಾಕರಣೆಯ ಮುಸುಕು ಹೊತ್ತ ಕರ್ಮಗಳೂ ಕೂಡ ಆದ್ಯಂತವಾಗಿ ಆಸೆಯ ಆತ್ಮ ಹೆಣೆಯುವ ಎಳೆಗಳಿಂದಲೇ ಪ್ರೇರಿತವಾಗಿರುತ್ತವೆ. ಈ ಆಸೆಯ ಆತ್ಮ ಅಹಂಕಾರದಿಂದ ಕೂಡಿದ ಪ್ರತ್ಯೇಕಿಸುವ ಆತ್ಮ ಮತ್ತು ಅದರ ಎಲ್ಲ ಹುಟ್ಟುಗುಣಗಳು ಪ್ರತ್ಯೇಕಿಸುವ ಸ್ವ–ದೃಢೀಕರಣಕ್ಕಾಗಿ ಇರುತ್ತವೆ; ಅದು ಯಾವಾಗಲೂ ಬಹಿರಂಗವಾಗಿ ಇಲ್ಲವೆ ಹೆಚ್ಚುಕಡಿಮೆ ಹೊಳೆಯುವ ಮುಸುಕುಗಳಡಿಯಲ್ಲಿ ತನ್ನದೇ ಬೆಳವಣಿಗೆಗಾಗಿ, ತನ್ನ ವಶವರ್ತಿಮಾಡಿಕೊಳ್ಳುವುದಕ್ಕಾಗಿ, ಸಂತೋಷಕ್ಕಾಗಿ, ವಿಜಯಕ್ಕಾಗಿ, ಸಾಮ್ರಾಜ್ಯಕ್ಕಾಗಿ ಸದಾ ಮುನ್ನೂಕುತ್ತಲೇ ಇರುತ್ತದೆ. ಆತಂಕ, ಅಸಾಮರಸ್ಯ ಮತ್ತು ದಾರಿಗೆಡಿಸಿಕೆ ಇವುಗಳ ಶಾಪವನ್ನು ಜೀವನದಿಂದ ತೆಗೆದುಹಾಕಬೇಕೆಂದಿದ್ದರೆ, ನಿಜವಾದ ಆತ್ಮ ಎಂದರೆ ಚೈತ್ಯಸತ್ತೆ ನೇತೃತ್ವ ವಹಿಸುವುದಕ್ಕೆ ಸ್ಥಾನ ಮಾಡಿಕೊಡಬೇಕು, ಆಸೆಯ ಮತ್ತು ಅಹಂಕಾರದ ಆತ್ಮ ಕರಗಿಹೋಗುವಂತಾಗಬೇಕು. ಆದರೆ ಇದರರ್ಥ ಪ್ರಾಣವನ್ನು ನಿರ್ಬಂಧಿಸಬೇಕು ಮತ್ತು ಅದರ ಸ್ವಭಾವಸಿದ್ಧ ಮಾರ್ಗವನ್ನು ನಿರಾಕರಿಸಬೇಕು ಎಂದಲ್ಲ, ಏಕೆಂದರೆ ಬಾಹ್ಯ ಪ್ರಾಣದ ಆತ್ಮದ ಹಿಂದೆ ಆಂತರಿಕ ಮತ್ತು ನಿಜವಾದ ಪ್ರಾಣಿಕ ಸತ್ತೆಯಿರುತ್ತದೆ, ಅದನ್ನು ಕರಗಿಸಬಾರದು, ಆದರೆ ಪ್ರಧಾನವಾಗಿ ಹೊರಬರುವಂತೆ ಮಾಡಬೇಕು ಮತ್ತು ದೈವೀ ಸ್ವಭಾವದ ಸಾಮರ್ಥ್ಯವೆಂದು ಅದನ್ನು ಅದರ ನಿಜವಾದ ಕಾರ್ಯಕ್ಕಾಗಿ ಬಿಡುಗಡೆ ಮಾಡಬೇಕು. ನಮ್ಮೊಳಗಿರುವ ನಿಜವಾದ, ಆಳಾತಿ ಆಳದಲ್ಲಿರುವ ಆತ್ಮದ ನೇತೃತ್ವದಲ್ಲಿ ನಿಜವಾದ ಪ್ರಾಣಿಕ ಸತ್ತೆಯ ಪ್ರಾಧಾನ್ಯ, ದೈವೀ ಪ್ರಾಣಶಕ್ತಿಯ ಉದ್ದೇಶಗಳು ನೆರವೇರಿಕೆ ಕಂಡುಕೊಳ್ಳುವುದಕ್ಕೆ ನಿಬಂಧನೆಯಾಗಿದೆ. ಸಾರದಲ್ಲಿ ಆ ಉದ್ದೇಶಗಳು ಅವೇ ಆಗಿ ಕೂಡ ಉಳಿದುಕೊಂಡಿರುತ್ತವೆ, ಆದರೆ ಅವುಗಳ ಆಂತರಿಕ ಉದ್ದೇಶ ಮತ್ತು ಬಾಹ್ಯ ಗುಣಲಕ್ಷಣಗಳು ಪರಿವರ್ತನೆ ಹೊಂದಿರುತ್ತವೆ. ದೈವೀ ಪ್ರಾಣ–ಸಾಮರ್ಥ್ಯ ಕೂಡ ಬೆಳವಣಿಗೆಗಾಗಿ ಒಂದು ಸಂಕಲ್ಪ, ಸ್ವ–ದೃಢೀಕರಣದ ಒಂದು ಶಕ್ತಿ, ಆದರೆ ಅದು ನಮ್ಮೊಳಗಿರುವ ಭಗವಂತನ ದೃಢೀಕರಣ, ಮೇಲ್ಮೈಯಲ್ಲಿರುವ ತಾತ್ಕಾಲಿಕ ವ್ಯಕ್ತಿವಿಶಿಷ್ಟತೆಯದಲ್ಲ – ಕೇಂದ್ರ ಸತ್ತೆಯಾದ ನಿಜವಾದ ವ್ಯಕ್ತಿವಿಶಿಷ್ಟತೆಯಾಗಿ ಅಭಿವೃದ್ಧಿ ಪಡೆಯುವಂತಹದು, ಅದು ರಹಸ್ಯ ನಾಶವಾಗದ ದೈವೀ ವ್ಯಕ್ತಿವಿಶಿಷ್ಟತೆ, ಅಹಂಕಾರವನ್ನು ಗೌಣವಾಗಿರಿಸಿದಾಗ



ಹಾಗೂ ಅದು ಮಾಯವಾದಾಗ ಹೊರಹೊಮ್ಮುವಂತಹದು. ಇದು ಜೀವನದ ನಿಜವಾದ ಉದ್ದೇಶ: ಬೆಳವಣಿಗೆ – ಆದರೆ ಅದು ಪ್ರಕೃತಿಯಲ್ಲಿ ಆತ್ಮದ ಬೆಳವಣಿಗೆ, ತನ್ನನ್ನು ಮನಸ್ಸಿನಲ್ಲಿ, ಪ್ರಾಣದಲ್ಲಿ ಹಾಗೂ ದೇಹದಲ್ಲಿ ದೃಢೀಕರಿಸುವಂತಹದು; ವಶಪಡಿಸಿಕೊಳ್ಳುವಿಕೆ, ಆದರೆ ಭಗವಂತನಿಂದ ಎಲ್ಲ ವಸ್ತು–ವಿಷಯಗಳಲ್ಲಿರುವ ಭಗವಂತನನ್ನು ವಶಪಡಿಸಿಕೊಳ್ಳುವಿಕೆ, ಅಹಂಕಾರಯುಕ್ತ ಆಸೆಯಿಂದ ವಸ್ತುಗಳನ್ನು ಅವುಗಳ ಸಲುವಾಗಿಯೇ ವಶಪಡಿಸಿಕೊಳ್ಳುವುದಲ್ಲ; ಸಂತೋಷಪಡುವಿಕೆ, ಆದರೆ ವಿಶ್ವದಲ್ಲಿರುವ ದೈವೀ ಆನಂದದ ಸಂತೋಷಪಡುವಿಕೆ; ಅಂಧಕಾರದ ಸಾಮರ್ಥ್ಯಗಳೊಡನೆ ಗೆಲುವಿನ ಸಂಘರ್ಷದ ಆಕಾರದಲ್ಲಿ ಸಮರ, ಜಯ ಸಾಧಿಸುವಿಕೆ ಹಾಗು ಸಾಮ್ರಾಜ್ಯ ಪಡೆಯುವಿಕೆ, ಇಡಿಯಾದ ಸ್ವಯಮಾಡಳಿತ ಮತ್ತು ಆಂತರಿಕ ಹಾಗೂ ಬಾಹ್ಯ ಪ್ರಕೃತಿಯ ಮೇಲೆ ಪ್ರಭುತ್ವ, ದೈವೀ ಜ್ಞಾನ, ಪ್ರೇಮ ಹಾಗೂ ದೈವೀ ಸಂಕಲ್ಪಗಳ ಮೂಲಕ ಅವಿದ್ಯೆಯ ಪ್ರಾಂತಗಳ ಮೇಲೆ ಜಯ ಸಾಧಿಸುವಿಕೆ.

**(20/164–65)** **– ಶ್ರೀ ಅರವಿಂದರು**

*

## ನಿರ್ವಾಣ – ದೈವೀ ಜೀವನದತ್ತ ಒಂದು ಹೆಜ್ಜೆ

– ಹಾಗಾದರೆ ನಿರ್ವಾಣವೆಂದರೇನು? ಸಾಂಪ್ರದಾಯಿಕ ಬೌದ್ಧ ಧರ್ಮದಲ್ಲಿ ಅದು ವಿಭಜನೆಯಾಗಿರುತ್ತದೆ, ಆತ್ಮದ್ದಲ್ಲ – ಏಕೆಂದರೆ (ಆ ಧರ್ಮದ ಪ್ರಕಾರ) ಆತ್ಮ ಅಸ್ತಿತ್ವದಲ್ಲಿರುವುದಿಲ್ಲ, ಆದರೆ ಅದು ನಾವೆಂದು ತಪ್ಪಾಗಿ ತಿಳಿದುಕೊಂಡಿರುವ ಮಾನಸಿಕ ಸಂಯುಕ್ತ ಇಲ್ಲವೆ ಸಂಸ್ಕಾರಗಳ ಪ್ರವಾಹ. ಮಾಯಾವಾದಿಗಳ ವೇದಾಂತದಲ್ಲಿ ಅದು ವಿಭಜನೆಯಲ್ಲ, ಆದರೆ ಮಿಥ್ಯೆಯ, ನೈಜವಲ್ಲದ ವ್ಯಕ್ತಿವಿಶಿಷ್ಟ ಆತ್ಮವು ನಿಜವಾದ ದಿವ್ಯಾತ್ಮನಲ್ಲಿ ಇಲ್ಲವೆ ಬ್ರಹ್ಮನ್‌ನಲ್ಲಿ ಲೀನವಾಗುವುದಾಗಿದೆ. ಅದು ಹಾಗೆ ಮಾಯವಾಗುವ ಮತ್ತು ನಿಂತುಹೋಗುವ ವ್ಯಕ್ತಿವಿಶಿಷ್ಟತೆಯ ವಿಚಾರ ಹಾಗೂ ಅನುಭವವಾಗಿರುತ್ತದೆ. – ನಿಜವಾದ ದೈವೀ ಪ್ರಕಾಶದಲ್ಲಿ ಮಿಥ್ಯೆಯದಾದ ಪ್ರಕಾಶ ನಂದಿಹೋಯಿತು (ನಿರ್ವಾಣ ಪಡೆಯಿತು) ಎಂದು ನಾವು ಹೇಳಬಹುದು. ಆಧ್ಯಾತ್ಮಿಕ ಅನುಭವದಲ್ಲಿ ಅದು ಕೆಲವೊಮ್ಮೆ ವ್ಯಕ್ತಿವಿಶಿಷ್ಟತೆಯ ಎಲ್ಲ ಭಾವನೆಯನ್ನು ಮಿತಿರಹಿತ, ವಿಶ್ವವ್ಯಾಪಿ ಪ್ರಜ್ಞೆಯಲ್ಲಿ ಕಳೆದುಕೊಳ್ಳುವುದಾಗಿರುತ್ತದೆ; ವ್ಯಕ್ತಿವಿಶಿಷ್ಟವಾಗಿದ್ದುದು ವಿಶ್ವವ್ಯಾಪಿ ಪ್ರಜ್ಞೆ, ಶಕ್ತಿ ಹಾಗೂ ಕ್ರಿಯೆ ಇವೆಲ್ಲ ಹರಿದು ಹೋಗುವುದಕ್ಕಾಗಿ ಕೇವಲ ಒಂದು ಕೇಂದ್ರ ಇಲ್ಲವೆ ವಾಹಿನಿಯಾಗಿ

ಉಳಿದುಕೊಳ್ಳುತ್ತದೆ. ಇಲ್ಲವೆ ಅದು ವಿಶ್ವಾತೀತ ಸತ್ತೆಯಲ್ಲಿ ಹಾಗೂ ಪ್ರಜ್ಞೆಯಲ್ಲಿ ವ್ಯಕ್ತಿವಿಶಿಷ್ಟತೆ ಕಳೆದುಹೋಗುವುದಾಗಿರುತ್ತದೆ, ಅದರಲ್ಲಿ ವಿಶ್ವದ ಹಾಗೂ ವ್ಯಕ್ತಿವಿಶಿಷ್ಟತೆಯ ಭಾವನೆ ಮಾಯವಾಗುತ್ತದೆ. ಇಲ್ಲವೆ ವಿಶ್ವವ್ಯಾಪಕ ಕ್ರಿಯೆಯ ಬಗ್ಗೆ ಅರಿವುಳ್ಳ ಮತ್ತು ಅದಕ್ಕೆ ಆಧಾರ ನೀಡುವ ವಿಶ್ವಾತೀತತೆಯಿರಬಹುದು. ಆದರೆ ವ್ಯಕ್ತಿವಿಶಿಷ್ಟತೆ ಎಂದರೇನು? ನಾವು ಸಾಮಾನ್ಯವಾಗಿ ಆ ಹೆಸರಿನಿಂದ ಕರೆಯುವುದು ಅಹಂಕಾರವಾಗಿರುತ್ತದೆ, ಪ್ರಕೃತಿ ತನ್ನ ಕ್ರಿಯೆಯನ್ನು ಮನಸ್ಸು ಹಾಗೂ ದೇಹಗಳಲ್ಲಿ ಒಟ್ಟಿಗೆ ಹಿಡಿದಿಟ್ಟುಕೊಳ್ಳಲು ಅದು ಒಂದು ಯೋಜನೆಯಾಗಿರುತ್ತದೆ. ಈ ಅಹಂಕಾರವನ್ನು ನಂದಿಸಬೇಕು, ಇಲ್ಲವಾದರೆ ಸಂಪೂರ್ಣ ವಿಮೋಚನೆ ಸಾಧ್ಯವಾಗುವುದಿಲ್ಲ. ಆದರೆ ವ್ಯಕ್ತಿವಿಶಿಷ್ಟ ಆತ್ಮ ಇಲ್ಲವೆ ಜೀವಿ ಈ ಅಹಂಕಾರವಲ್ಲ. ವ್ಯಕ್ತಿವಿಶಿಷ್ಟ ಆತ್ಮ ಆಧ್ಯಾತ್ಮಿಕ ಸತ್ತೆಯಾಗಿದ್ದು ಅದನ್ನು ಕೆಲವೊಮ್ಮೆ ಭಗವಂತನ ಸನಾತನ ಭಾಗ ಎಂದು ವರ್ಣಿಸಲಾಗುತ್ತದೆ, ಆದರೆ ಅನೇಕವಾಗಿರುವ ತನ್ನ ಪ್ರಕಟಣೆಗೆ ಆಧಾರ ನೀಡುವ ಸ್ವತಃ ಭಗವಂತನೇ ಅದೆಂದು ಕೂಡ ವರ್ಣಿಸಬಹುದು. ಇದು ನಮ್ಮ ಅಹಂಕಾರವನ್ನು ಮತ್ತು ಮಿಥ್ಯೆಯ, ಪ್ರತ್ಯೇಕಿಸುವ ನಮ್ಮ ವ್ಯಕ್ತಿವಿಶಿಷ್ಟತೆಯನ್ನು ತೊಡೆದು ಹಾಕಿದಾಗ, ವಿಶ್ವಾತೀತ ಹಾಗೂ ವಿಶ್ವವ್ಯಾಪಕ ಭಗವಂತನೊಡನೆ, ಎಲ್ಲ ಸತ್ತೆಗಳೊಡನೆ ನಮ್ಮ ಏಕತೆ ಇರುವುದನ್ನು ಮನಗಂಡಾಗ ತೋರಿಬರುವ ನಿಜವಾದ ಆಧ್ಯಾತ್ಮಿಕ ವ್ಯಕ್ತಿವಿಶಿಷ್ಟತೆಯಾಗಿರುತ್ತದೆ. ದೈವೀ ಜೀವನ ಸಾಧ್ಯವಾಗುವಂತೆ ಮಾಡುವುದು ಇದೇ ಆಗಿರುತ್ತದೆ. ನಿರ್ವಾಣ ಅದರತ್ತ ಒಂದು ಹೆಜ್ಜೆ, ನಮ್ಮ ನಿಜವಾದ ಸನಾತನ ಸತ್ತೆಯನ್ನು ಸಿದ್ಧಿಸಿಕೊಳ್ಳುವುದಕ್ಕೆ ಮತ್ತು ಅದರಲ್ಲಿ ಜೀವಿಸುವುದಕ್ಕೆ ಹಾಗೂ ಭಗವಂತನಲ್ಲಿ ದೈವಿಕವಾಗಿ ಜೀವಿಸುವುದಕ್ಕೆ ಮಿಥ್ಯೆಯ ಹಾಗೂ ಪ್ರತ್ಯೇಕಿಸುವ ವ್ಯಕ್ತಿವಿಶಿಷ್ಟತೆ ಮಾಯವಾಗುವುದು ಅವಶ್ಯವಾದ ನಿಬಂಧನೆಯಾಗಿರುತ್ತದೆ. ಆದರೆ ಇದನ್ನು ನಾವು ಜಗತ್ತಿನಲ್ಲಿ ಹಾಗೂ ಅದರಲ್ಲಿಯ ಜೀವನದಲ್ಲಿ ಕೈಕೊಳ್ಳಬಲ್ಲೆವು.

*

ನನ್ನ ಸತ್ಯ ಅಜ್ಞಾನವನ್ನು ಮತ್ತು ಮಿಥ್ಯೆಯನ್ನು ತಿರಸ್ಕರಿಸುತ್ತದೆ ಮತ್ತು ಜ್ಞಾನದತ್ತ ಚಲಿಸುತ್ತದೆ, ಅಂಧಕಾರವನ್ನು ತಿರಸ್ಕರಿಸುತ್ತದೆ ಮತ್ತು ಪ್ರಕಾಶದತ್ತ ಚಲಿಸುತ್ತದೆ, ಅಹಂಮನ್ಯತೆಯನ್ನು ತಿರಸ್ಕರಿಸುತ್ತದೆ ಮತ್ತು ದಿವ್ಯಾತ್ಮನತ್ತ ಚಲಿಸುತ್ತದೆ, ಅಪರಿಪೂರ್ಣತೆಗಳನ್ನು ತಿರಸ್ಕರಿಸುತ್ತದೆ ಮತ್ತು ಪರಿಪೂರ್ಣತೆಯತ್ತ ಚಲಿಸುತ್ತದೆ. ನನ್ನ ಸತ್ಯ ಕೇವಲ ಭಕ್ತಿಯ ಇಲ್ಲವೆ ಚೈತ್ಯಾತ್ಮಿಕ ಅಭಿವೃದ್ಧಿಯ ಸತ್ಯವಷ್ಟೇ ಅಲ್ಲ, ಆದರೆ ಅದು ಜ್ಞಾನ, ಪರಿಶುದ್ಧತೆ, ದೈವೀಬಲ ಹಾಗೂ ಸ್ಥಿರತೆ ಇವೆಲ್ಲವುಗಳ



ಸತ್ಯವೂ ಕೂಡ ಆಗಿದೆ, ಮತ್ತು ಈ ಎಲ್ಲ ಸಂಗತಿಗಳನ್ನು ಅವುಗಳ ಮಾನಸಿಕ, ಭಾವನಾತ್ಮಕ ಮತ್ತು ಪ್ರಾಣಿಕ ರೂಪಗಳಿಂದ ಅತಿಮಾನಸ ನೈಜತೆಯತ್ತ ಮೇಲಕ್ಕೆತ್ತುವುದಾಗಿದೆ.

**(22/46–47; 23/1049)** **– ಶ್ರೀ ಅರವಿಂದರು**

*

## ಅಹಂಕಾರದ ಸ್ಥಾನದಲ್ಲಿ ದೈವೀ ಪ್ರಜ್ಞೆಯನ್ನು ಸ್ಥಾಪಿಸಿರಿ

ಮಾನವ ಕುಲವನ್ನು ಮೊದಲು ಸೃಷ್ಟಿ ಮಾಡಿದಾಗ ಅಹಂಕಾರ ಏಕತೆಯನ್ನುಂಟು ಮಾಡುವ ಅಂಶವಾಗಿತ್ತು. ಅಹಂಕಾರದ ಸುತ್ತ ಸತ್ತೆಯ ವಿಭಿನ್ನ ಸ್ಥಿತಿಗಳು ಗುಂಪುಗೂಡಿದ್ದವು. ಆದರೆ ಈಗ ಅತಿಮಾನಸ ಕುಲ ಜನ್ಮ ತಾಳುವುದಕ್ಕೆ ತಯಾರಿ ಮಾಡಬೇಕಾಗಿರುವುದರಿಂದ ಅಹಂಕಾರ ಮಾಯವಾಗಬೇಕು, ಮತ್ತು ಅದು ಚೈತ್ಯಸತ್ತೆಗೆ ಸ್ಥಾನ ಬಿಟ್ಟುಕೊಡಬೇಕು. ದೈವೀ ಮಧ್ಯಸ್ಥಿಕೆಯಿಂದ ಆ ಚೈತ್ಯಸತ್ತೆ ನಿಧಾನವಾಗಿ ರೂಪುಗೊಳ್ಳುತ್ತ ಬಂದಿದೆ, ಅದರ ಉದ್ದೇಶ ಮಾನವ ಸತ್ತೆಯಲ್ಲಿ ಭಗವಂತನನ್ನು ಪ್ರಕಟಿಸುವುದಾಗಿದೆ.

ಚೈತ್ಯದ ಪ್ರಭಾವದಡಿಯಲ್ಲಿ ಭಗವಂತ ಮನುಷ್ಯನಲ್ಲಿ ಪ್ರಕಟನಾಗುತ್ತಾನೆ ಮತ್ತು ಹೀಗೆ ಅತಿಮಾನವ ಕುಲ ಬರುವುದರ ತಯಾರಿ ಮಾಡುತ್ತಾನೆ.

ಚೈತ್ಯ ಅಮರವಾಗಿರುತ್ತದೆ ಮತ್ತು ಚೈತ್ಯದ ಮುಖಾಂತರ ಪೃಥ್ವಿಯ ಮೇಲೆ ಅಮರತ್ವವನ್ನು ಸ್ಥಾಪಿಸಬಹುದು.

ಹಾಗಾಗಿ ಸದ್ಯ ಮಹತ್ವದ ಸಂಗತಿ ಎಂದರೆ ಮನುಷ್ಯ ತನ್ನ ಚೈತ್ಯವನ್ನು ಕಂಡುಕೊಳ್ಳುವುದಾಗಿದೆ, ಅದರೊಡನೆ ಏಕತೆ ಪಡೆಯುವುದಾಗಿದೆ ಮತ್ತು ಅಹಂಕಾರದ ಸ್ಥಾನದಲ್ಲಿ ಚೈತ್ಯ ಬರುವುದಕ್ಕೆ ಅನುವು ಮಾಡಿಕೊಡಬೇಕಾಗಿದೆ. ಅಹಂಕಾರ ಪರಿವರ್ತನೆಗೊಳ್ಳುವುದಕ್ಕೆ ಇಲ್ಲವೆ ಮಾಯವಾಗುವುದಕ್ಕೆ ಒತ್ತಾಯ ಬರುತ್ತದೆ.

*

ನೀವು ಈ ಕ್ಷಣ ಇಲ್ಲಿದ್ದೀರಿ ಎಂದರೆ ಪೃಥ್ವಿಯ ಮೇಲಿದ್ದೀರಿ, ಏಕೆಂದರೆ ಹಾಗಿರುವುದನ್ನು ನೀವು ಒಂದು ಕಾಲದಲ್ಲಿ ಆಯ್ದುಕೊಂಡಿದ್ದಿರಿ – ಅದರ ಬಗ್ಗೆ ನಿಮಗಾವ ನೆನಪೂ ಇಲ್ಲ, ಆದರೆ ಅದು ನನಗೆ ತಿಳಿದಿದೆ – ಆ ಕಾರಣದಿಂದಾಗಿಯೇ ನೀವಿಲ್ಲಿದ್ದೀರಿ. ಸರಿ, ಕಾರ್ಯದ ಮಟ್ಟಕ್ಕೆ ನೀವು ಮೇಲೇರಿ

ಹೋಗಬೇಕು. ನೀವು ಹೆಣಗಬೇಕು, ಎಲ್ಲ ದೌರ್ಬಲ್ಯಗಳ ಹಾಗೂ ಮಿತಿಗಳ ಮೇಲೆ ಜಯ ಸಾಧಿಸಬೇಕು. ಎಲ್ಲದಕ್ಕಿಂತಲೂ ಹೆಚ್ಚಾಗಿ ನಿಮ್ಮ ಅಹಂಕಾರಕ್ಕೆ "ನಿನ್ನ ಗಳಿಗೆ ಕೊನೆಗೊಂಡಿತು" ಎಂದು ನೀವು ಹೇಳಬೇಕು. ನಮಗೆ ಅಹಂಕಾರವಿಲ್ಲದ ಕುಲ ಬೇಕಾಗಿದೆ, ಅಹಂಕಾರದ ಸ್ಥಾನದಲ್ಲಿ ಆ ಕುಲ ದೈವೀಪ್ರಜ್ಞೆಯನ್ನು ಹೊಂದಿರಬೇಕಾಗಿದೆ. ಅಂತಹದನ್ನು ನಾವು ಬಯಸುತ್ತೇವೆ: ಮಾನವ ಕುಲ ತನ್ನನ್ನು ತಾನೇ ಅಭಿವೃದ್ಧಿಪಡಿಸಿಕೊಳ್ಳಲು ಹಾಗೂ ಅತಿಮಾನಸ ಸತ್ತೆ ಜನ್ಮ ತಾಳುವಂತೆ ಮಾಡಲು ಅನುವು ಮಾಡಿಕೊಡುವ ದೈವೀಪ್ರಜ್ಞೆ ನಮಗೆ ಬೇಕಾಗಿದೆ.

*

ಭಗವಂತ ಪ್ರಕಟವಾಗುತ್ತಿದ್ದಾನೆ ಎಂಬುದರ ಬಗ್ಗೆ ಜಗತ್ತು ಅರಿವುಳ್ಳದ್ದಾಗುವಂತಾಗಲಿ ಎಂದು ನಾನು ಹೇಳಬಯಸುತ್ತೇನೆ.

**(16/432; 11/307; 15/7) – ಶ್ರೀಮಾತೆ**

*

ಭಗವಂತ ತನ್ನನ್ನು ತಿಳಿಯಪಡಿಸುವುದಕ್ಕಾಗಿ ಕಾದುಕೊಂಡಿದ್ದಾನೆ, ಅದು ಹಾಗಿರುವಾಗ ಮನುಷ್ಯ ಅವನಿಗಾಗಿ ಎಲ್ಲೆಡೆ ಅರಸುತ್ತಾನೆ ಮತ್ತು ಎಲ್ಲೆಡೆಗಳಲ್ಲಿ ಭಗವಂತನ ಪ್ರತೀಕಗಳನ್ನು ಸೃಷ್ಟಿಸುತ್ತಾನೆ, ಆದರೆ ಆ ಇಡೀ ಸಮಯದಲ್ಲಿ ಅವನು ಕೇವಲ ತನ್ನ ಮನಸ್ಸಿನ ಅಹಂಕಾರದ, ಪ್ರಾಣಿಕ ಅಹಂಕಾರದ ಪ್ರತೀಕಗಳನ್ನು ನಿಜವಾಗಿ ಕಂಡುಕೊಳ್ಳುತ್ತಾನೆ, ಪರಿಣಾಮಕಾರಿಯಾಗಿ ಸ್ಥಾಪಿಸುತ್ತಾನೆ ಮತ್ತು ಪೂಜಿಸುತ್ತಾನೆ. ಈ ಅಹಂಕಾರದ ತಿರುಗುಗೂಟ (pivot) ವನ್ನು ಕೈಬಿಟ್ಟಾಗ ಮತ್ತು ಅಹಂಕಾರದ ಬೇಟೆ ನಿಂತುಹೋದಾಗ ಮನುಷ್ಯ ತನ್ನ ಆಂತರಿಕ ಹಾಗೂ ಬಾಹ್ಯ ಜೀವನದಲ್ಲಿ ಆಧ್ಯಾತ್ಮಿಕತೆಯನ್ನು ಸಿದ್ಧಿಸಿಕೊಳ್ಳುವ ನಿಜವಾದ ಮೊದಲ ಅವಕಾಶವನ್ನು ದೊರಕಿಸುತ್ತಾನೆ. ಅದಷ್ಟೇ ಸಾಕಾಗುವುದಿಲ್ಲ, ಆದರೆ ಅದು ಪ್ರಾರಂಭ, ನಿಜವಾದ ದ್ವಾರದಂತಿರುತ್ತದೆ, ಕುರುಡಾಗಿ ಪ್ರವೇಶಿಸುವುದಿರುವುದಿಲ್ಲ.

ಆಧ್ಯಾತ್ಮಿಕ ಮನುಷ್ಯ ಅಹಂಕಾರವನ್ನು ಕಳೆದುಕೊಳ್ಳುವುದರ ಮೂಲಕ ಎಲ್ಲರಲ್ಲಿಯೂ ಏಕೈಕನಾಗಿರುವ ಮತ್ತು ಎಲ್ಲದರಲ್ಲಿ ಪರಿಪೂರ್ಣ ಹಾಗೂ ಸಂಪೂರ್ಣನಾಗಿರುವ ದಿವ್ಯಾತ್ಮನನ್ನು ಕಂಡುಕೊಳ್ಳುವುದನ್ನು ಅರಸುತ್ತಾನೆ ಮತ್ತು ಅವನಲ್ಲಿ ಜೀವಿಸುವುದರ ಮೂಲಕ ಅವನ ಪರಿಪೂರ್ಣತೆಯ ಪ್ರತೀಕದಲ್ಲಿ ಬೆಳೆಯುವುದನ್ನು ಬಯಸುತ್ತಾನೆ – ವ್ಯಕ್ತಿಗತವಾಗಿ ಮನುಷ್ಯ ತನ್ನ ಸ್ವಭಾವದ



ಎಲ್ಲವನ್ನೂ ಅಪ್ಪಿಕೊಳ್ಳುವ ವಿಶ್ವಂಭರತೆ ಹಾಗೂ ಅದರ ಪ್ರಜ್ಞಾಪೂರ್ಣ ಪರಿಧಿ ಇವುಗಳಿದ್ದಾಗಲೂ ಅವನನ್ನು ಅರಸುತ್ತಾನೆ ಎಂಬುದನ್ನು ಗಮನಿಸಬೇಕು.

*

ದೇಹದ ಅರಿವಿಗೆ ಅಂಟಿಕೊಂಡ ರೀತಿಯಲ್ಲಿ ಮಾನಸಿಕ ಹಾಗೂ ಪ್ರಾಣಿಕ ಅಹಂಕಾರದ ರೂಪಗೊಳ್ಳುವಿಕೆ, ಪ್ರಗತಿಪರ ಉತ್ಕ್ರಾಂತಿಯಲ್ಲಿ, ವಿಶ್ವವ್ಯಾಪಿ ದೈವೀ ಪ್ರಾಣದ ಮೊದಲ ಶ್ರೇಷ್ಠ ಶ್ರಮವಾಗಿತ್ತು, ಏಕೆಂದರೆ ಅದು ಭೌತದ್ರವ್ಯದೊಳಗಿಂದ ಪ್ರಜ್ಞಾಪೂರ್ಣ ವ್ಯಕ್ತಿವಿಶಿಷ್ಟತೆಯನ್ನು ಸೃಷ್ಟಿಸಲು ಈ ಸಾಧನವನ್ನು ಕಂಡುಕೊಂಡಿತು. ಸೀಮಿತವಾದ ಈ ಅಹಂಕಾರದ ಕರಗುವಿಕೆ ಒಂದು ಷರತ್ತಾಗಿದೆ, ಅದೇ ವಿಶ್ವವ್ಯಾಪಿ ದೈವೀ ಪ್ರಾಣ ತನ್ನ ಅಭೀಷ್ಟ ಸಿದ್ಧಿಯನ್ನು ತಲುಪಲು ಆ ಕರಗುವಿಕೆ ಒಂದು ಅವಶ್ಯವಾದ ಸಾಧನವಾಗಿದೆ, ಏಕೆಂದರೆ ಹೀಗೆ ಮಾತ್ರ ಪ್ರಜ್ಞಾವಂತ ವ್ಯಕ್ತಿ ತನ್ನ ವಿಶ್ವಾತೀತ ಆತ್ಮವನ್ನಾಗಲಿ ಇಲ್ಲವೆ ಅವನ ನಿಜವಾದ ದೈವೀ ಪುರುಷನನ್ನಾಗಲಿ ಕಂಡುಕೊಳ್ಳಬಹುದು.

*

ವ್ಯಕ್ತಿವಿಶಿಷ್ಟರಾಗುವುದನ್ನು ದಾಟಿಹೋದ ನಂತರ ನಾವು ನಿಜವಾದ ದೈವೀ ಪುರುಷರಾಗುತ್ತೇವೆ, ಅಹಂಕಾರ ಸಹಾಯಕವಾಗಿತ್ತು, ಅಹಂಕಾರವೇ ಅಡ್ಡಿಯನ್ನುಂಟು ಮಾಡುತ್ತದೆ.

**(CWSA 15/239–40, CWSA 20/341; SABCL 16/377) – ಶ್ರೀ ಅರವಿಂದರು**

*

## ಕ್ರಿಯಾತ್ಮಕ ಆಧ್ಯಾತ್ಮಿಕತೆಯನ್ನು ಜೀವನಕ್ಕೆ ಅನ್ವಯಿಸುವುದು

ಕಲೆ, ಕಾವ್ಯ ಇಲ್ಲವೆ ರಾಜಕೀಯ ಇಲ್ಲವೆ ಸಾಮಾಜಿಕ ಜೀವನ ಇವುಗಳಲ್ಲಿ ಆಧ್ಯಾತ್ಮಿಕತೆ ಯಾವ ಪುರುಷಾರ್ಥಕ್ಕೆ ಬೇಕಾಗುತ್ತದೆ ಎಂದು ಕೆಲವೊಮ್ಮೆ ನಮ್ಮನ್ನು ಕೇಳಲಾಗುತ್ತದೆ – ಯಾವುದೇ ಭಾರತೀಯನ ಬಾಯಿಂದ ಇಂತಹ ಅಜ್ಞಾನದ ತಪ್ಪೊಪ್ಪಿಗೆ, ಸದ್ಯದ ರಾಷ್ಟ್ರೀಯ ಇತಿಹಾಸದಲ್ಲಿ ವಿಚಿತ್ರವಾಗಿದೆ – ನಾನು ಇತ್ತೀಚೆಗೆ ಕಂಡುಕೊಂಡ ಆಧ್ಯಾತ್ಮಿಕತೆಯ ಠೇಂಕಾರ (twang) ಎಂದು ವರ್ಣಿಸಲಾದದ್ದು ಕಲೆ ಮತ್ತು ಕಾವ್ಯಗಳಲ್ಲಿ ಒಳಸೇರಿದರೆ ಅವು ಯಾವ ರೀತಿಯಲ್ಲಿ ಹೆಚ್ಚು ಒಳ್ಳೆಯವಾಗಬಲ್ಲವು, ಮತ್ತು ಸಮಾಜದ ಇಲ್ಲವೆ ರಾಜಕೀಯದ ವ್ಯಾವಹಾರಿಕ ಸಮಸ್ಯೆಗಳು ಈ ಅಂಶದಿಂದ ಯಾವ ಲಾಭ ಪಡೆಯಬಲ್ಲವು? ಸದ್ಯ ಇಲ್ಲಿ ಸಾಕಷ್ಟು

ಕಾಲದಿಂದ ಉಳಿದುಕೊಂಡು ಬಂದಿರುವ ಯುರೋಪಿಯನ್‌ರ ವಿಚಾರದ ಪ್ರತಿಧ್ವನಿ ಇದೆ: ಧರ್ಮ ಹಾಗೂ ಆಧ್ಯಾತ್ಮಿಕತೆ ಒಂದೆಡೆಗೆ, ಬೌದ್ಧಿಕ ಚಟುವಟಿಕೆ ಹಾಗೂ ವ್ಯಾವಹಾರಿಕ ಜೀವನ ಇನ್ನೊಂದೆಡೆಗೆ ಇದ್ದುಕೊಂಡಿವೆ, ಅವೆರಡೂ ಅತ್ಯಂತ ಭಿನ್ನವಾದ ವಿಷಯಗಳು, ಮತ್ತು ಅವುಗಳಲ್ಲಿ ಪ್ರತಿಯೊಂದನ್ನು ಅದರದೇ ಪ್ರತ್ಯೇಕ ರೀತಿಗಳಲ್ಲಿ ಮತ್ತು ಅದರದೇ ಇಡಿಯಾಗಿ ಪ್ರತ್ಯೇಕವಾದ ತತ್ವಗಳಿಗೆ ವಿಧೇಯವಾಗಿದ್ದುಕೊಂಡು ಬೆಂಬತ್ತಬೇಕು. ಈ ಆದರ್ಶದ ಆಳಿಕೆಯನ್ನು ಭಾರತದ ಮುಂದೆ ಮೇಲಕ್ಕೆತ್ತಿ ಹಿಡಿಯುವುದರಿಂದ ಆ ದೇಶವನ್ನು ತಾತ್ವಿಕವಾದುದರತ್ತ ನಿರ್ದೇಶಿಸುವೆವು ಮತ್ತು ಕ್ರಿಯಾತ್ಮಕವಾದ ಹಾಗೂ ಪ್ರಾಯೋಗಿಕವಾದುದರಿಂದ ದೂರ ಎಳೆದೊಯ್ಯುವೆವು ಇಲ್ಲವೆ ಪ್ರಗತಿ ವಿರೋಧಿಯಾದ ಮತ್ತು ಪೂರ್ವಸ್ಥಿತಿಗೆ ಮರಳಿ ಕರೆದೊಯ್ಯುವ ತರ್ಕಬಾಹಿರ ಧಾರ್ಮಿಕತೆಯನ್ನು ಬೋಧಿಸುವೆವು ಮತ್ತು ಅದನ್ನು ತರ್ಕಬದ್ಧತೆ ಹಾಗೂ ಆಧುನಿಕತೆಯಿಂದ ಬೇರೆಡೆ ಹೊರಳಿಸುವೆವು ಎಂಬ ಸಂಶಯವನ್ನು ನಾವು ಎದುರಿಸಬೇಕಾಗುವುದು. ಭಾರತ ದಕ್ಷ ಹಾಗೂ ಸರಿಯಾದ ಸಂಘಟಣೆಯಿರುವ ದೇಶವಾಗಿ ಆಧುನಿಕ ಜಗತ್ತಿನ ಆಘಾತಗಳಿಂದ ರಕ್ಷಣೆ ಪಡೆಯಬೇಕಾದರೆ ಅದು ತರ್ಕಬದ್ಧತೆಯನ್ನು, ಆಧುನಿಕತೆಯನ್ನು ಕಾಪಾಡಿಕೊಂಡು ಬರಬೇಕು. ಹಾಗಾಗಿ ಆಧ್ಯಾತ್ಮಿಕತೆಯ ನಿಯಮಕ್ಕೆ ಒಳಪಟ್ಟ ಪುನರುಜ್ಜೀವನ ಎಂದರೇನು ಎಂಬುದರ ಬಗ್ಗೆ ಸ್ಪಷ್ಟ ಕಲ್ಪನೆ ಮಾಡಿಕೊಳ್ಳಬೇಕಾದ ಆವಶ್ಯಕತೆ ಇದೆ.

ಆದರೆ ಈ ಆದರ್ಶಕ್ಕೆ ವ್ಯತಿರಿಕ್ತವಾಗಿರುವುದೇನು ಎಂಬುದನ್ನು ಮೊದಲು ವಿವರಿಸೋಣ. ಈ ಭೌತಿಕ ಜೀವನವನ್ನು ಕೇವಲ ತಾತ್ಕಾಲಿಕ ಒಣಜಂಬವೆಂದು ಪರಿಗಣಿಸಬೇಕೆಂದಾಗಲಿ, ನಾವೆಲ್ಲ ಆದಷ್ಟು ಬೇಗನೇ ವಿರಕ್ತ ಸನ್ಯಾಸಿಗಳಾಗಲು ಯತ್ನಿಸಬೇಕೆಂದಾಗಲಿ, ನಮ್ಮ ಸಾಮಾಜಿಕ ಜೀವನವನ್ನು ಮಠ ಜೀವನಕ್ಕೋ ಗುಹಾ ಜೀವನಕ್ಕೋ ಪರ್ವತಶೀಖರ ವಾಸಕ್ಕೋ ಸಿದ್ಧಪಡಿಸಬೇಕೆಂದಾಗಲಿ ಅಥವಾ ಇಹಲೋಕಕ್ಕಾಗಲಿ ಮಾನವ ಜನಾಂಗದ ಸಮಷ್ಟಿ ಪ್ರಗತಿಗಾಗಲಿ ಯಾವ ಬಗೆಯ ಸಂಬಂಧವೂ ಇಲ್ಲದ ಯಾವುದೋ ಧ್ಯೇಯದ ಹೊರತಾಗಿ ಪ್ರಗತಿ ಸಹಾಯಕವಾದ ಉದಾತ್ತ ಆದರ್ಶಗಳೇನೂ ಇಲ್ಲದ ನಿಷ್ಕ್ರಿಯ ಜೀವನವನ್ನಾಗಿ ಮಾಡಬೇಕೆಂದಾಗಲಿ ಈ ಆಧ್ಯಾತ್ಮಿಕತೆಯ ಅರ್ಥವಲ್ಲವೆಂಬುದು ನಿಶ್ಚಯ. ಕೊಂಚಕಾಲ ಅದುವೇ ಭಾರತೀಯರ ಪ್ರವೃತ್ತಿಯಾಗಿತ್ತೇನೋ, ಆದರೆ ಅದು ಅವರ ಪೂರ್ಣ ಪ್ರವೃತ್ತಿಯಾಗಿ ಎಂದೂ ಇದ್ದಿರಲಿಲ್ಲ. ರಾಷ್ಟ್ರೀಯಸತ್ತೆಯ ಸಮಗ್ರ ರೂಪವನ್ನು ಸೀಮಿತ ಸಿದ್ಧಾಂತಗಳಿಗೆ, ಬಾಹ್ಯಾಚಾರಗಳಿಗೆ ಯಾವುದೋ ನಿರ್ದಿಷ್ಟ ಧರ್ಮದ ತತ್ತ್ವಸೂತ್ರಗಳಿಗೆ ಅನುಗುಣವಾಗುವಂತೆ ಅಣಿಗೊಳಿಸಲು ಪುರಾತನ



ಕಾಲದ ಸಮಾಜಗಳು ಎಷ್ಟೋಬಾರಿ ಯತ್ನಿಸಿದಂತೆ ಈಗ ನಾವು ಯತ್ನಿಸಬೇಕೆಂದೂ ಆಧ್ಯಾತ್ಮಿಕತೆಯ ಅರ್ಥವಲ್ಲ; ಈ ಗತಕಾಲದ ಮನಃಪ್ರವೃತ್ತಿಯ ಹಾಗೂ ರೂಢಿಯ ಬಲದಿಂದ ಕೆಲವರಲ್ಲಿ ಈಗಲೂ ಆ ಕಲ್ಪನೆ ಉಳಿದುಕೊಂಡಿದೆ; ತೀರಾ ವಿಭಿನ್ನ ಧರ್ಮಸಂಪ್ರದಾಯಗಳಿಂದ ನಿಬಿಡಿತವಾಗಿದ್ದು, ಹಿಂದೂ ಧರ್ಮ ಇಸ್ಲಾಂ ಧರ್ಮ ಕ್ರೈಸ್ತ ಧರ್ಮಗಳಂತಹ ಮೂರು ಪ್ರತ್ಯೇಕ ಸ್ವರೂಪದ ವ್ಯಾಪಕ ಧರ್ಮಗಳಿಗೂ ಆಶ್ರಯ ನೀಡಿರುವ ದೇಶದಲ್ಲಂತೂ – ಇವುಗಳೊಂದೊಂದರಿಂದಲೂ ಹುಟ್ಟಿಕೊಂಡಿರುವ ವಿಶಿಷ್ಟ ರೂಪಗಳನ್ನು ಬೇರೆ ಹೇಳಬೇಕಾಗಿಲ್ಲ – ಆ ಬಗೆಯ ಯತ್ನ ಅಪೇಕ್ಷಣೀಯವಾದರೂ ಕಾರ್ಯ ಸಾಧ್ಯವಲ್ಲವೆಂಬುದು ಸ್ಪಷ್ಟ. ಆಧ್ಯಾತ್ಮಿಕತೆಯು ಯಾವ ನಿರ್ದಿಷ್ಟ ಧರ್ಮಕ್ಕಿಂತಲೂ ವಿಶಾಲತರ ಕಲ್ಪನೆ. ಈಗ ನಮ್ಮ ಕಣ್ಣಿಗೆ ಗೋಚರಿಸುತ್ತಿರುವ ವಿಶಾಲ ವಿಚಾರಗಳ ಹಿನ್ನೆಲೆಯಲ್ಲಿ, ಪರಮೋತ್ಕೃಷ್ಟ ಧರ್ಮವಾದರೂ ಆ ಒಂದು ವಿಶ್ವವ್ಯಾಪಕ ಧರ್ಮದ ಒಂದು ಪಂಥಕ್ಕಿಂತ ಇಲ್ಲವೆ ಶಾಖೆಗಿಂದ ದೊಡ್ಡದೇನೂ ಆಗುವುದಿಲ್ಲ; ಹಾಗೆಂದರೆ ಸನಾತನದ ಬಗೆಗೆ, ದಿವ್ಯ ಸತ್ತೆಯ ಬಗೆಗೆ, ಪರಮಾತ್ಮನ ಬಗೆಗೆ ಮುಂದಿನ ಮಾನವ ಜನಾಂಗವು ನಡೆಸುವ ಅನ್ವೇಷಣೆಯಲ್ಲಿ ಆಧ್ಯಾತ್ಮಿಕತೆಯು ಏಕತೆಯ ಮೂಲವೆಂದೂ, ಮಾನವ ಜೀವನದ ಮೌಲ್ಯಗಳಿಗೂ ಸನಾತನ ಮತ್ತು ದಿವ್ಯ ಮೌಲ್ಯಗಳಿಗೂ ಒಂದು ಬಗೆಯ ಸಮೀಕರಣವನ್ನು ಸಾಧಿಸುವ ಯತ್ನ, ಹೆಚ್ಚು ಹೆಚ್ಚಾದ ಸಾಮೀಪ್ಯವನ್ನು ಸಾಧಿಸುವ ಯತ್ನ ಎಂದೂ ನಮಗೆ ಅರ್ಥವಾಗುವುದು.

ನಮ್ಮ ಅನ್ವೇಷಣೆಯ ವ್ಯಾಪ್ತಿಯಿಂದ ಯಾವುದನ್ನೇ ಆಗಲಿ, ಮಾನವ ಜೀವನದ ಯಾವುದೇ ಉದಾತ್ತ ಧ್ಯೇಯವನ್ನಾಗಲಿ, ನಮ್ಮ ಆಧುನಿಕ ಜಗತ್ತಿನ ಯಾವುದೇ ಮಹತ್ತರ ಸಮಸ್ಯೆಯನ್ನಾಗಲಿ, ಯಾವುದೇ ರೂಪದ ಮಾನವ ಕಾರ್ಯಕಲಾಪವನ್ನಾಗಲಿ, ಅಭಿವೃದ್ಧಿಯನ್ನೂ ವಿಸ್ತರಣವನ್ನೂ ಹೆಚ್ಚು ಹೆಚ್ಚಾದ ಸತ್ತ್ವಹರ್ಷಗಳನ್ನೂ ಬೆಳಕು, ಶಕ್ತಿ ಪರಿಪೂರ್ಣತೆಗಳನ್ನೂ ಗಳಿಸಿಕೊಳ್ಳಬೇಕೆಂದು ಮನುಷ್ಯಾತ್ಮಕ್ಕಿರುವ ಹೆಬ್ಬಯಕೆಯ ಯಾವುದೇ ವ್ಯಾಪಕ ಇಲ್ಲವೆ ಸಹಜ ಪ್ರೇರಣೆಯನ್ನಾಗಲಿ ಅಥವಾ ಆ ಅಪೇಕ್ಷೆಯನ್ನು ಸಾಧಿಸಿಕೊಳ್ಳುವ ವಿಶಿಷ್ಟ ಸಾಧನವನ್ನಾಗಲಿ ಬಿಟ್ಟುಬಿಡಬೇಕೆಂದೂ ಆಧ್ಯಾತ್ಮಿಕತೆಯ ಅರ್ಥವಲ್ಲ. ಮನಃಶಕ್ತಿಯಿಲ್ಲದ ಆತ್ಮವಾಗಲಿ, ಶರೀರ ಶಕ್ತಿಯಿಲ್ಲದ ಆತ್ಮವಾಗಲಿ ಆದರ್ಶ ಮಾನವ ಸ್ವರೂಪವಲ್ಲ: ಆದುದರಿಂದ ಮಾನವನ ಆಧ್ಯಾತ್ಮಿಕ ಪ್ರವೃತ್ತಿಯು ಮನಸ್ಸನ್ನಾಗಲಿ, ಪ್ರಾಣವನ್ನಾಗಲಿ, ಶರೀರವನ್ನಾಗಲಿ ಕಡೆಗಣಿಸಲಾಗದು ಅಥವಾ ಅವು ಅಲ್ಪವೆಂದೂ ಪರಿಗಣಿಸಲಾಗದು; ಬದಲಾಗಿ, ಅವು ಬಹು ಮಹತ್ವಪೂರ್ಣವೆಂದೂ

ಅನರ್ಘ್ಯವೆಂದೂ ಪರಿಗಣಿಸಬೇಕು, ಏಕೆಂದರೆ ಅವುಗಳೇ ಮನುಷ್ಯಚೇತನದ ಬದುಕಿನ ಗುಣಧರ್ಮಗಳು, ಸಾಧನಗಳು. ತನುಮನೋಪ್ರಾಣಗಳ ಸ್ವಾಸ್ಥ್ಯಕ್ಕೂ ಅಭಿವೃದ್ಧಿಗೂ ಓಜಸ್ಸಿಗೂ ಹಿಂದಿನ ಗ್ರೀಕ್ ವಿಚಾರಧಾರೆಯಾಗಲಿ ಇಂದಿನ ವೈಜ್ಞಾನಿಕ ವಿಚಾರಧಾರೆಯಾಗಲಿ ಎಷ್ಟು ಮಹತ್ತ್ವ ನೀಡಿತ್ತೋ ಪ್ರಾಚೀನ ಭಾರತೀಯ ಸಂಸ್ಕೃತಿಯೂ ಅಷ್ಟೇ ಮಹತ್ತ್ವ ನೀಡಿತ್ತು; – ಆದರೆ ಅದು ಬೇರೊಂದು ಉದ್ದೇಶಕ್ಕಾಗಿ, ಇನ್ನಷ್ಟು ಮಹತ್ತರ ಧ್ಯೇಯಕ್ಕಾಗಿ, ಆದ ಕಾರಣ, ಈ ತನುಮನೋಪ್ರಾಣಗಳ ಹಿತಕರ ಪೂರ್ಣತೆಗೆ ಸಾಧಕವಾಗುವ ಹಾಗೂ ಅವುಗಳಿಗೆ ಸೇರಿರುವ ಪ್ರತಿಯೊಂದು ವಿಚಾರಕ್ಕೂ, ಎಂದರೆ ಬುದ್ಧಿವಿಚಾರ ಕ್ರಿಯೆಗೆ, ವಿಜ್ಞಾನ ಹಾಗೂ ತತ್ತ್ವಜಿಜ್ಞಾಸೆಗೆ. ರಸಿಕ ಸತ್ತೆಯ ತೃಪ್ತಿಗೆ ಮತ್ತು ಚಿಕ್ಕಪುಟ್ಟ ಇಲ್ಲವೆ ದೊಡ್ಡದೊಡ್ಡ ಸಮಸ್ತ ಕಲೆಗಳಿಗೆ, ದೇಹದ ಆರೋಗ್ಯವೃದ್ಧಿಗಳಿಗೆ, ಮಾನವ ಜನಾಂಗದ ಭೌತಿಕ ಹಾಗೂ ಆರ್ಥಿಕ ಯೋಗಕ್ಷೇಮಕ್ಕೆ ಸುಖ ಸಮಾಧಾನ ಸಮೃದ್ಧಿಗಳಿಗೆ, – ಭಾರತದಲ್ಲಿ ದಾರಿದ್ರ್ಯವೇ ಆದರ್ಶವಾಗಿತ್ತೆಂದು ಕೆಲವರು ಹೇಳುತ್ತಾರೆ, ಆದರೆ ಹಾಗೆ ಎಂದೂ ಇರಲಿಲ್ಲ, ನಗ್ನತೆಯಾಗಲಿ ಹೊಲಸಾಗಲಿ ಭಾರತದ ಆಧ್ಯಾತ್ಮಿಕತೆಗೆ ಅವಶ್ಯ ಹಿನ್ನೆಲೆಯಾಗಿಯೂ ಇರಲಿಲ್ಲ, – ಮತ್ತು ದೇಶದ ಸರ್ವಸಾಮಾನ್ಯ ಸೈನಿಕ, ರಾಜಕೀಯ ಮತ್ತು ಸಾಮಾಜಿಕ ಶಕ್ತಿಸಾಮರ್ಥ್ಯಗಳಿಗೆ ಭಾರತೀಯ ಸಂಸ್ಕೃತಿಯು ನಿರಾತಂಕವಾದ ಅವಕಾಶ ನೀಡಿತ್ತು. ಅವುಗಳ ಧ್ಯೇಯ ಅತ್ಯುಚ್ಚವಾಗಿತ್ತು, ಆದರೆ ಅವು ಸ್ಥಾಪಿಸಬಯಸಿದ ತಳಹದಿಯೂ ಸಹ ಸ್ಥಿರವಾಗಿತ್ತು, ವಿಶಾಲವಾಗಿತ್ತು; ಈ ಮೊದಲ ಸಾಧನಗಳ ಬಗೆಗೆ ವಹಿಸಿದ ಎಚ್ಚರಿಕೆಯೂ ಮಹತ್ತರವಾಗಿತ್ತು. ನವಭಾರತವೂ ಅದೇ ಧ್ಯೇಯವನ್ನು ನೂತನ ವಿಧಾನಗಳಲ್ಲಿ ನವೀನ ಹಾಗೂ ವ್ಯಾಪಕ ವಿಚಾರಗಳ ಉಜ್ವಲ ಪ್ರೇರಣೆಯಿಂದಲೂ ಇನ್ನಷ್ಟು ಜಟಿಲ ಪರಿಸ್ಥಿತಿಗಳಿಗೆ ಸೂಕ್ತವಾಗಬಲ್ಲ ಸಾಧನೋಪಾಯದಿಂದಲೂ ಸಾಧಿಸಬಯಸುವುದು ಅನಿವಾರ್ಯ; ಆದರೆ ಭಾರತದ ನಯೋಪಾಯವೂ ಅದರ ಕಾರ್ಯಪ್ರವೃತ್ತಿಯೂ ಅದರ ಮನಃಪ್ರಕೃತಿಯ ನಮ್ಯತೆ ವಿವಿಧತೆಗಳೂ ಪೂರ್ವ ಕಾಲದಲ್ಲಿದ್ದವುಗಳಿಗಿಂತ ಹೆಚ್ಚಾಗುವುವೇ ಹೊರತು ಕಡಿಮೆಯಾಗಲಾರವು, ಆಧ್ಯಾತ್ಮಿಕ ಪ್ರವೃತ್ತಿಯು ಐಕಾಂತಿಕವಾಗಿಯೇ ಇರಬೇಕಾಗಿಲ್ಲ; ಅದು ಸರ್ವ ಸಮಾವೇಶವಾಗಬಲ್ಲದು, ಅದು ಪೂರ್ಣವಾಗಿ ಬೆಳೆದಾಗ ಹಾಗೆ ಸರ್ವ ಸಮಾವೇಶಕವಾಗಲೂಬೇಕು.

ಆದರೆ ಜೀವನದ ಆಧ್ಯಾತ್ಮಿಕ ದೃಷ್ಟಿಗೂ ಕೇವಲ ಭೌತಿಕ ಹಾಗೂ ಮಾನಸಿಕ ದೃಷ್ಟಿಗೂ ಬಲುದೊಡ್ಡ ಅಂತರವಿದೆ. ತನುಮನೋಪ್ರಾಣಗಳು ಮಾನವನ



ಸಾಧನಗಳೇ ಹೊರತು ಧ್ಯೇಯಗಳಲ್ಲವೆಂದು ಆಧ್ಯಾತ್ಮಿಕ ದೃಷ್ಟಿ ಹೇಳುವುದು, ಅಲ್ಲದೆ ಅವನ ಅಂತಿಮ ಹಾಗೂ ಪರಮ ಸಾಧನಗಳಲ್ಲವೆಂದೂ ಹೇಳುವುದು; ಅದಕ್ಕೆ ಅವು ಮಾನವನ ಬಾಹ್ಯ ನಿಮಿತ್ತ ಸತ್ತೆಯಾಗಿ ಕಾಣುತ್ತವೆಯೇ ಹೊರತು ಅವನ ಸಮಗ್ರ ಸತ್ತೆಯಾಗಿ ಕಾಣುವುದಿಲ್ಲ. ಆ ದೃಷ್ಟಿ ಸಮಸ್ತ ಸಾಂತವಸ್ತುಗಳ ಹಿನ್ನೆಲೆಯಲ್ಲಿ ಅನಂತವನ್ನು ಕಾಣುವುದು; ಸಾಂತದ ಮಹತ್ತ್ವವನ್ನು ಉಚ್ಚತರ ಅನಂತ ಮೌಲ್ಯಗಳ ಮೂಲಕ ನಿರ್ಣಯಿಸುವುದು; ಈ ಸಾಂತವಸ್ತುಗಳು ಆ ಅನಂತದ ಅಪರಿಪೂರ್ಣ ರೂಪಾಂತರಗಳಾಗಿದ್ದು, ತಮ್ಮನ್ನು ಇನ್ನಷ್ಟು ವಾಸ್ತವಿಕ ರೂಪದಲ್ಲಿ ಅಭಿವ್ಯಕ್ತಪಡಿಸಿಕೊಳ್ಳುವ ಸಲುವಾಗಿ ಅನಂತದೆಡೆಗೆ ಬರಲು ಸದಾ ಹವಣಿಸುತ್ತವೆ. ಆಧ್ಯಾತ್ಮಿಕ ಪ್ರವೃತ್ತಿಯು ಮಾನವನ ಹಾಗೂ ಜಗತ್ತಿನ ಹಿಂದುಗಡೆ ಮಾತ್ರವಲ್ಲದೆ, ಮಾನವನ ಹಾಗೂ ಜಗತ್ತಿನ ಅಂತರಂಗದಲ್ಲೂ ಸಹ, ತೋರಿಕೆಯ ಸತ್ಯಕ್ಕಿಂತ ಮಹತ್ತರವಾದ ಸತ್ಯವನ್ನು ಕಾಣುವುದು, ಮತ್ತು ಮಾನವನಲ್ಲಿ ಅಂತರ್ಗತವಾಗಿರುವ ಈ ಆತ್ಮವೇ, ಈ ಸತ್ತೆಯೇ, ಈ ದಿವ್ಯವಸ್ತುವೆಂದೂ ಅವನಲ್ಲಿರುವ ಪರಮ ಮಹತ್ವಪೂರ್ಣ ವಸ್ತುವೆಂದೂ ಅವನಲ್ಲಿರುವ ಬೇರೆಲ್ಲವನ್ನೂ ಅದು ಯಾವ ರೀತಿಯಲ್ಲಾದರೂ ಹೊರತಂದು ಪ್ರಕಟಪಡಿಸಲು ಯತ್ನಿಸಬೇಕೆಂದೂ ಹೇಳುವುದು; ಜಗತ್ತಿನಲ್ಲಿರುವ ಈ ಆತ್ಮವನ್ನು, ಸತ್ತೆಯನ್ನು, ಈ ದಿವ್ಯಸಾನ್ನಿಧ್ಯವನ್ನು ಮನುಷ್ಯನು ಸಮಸ್ತ ರೂಪಗಳದ್ವಾರಾ ಕಂಡು ಗ್ರಹಿಸಿಕೊಳ್ಳಲು ಸದಾ ಯತ್ನಿಸಬೇಕೆಂದೂ ಅದರೊಡನೆ ತನ್ನ ವಿಚಾರವನ್ನೂ ಪ್ರಾಣವನ್ನೂ ಸಂಯೋಜಿಸುವುದಕ್ಕೆ ಸದಾ ಯತ್ನಿಸಬೇಕೆಂದೂ ಹೇಳುವುದು. ಇದು ನಮ್ಮ ಸಾಮಾನ್ಯ ದೃಷ್ಟಿ–ಸಮಸ್ತವನ್ನೂ ಅವಶ್ಯವಾಗಿಯೇ ಬದಲಾಯಿಸುವುದು; ಮಾನವ ಜೀವನದ ಸಮಸ್ತ ಧ್ಯೇಯಗಳನ್ನು ಉಳಿಸಿಕೊಳ್ಳುವುದರಲ್ಲೂ ಸಹ, ಇದು ಅವುಗಳಿಗೆ ಬೇರೊಂದು ಅರ್ಥವನ್ನೂ ಬೇರೊಂದು ದಿಗ್ದರ್ಶನವನ್ನೂ ನೀಡುವುದು.

ನಾವು ಆರೋಗ್ಯರಕ್ಷಣೆಗೂ ಶಕ್ತಿಸಾಧನೆಗೂ ಯತ್ನಿಸುತ್ತೇವಷ್ಟೆ; ಆದರೆ ಯಾವ ಉದ್ದೇಶಕ್ಕಾಗಿ? ಅದುವೇ ಅದರ ಉದ್ದೇಶ, ಎಂಬುದೇ ಸಾಮಾನ್ಯವಾಗಿ ಬರುವ ಉತ್ತರ, ಏಕೆಂದರೆ, ಅದು ಒಳ್ಳೆಯದು ಎಂಬ ಕಾರಣದಿಂದ ಅಥವಾ ನಾವು ದೀರ್ಘಾಯುಗಳಾಗುವಂತೆ ಹಾಗೂ ನಮ್ಮ ಬೌದ್ಧಿಕ, ಜೈವಿಕ ಇಲ್ಲವೆ ಚಿತ್ತವೃತ್ತಿಗಳ ಸಂತೃಪ್ತಿಗೆ ದೃಢವಾದ ಆಧಾರ ದೊರೆಯಲೆಂಬ ಕಾರಣದಿಂದ, ಹೌದು, ಅದಕ್ಕಾಗಿಯೇ ಎಂಬುದೂ ಒಂದು ದೃಷ್ಟಿಯಿಂದ ನಿಜ: ಆದರೆ ದೈಹಿಕ ಸುಸ್ಥಿತಿಯೂ ಆತ್ಮದ ಅಭಿವ್ಯಕ್ತಿಯೇ, ಅದರ ಪರಿಪೂರ್ಣತೆಯೂ ಒಳ್ಳೆಯದು,

ಅದು ಸಮಗ್ರ ಮಾನವ ಜೀವಿತದ ಧರ್ಮದ ಅಂಗ ಎಂಬ ದೃಷ್ಟಿಯಿಂದ ನಿಜ; ಆದರೆ ಅದಕ್ಕೂ ಮಿಗಿಲಾಗಿ, ಮಾನವನಲ್ಲಿ ಅಂತರ್ಗತವಾಗಿರುವ ದಿವ್ಯಸತ್ತೆಯ ದರ್ಶನದಲ್ಲಿ ಹಾಗೂ ಅಭಿವ್ಯಕ್ತಿಯಲ್ಲಿ ಪರ್ಯವಸಾನ ಹೊಂದುವ ಆ ಸಮಸ್ತ ಉಚ್ಚತರ ಕ್ರಿಯೆಗೆ ಆಧಾರಪ್ರಾಯವಾಗಿರಬೇಕು ಎಂಬ ದೃಷ್ಟಿಯಿಂದ ನಿಜ. ಸಂಸ್ಕೃತದಲ್ಲಿ 'ಶರೀರಂ ಖಲು ಧರ್ಮಸಾಧನಂ' ಎಂಬ ಉಕ್ತಿಯೊಂದಿದೆ – ಎಂದರೆ ಶರೀರವು ಧರ್ಮಕಾರ್ಯದ ನಿರ್ವಹಣೆಯ ಸಾಧನ, ನಮ್ಮ ಸತ್ತೆಯ ಭಗವದುನ್ಮುಖ ವಿಧಿ. ಸಾಮಾನ್ಯರ ದೃಷ್ಟಿಯಲ್ಲಿ, ನಮ್ಮ ಮಾನಸಿಕ, ಭಾವುಕ, ಸೌಂದರ್ಯಾನುಭವ ಶಕ್ತಿಗಳು ಹೆಚ್ಚಿನ ಸಂತೃಪ್ತಿ ಪಡೆಯಲಾಗುವಂತೆ ಅಥವಾ ಅದುವೇ ಮಾನವನ ಉತ್ಕೃಷ್ಟತರ ಪ್ರಕೃತಿ ಎಂಬ ಕಾರಣದಿಂದ, ಆ ಮೂಲಕ ತಾನು ಇನ್ನಷ್ಟು ಜಾಗ್ರತ ಪ್ರಕೃತಿಯವನೆಂದು, ಇನ್ನಷ್ಟು ಕೃತಾರ್ಥನೆಂದು ಭಾವಿಸಿಕೊಳ್ಳುತ್ತಾನೆ ಎಂಬ ಕಾರಣದಿಂದ ಅವುಗಳನ್ನು ಅಭಿವೃದ್ಧಿ ಪಡಿಸಿ–ಕೊಳ್ಳಬೇಕು – ಇದು ಒಂದು ಕಾರಣ, ಆದರೆ ಇದೊಂದೇ ಕಾರಣವಲ್ಲ. ಇನ್ನಷ್ಟು ಖಚಿತವಾಗಿ ಹೇಳುವುದಾದರೆ, ಈ ವಿಷಯಗಳೂ ಆತ್ಮದ ಪ್ರಕಟ ರೂಪಗಳು, ಮಾನವನಲ್ಲಿ ಇವು ತಮ್ಮ ದಿವ್ಯ ಮೌಲ್ಯಗಳನ್ನು ಅರಸುವ ವಿಚಾರಗಳು ಎಂಬುದೇ ಕಾರಣ, ಮತ್ತು ತಮ್ಮ ವಿಕಾಸದ ಸೂಕ್ಷ್ಮತೆಯ, ನಮ್ಯತೆಯ, ಓಜಸ್ಸಿನ, ಮತ್ತು ತೀವ್ರತೆಯ ಮೂಲಕ ಮಾನವನು ಜಗತ್ತಿನಲ್ಲಿ ದಿವ್ಯ ಸತ್ಯವನ್ನು ಇನ್ನಷ್ಟು ಸಮೀಪಿಸಲು, ಅದನ್ನು ಬಗೆಬಗೆಯಾಗಿ ಗ್ರಹಿಸಲು, ಕಟ್ಟಕಡೆಗೆ ಅದರೊಡನೆ ಏಕೀಕೃತನಾಗಿ ಅದಕ್ಕೆ ಹೊಂದಿಕೆಯಾಗುವಂತೆ ತನ್ನ ಸಮಗ್ರ ಜೀವನವನ್ನು ಅನುಗೊಳಿಸಲು ತಾನು ಸಮರ್ಥವಾಗಬಲ್ಲ – ಎಂಬುದೇ ಕಾರಣ. ನೀತಿವರ್ತನೆ ಎಂದರೆ, ಸಾಮಾನ್ಯ ದೃಷ್ಟಿಯಲ್ಲಿ ಸಮಾಜಕ್ಕೆ ಆಧಾರಪ್ರಾಯವಾಗಿ ಇದ್ದುಕೊಂಡು, ನಮ್ಮ ಸಹವಾಸಿಗಳೊಡನೆ ಇನ್ನಷ್ಟು ಚೆನ್ನಾಗಿ, ಇನ್ನಷ್ಟು ವಿಚಾರಪೂರ್ವಕವಾಗಿ, ಸೌಜನ್ಯದಿಂದ, ಸಹಾನುಭೂತಿಯಿಂದ, ಆತ್ಮಸಂಯಮದಿಂದ ನಡೆದುಕೊಳ್ಳಲು ಸಾಧಕವಾಗಬಲ್ಲ ಸುವ್ಯವಸ್ಥಿತವಾದ ವೈಯಕ್ತಿಕ ಹಾಗೂ ಸಾಮಾಜಿಕ ವರ್ತನೆ. ಆಧ್ಯಾತ್ಮಿಕ ದೃಷ್ಟಿಯಲ್ಲಾದರೋ ನೀತಿಶಾಸ್ತ್ರಕ್ಕೆ ಇದಕ್ಕೂ ಹೆಚ್ಚಿನ ಅರ್ಥವುಂಟು – ಅದು ನಮ್ಮಲ್ಲಿರುವ ದಿವ್ಯತರ ಸತ್ತೆಯನ್ನು ನಮ್ಮ ಕಾರ್ಯ ವ್ಯಾಪಾರಗಳಲ್ಲಿ, ಮತ್ತು ಇನ್ನಷ್ಟು ಮುಖ್ಯವಾಗಿ, ನಮ್ಮ ಸತ್ತೆಯ ಸ್ವಭಾವದಲ್ಲಿ ವಿಕಾಸಪಡಿಸುವ ಸಾಧನ, ಭಗವತ್ ಸತ್ತೆಯ ಪ್ರಕೃತಿಯೆಡೆಗೆ ನಮ್ಮ ವಿಕಸನದ ಹೆಜ್ಜೆ.

ನಮ್ಮ ಸಕಲ ಧ್ಯೇಯಗಳಿಗೂ ಕಾರ್ಯಕಲಾಪಗಳಿಗೂ ಇದು ಅನ್ವಯಿಸುವುದು; ಆಧ್ಯಾತ್ಮಿಕತೆ ಅವುಗಳೆಲ್ಲವನ್ನೂ ತೆಗೆದುಕೊಂಡು, ಅವುಗಳಿಗೆ



ಇನ್ನಷ್ಟು ಮಹತ್ತರವಾದ, ಇನ್ನಷ್ಟು ದಿವ್ಯವಾದ, ಇನ್ನಷ್ಟು ನಿಕಟವಾದ ಅರ್ಥ ಕೊಡುವುದು. ತತ್ತ್ವಶಾಸ್ತ್ರವೆಂದರೆ, ಪಾಶ್ಚಾತ್ಯ ವಿವೇಚನಾದೃಷ್ಟಿಯಲ್ಲಿ ಸತ್ತೆಯ ಆದಿಸತ್ಯಗಳ ಬಗೆಗೆ ತರ್ಕವಿಚಾರದ ಬೆಳಕಿನಲ್ಲಿ ನಡೆಯುವ ಜಿಜ್ಞಾಸೆ; ವಿಜ್ಞಾನವು ನಮ್ಮ ಮುಂದಿಡುವ ತಥ್ಯಗಳನ್ನು ಪರಿಶೀಲಿಸುವ ಮೂಲಕವಾಗಲಿ ಬುದ್ಧಿವಿಚಾರದಿಂದ ಹೊರಟ ಕಲ್ಪನೆಗಳನ್ನು ಸಾವಧಾನವಾಗಿ ತಾರ್ಕಿಕ ಪರಿಶೋಧನೆಗೊಳಪಡಿಸುವ ಮೂಲಕವಾಗಲಿ, ಇಲ್ಲವೆ ಇವೆರಡೂ ವಿಧಾನಗಳನ್ನು ಸಂಯುಕ್ತವಾಗಿ ಬಳಸಿಕೊಂಡಾಗಲಿ ಈ ಸತ್ಯಗಳನ್ನು ನಾವು ಕಂಡುಹಿಡಿಯಬೇಕು. ಆದರೆ ಆಧ್ಯಾತ್ಮಿಕ ದೃಷ್ಟಿಯಲ್ಲಿ ಸತ್ತೆಯ ಸತ್ಯವನ್ನು ಕೇವಲ ತರ್ಕಬುದ್ಧಿಯಿಂದ ಹಾಗೂ ವೈಜ್ಞಾನಿಕ ಪರಿಶೀಲನೆಯಿಂದ ಮಾತ್ರವೇ ಅಲ್ಲದೆ, ಅಂತರ್ಜ್ಞಾನ ಬಲದಿಂದ ಹಾಗೂ ಅಂತರನುಭವದಿಂದ ಕಂಡುಕೊಳ್ಳಬೇಕು; ನಾನಾ ಜ್ಞಾನಸಂಪಾದನ ವಿಧಾನಗಳು ನೀಡಿದ ಆಧಾರಾಂಶಗಳಲ್ಲಿ ಯಾವುದನ್ನೂ ಬಿಡದೆ ಎಲ್ಲವನ್ನೂ ಕ್ರಮಗೊಳಿಸಿ ಅವುಗಳನ್ನು ಏಕಮೇವ ಸತ್ಯದ, ಪರಮ ವಿಶ್ವಂಭರ ಸತ್ಯದ ಸಮನ್ವಯ ಸಂಬಂಧದಲ್ಲಿ ವಿಧಾನೀಕರಿಸುವುದೇ ತತ್ತ್ವಶಾಸ್ತ್ರದ ಕೆಲಸ. ಕೊನೆಯದಾಗಿ ಹೇಳುವುದಾದರೆ, ಆಧ್ಯಾತ್ಮಿಕ ಸಿದ್ಧಿಗೂ ವ್ಯಕ್ತಿಯು ತನ್ನ ದಿವ್ಯಪ್ರಕೃತಿಯತ್ತ ಬೆಳೆದುಬರುವುದಕ್ಕೂ ಸೂಕ್ತ ಆಧಾರವೊಂದನ್ನು ಸಿದ್ಧಪಡಿಸುವುದೇ ತತ್ತ್ವದರ್ಶನದ ನಿಜವಾದ ಮಹತ್ತ್ವ. ಸ್ವಯಂ ವಿಜ್ಞಾನವು ಜಗತ್ತಿನ ಬಗೆಗೆ ಗಳಿಸಿದ ಜ್ಞಾನಮಾತ್ರವಾಗುವುದು; ಈ ಜ್ಞಾನವು ವಿಶ್ವಾತ್ಮನ ಹಾಗೂ ಅವನ ವಿಶ್ವವ್ಯಾಪಾರಗಳ ಬಗೆಗೆ ಹೆಚ್ಚಿನ ಬೆಳಕು ಚೆಲ್ಲುವುದು. ಜಡದ್ರವ್ಯವಾಗಲಿ ಭೌತಿಕ ಶಕ್ತಿಯಾಗಲಿ ನಮ್ಮ ಪ್ರಾರಂಭ ಸ್ಥಾನವೆಂಬ ಕಲ್ಪನೆಯ ಮೇಲೆ ಭೌತಿಕ ಜ್ಞಾನಕ್ಕೆ ಮತ್ತು ಅದರ ವ್ಯಾವಹಾರಿಕ ಫಲಗಳಿಗೆ ಮಾತ್ರ ಅಥವಾ ಜೀವನಕ್ಕೂ ಮಾನವನಿಗೂ ಮನಸ್ಸಿಗೂ ಸಂಬಂಧಿಸಿದ ಜ್ಞಾನಕ್ಕೆ ಮಾತ್ರ ವಿಜ್ಞಾನವು ಸೀಮಿತವಾಗುವುದಿಲ್ಲ; ಆಧ್ಯಾತ್ಮ ಪ್ರಧಾನವಾದ ಸಂಸ್ಕೃತಿಯು ಹೊಸಹೊಸ ಸಂಶೋಧನ ಕ್ಷೇತ್ರಗಳಿಗೆ, ಆತ್ಮವನ್ನು ಆದಿಸತ್ಯವೆಂದಿಟ್ಟುಕೊಂಡು, ಮತ್ತು ಜೀವನದ ಹಾಗೂ ಜಡದ್ರವ್ಯದ ಮೇಲೆ ಪರಿಣಾಮ ಬೀರಲು ಮನಸ್ಸಿಗೆ ಹಾಗೂ ಮನಸ್ಸಿಗಿಂತ ಮಹತ್ತರವಾದುದು ಯಾವುದಿದೆಯೋ ಅದಕ್ಕೆ ಇರುವ ಶಕ್ತಿಯಿಂದ ಪ್ರಾರಂಭವಾಗುವ ನವೀನ ಹಾಗೂ ಪ್ರಾಚೀನ ಚೈತ್ಯ ವಿಜ್ಞಾನಗಳಿಗೆ, ಜಿಜ್ಞಾಸೆಗಳಿಗೆ ಹಾಗೂ ಅವುಗಳ ಸಿದ್ಧಾಂತಗಳಿಗೆ ಅವಕಾಶ ಮಾಡಿಕೊಡುವುದು. ಮನುಷ್ಯನ ಮತ್ತು ಪ್ರಕೃತಿಯ ಯಾವ ಬಗೆಯ ಪ್ರತೀಕಗಳು ಸೌಂದರ್ಯ ಪ್ರಜ್ಞೆಯನ್ನು ತೃಪ್ತಿಪಡಿಸಬಲ್ಲವೋ ಅಂಥ ಪ್ರತೀಕಗಳನ್ನು ಸೃಜಿಸಿ, ಜೀವನದ ಬಗೆಗೆ ಬುದ್ಧಿಶಕ್ತಿಯ

ವಿಚಾರಗಳನ್ನೂ ಅದಕ್ಕೆ ಕಲ್ಪನಾಶಕ್ತಿಯ ಪ್ರತಿಕ್ರಿಯೆಗಳನ್ನೂ ಕಲಾತ್ಮಕವಾಗಿ ರೂಪಿಸುವುದೇ ಕಲೆಯ ಹಾಗೂ ಕಾವ್ಯದ ಆದ್ಯ ಧ್ಯೇಯ; ಆಧ್ಯಾತ್ಮಿಕ ಸಂಸ್ಕೃತಿಯಲ್ಲಾದರೋ, ಅವು ತಮ್ಮ ಲಕ್ಷ್ಯದಲ್ಲಿ ಮಾನವನಲ್ಲೂ ಪ್ರಕೃತಿಯಲ್ಲೂ ಹುದುಗಿದ ಇನ್ನಷ್ಟು ಮಹತ್ತರ ವಿಷಯಗಳ ಹಾಗೂ ಅತ್ಯಂತ ಗಹನವಾದ ಆಧ್ಯಾತ್ಮಿಕ ಮತ್ತು ವ್ಯಾಪಕಸೌಂದರ್ಯದ ಪ್ರಕಟನೆಗಳಾಗಿಯೂ ಪರಿಣಮಿಸುತ್ತವೆ. ರಾಜನೀತಿ, ಸಮಾಜ, ಆರ್ಥಿಕ ವ್ಯವಸ್ಥೆಗಳು ಮನುಷ್ಯ ಜೀವನದ ಆದಿರೂಪದಲ್ಲಿ ಯಾವ ವ್ಯವಸ್ಥೆಯ ಮೂಲಕ ಮನುಷ್ಯರು ಸಾಮುದಾಯಿಕವಾಗಿ ಜೀವಿಸಬಲ್ಲರೋ, ಉತ್ಪಾದನೆ ಮಾಡಬಲ್ಲರೋ, ತಮ್ಮ ಅಭೀಷ್ಟಗಳನ್ನು ಪೂರೈಸಬಲ್ಲರೋ, ಸುಖಾನುಭವ ಹೊಂದಬಲ್ಲರೋ ಶಾರೀರಿಕ ಪ್ರಾಣಿಕ ಹಾಗೂ ಮಾನಸಿಕ ಶಕ್ತಿಸಾಮರ್ಥ್ಯಗಳನ್ನು ಬೆಳೆಸಿಕೊಳ್ಳಬಲ್ಲರೋ ಅಂತಹದೊಂದು ವ್ಯವಸ್ಥೆ ಮಾತ್ರವೇ ಸರಿ; ಆಧ್ಯಾತ್ಮಿಕ ಧ್ಯೇಯವಾದರೋ ಅವುಗಳನ್ನು ಇದಕ್ಕೂ ಹೆಚ್ಚಿನವನ್ನಾಗಿ ಮಾಡುವುದು. ಮೊದಲು, ಜೀವನದ ಯಾವ ಚೌಕಟ್ಟಿನಲ್ಲಿ ಮಾನವನು ತನ್ನ ವಾಸ್ತವ ಸತ್ತೆಯನ್ನೂ ದಿವ್ಯತೆಯನ್ನೂ ಅರಸಿ ಆ ರೂಪಕ್ಕೆ ವಿಕಸಿತನಾಗಬಲ್ಲನೋ ಅಂತಹದೊಂದು ಚೌಕಟ್ಟನ್ನಾಗಿ ಅವುಗಳನ್ನು ರೂಪಿಸುವುದು; ಎರಡನೆಯದಾಗಿ, ಜೀವನದಲ್ಲಿ ದೈವೀ ನಿಯಮವನ್ನು ವೃದ್ಧಿಶೀಲ ಮೂರ್ತಸ್ವರೂಪದ್ದನ್ನಾಗಿ ಮಾಡುವುದು; ಮೂರನೆಯದಾಗಿ, ಮಾನವಕೋಟಿಯು ಮಾನವತೆಯ ಯಾವ ದಿವ್ಯತರ ಪ್ರಕೃತಿಯನ್ನು ವಿಕಾಸಗೊಳಿಸಲೆಳಸುವುದೋ ಆ ಪ್ರಕೃತಿಯ ಜ್ಯೋತಿ ಓಜಸ್ಸು ಶಾಂತಿ ಏಕತೆ ಸಾಮರಸ್ಯಗಳ ಕಡೆಗೆ ಸಾಗುವ ಸಾಮೂಹಿಕ ಮುಂದುವರಿಕೆಯ ರೂಪ ನೀಡುವುದು. ಆಧ್ಯಾತ್ಮಿಕ ಸಂಸ್ಕೃತಿ, ಜೀವನದಲ್ಲಿ ಆಧ್ಯಾತ್ಮಿಕತೆಯ ಸಮನ್ವಯ ಎಂದರೆ ಇದು, ತನ್ನ ಸಮಸ್ತ ಶಕ್ತಿಸಾಮರ್ಥ್ಯಗಳ ಸಮೇತವಾಗಿ ಇದು, ಇದಕ್ಕಿಂತ ಹೆಚ್ಚೇನೂ ಅಲ್ಲ, ಆದರೆ ಇದಕ್ಕಿಂತ ಕಡಿಮೆಯೂ ಅಲ್ಲ.

**– ಶ್ರೀ ಅರವಿಂದರು**

*

## ಮನುಕುಲದ ಎಲ್ಲ ಪ್ರಶ್ನೆಗಳಿಗೆ ಉತ್ತರ

### (ಚಿಂತನಗಳು ಹಾಗೂ ಮಿಣುಕು ನೋಟಗಳು)

ಮನುಷ್ಯ ಆಧ್ಯಾತ್ಮೀಕರಣ ಹೊಂದಲು ಒಪ್ಪಿಕೊಂಡರೆ ಎಲ್ಲವೂ ಬದಲಾಗುವುದು, ಆದರೆ ಅವನ ಮಾನಸಿಕ, ಪ್ರಾಣಿಕ ಹಾಗೂ ಭೌತಿಕ ಸ್ವಭಾವ



ಉಚ್ಚತರ ನಿಯಮದ ವಿರುದ್ಧ ಬಂಡಾಯವೇಳುತ್ತದೆ. ಅವನು ತನ್ನ ಅಪರಿಪೂರ್ಣತೆಗಳನ್ನು ಪ್ರೀತಿಸುತ್ತಾನೆ.

ನಮ್ಮ ಸತ್ತೆಯ ಸತ್ಯ ಆತ್ಮವಾಗಿರುತ್ತದೆ, ಮನಸ್ಸು ಪ್ರಾಣ ಹಾಗೂ ದೇಹ ಇವು ತಮ್ಮ ಅಪರಿಪೂರ್ಣತೆಗಳಲ್ಲಿ ಆತ್ಮದ ಮುಖವಾಡಗಳಾಗಿರುತ್ತವೆ, ಆದರೆ ಅವುಗಳ ಪರಿಪೂರ್ಣತೆಯಲ್ಲಿ ಅದರ ಎರಕಗಳಾಗಬೇಕು. ಆಧ್ಯಾತ್ಮಿಕವಾಗುವುದಷ್ಟೇ ಸಾಲದು, ಅದು ಸ್ವರ್ಗಕ್ಕಾಗಿ ಅನೇಕ ಜನರನ್ನು ತಯಾರು ಮಾಡುತ್ತದೆ, ಆದರೆ ಪೃಥ್ವಿಯನ್ನು ಅದಿದ್ದ ಹಾಗೆ ಬಿಟ್ಟುಕೊಡುತ್ತದೆ. ರಾಜೀ ಮಾಡಿಕೊಳ್ಳುವಿಕೆ ಕೂಡ ಮುಕ್ತಿಗಾಗಿ ಒಂದು ಮಾರ್ಗವಲ್ಲ.

ಜಗತ್ತಿಗೆ ಮೂರು ಬಗೆಯ ಕ್ರಾಂತಿಗಳು ತಿಳಿದಿವೆ. ಪ್ರಾಪಂಚಿಕವಾದದ್ದಕ್ಕೆ ಬಲವತ್ತರವಾದ ಪರಿಣಾಮಗಳಿರುತ್ತವೆ. ನೈತಿಕ ಹಾಗೂ ಬೌದ್ಧಿಕವಾದವುಗಳು ತಮ್ಮ ವ್ಯಾಪ್ತಿಯಲ್ಲಿ ಅನಂತಪಟ್ಟು ಭವ್ಯವಾದವುಗಳು, ಫಲಿತಾಂಶದಲ್ಲಿ ಹೆಚ್ಚು ಶ್ರೀಮಂತವಾದವುಗಳು ಆಗಿರುತ್ತವೆ, ಆದರೆ ಆಧ್ಯಾತ್ಮಿಕವಾದವುಗಳು ಶ್ರೇಷ್ಠ ಬಿತ್ತನೆಗಳಾಗಿರುತ್ತವೆ.

ಮೂರೂ ಬದಲಾವಣೆಗಳು, ಪರಿಪೂರ್ಣವಾಗಿ ಹೊಂದಿಕೊಳ್ಳುವ ರೀತಿಯಲ್ಲಿ ಒಟ್ಟುಗೂಡಬಲ್ಲವಾದರೆ ದೋಷರಹಿತ ಕಾರ್ಯವನ್ನು ಮಾಡಬಹುದು, ಆದರೆ ಮನುಕುಲದ ಮನಸ್ಸು ಮತ್ತು ದೇಹ ಬಲವತ್ತರವಾದ ಆಧ್ಯಾತ್ಮಿಕ ಒಳನುಗ್ಗುವಿಕೆಯನ್ನು ಹಿಡಿದಿಟ್ಟುಕೊಳ್ಳಲಾರವು. ನಮ್ಮ ಮಣ್ಣಿನಲ್ಲಿ ಭವ್ಯ ಆಧ್ಯಾತ್ಮಿಕ ಬಿತ್ತನೆಗಳಿಂದ ಅಲ್ಪ ಪರಿಣಾಮ ದೊರಕಿಸುವುದಕ್ಕಾಗಿ ಬಹಳಷ್ಟು ಬೌದ್ಧಿಕ ಮತ್ತು ಭೌತಿಕ ರೀತಿಯ ಮೇಲಕ್ಕೆತ್ತಿ ತಿರುವಿ ಹಾಕುವಿಕೆಗಳು ಅವಶ್ಯವಾಗಿರುತ್ತವೆ.

ಪ್ರತಿಯೊಂದು ಧರ್ಮ ಮನುಕುಲಕ್ಕೆ ಸಹಾಯ ಮಾಡಿದೆ, ದೇವರಲ್ಲಿ ನಂಬಿಕೆಯಿರದ, ನಿಸರ್ಗಾರಾಧನೆಯ ತತ್ವ(paganism)ವಿರುವ ಧರ್ಮ ಮನುಷ್ಯನಲ್ಲಿ ಸೌಂದರ್ಯದ ಪ್ರಕಾಶವನ್ನು, ಅವನ ಜೀವನದ ಭವ್ಯತೆ ಹಾಗೂ ಔನ್ನತ್ಯಗಳನ್ನು, ಬಹುಮುಖ ಪರಿಪೂರ್ಣತೆಗಾಗಿ ಇರುವ ಅವನ ಗುರಿಯನ್ನು ಹೆಚ್ಚಿನ ಮಟ್ಟದವುಗಳನ್ನಾಗಿ ಮಾಡಿದೆ; ಕ್ರಿಸ್ತ ಧರ್ಮ ಅವನಿಗೆ ದೈವೀ ಪ್ರೇಮದ, ಹಾಗೂ ಪರೋಪಕಾರದ ಸ್ವಲ್ಪ ಮಟ್ಟಿಗಿನ ದೃಷ್ಟಿಯನ್ನು ಕೊಟ್ಟಿದೆ, ಬೌದ್ಧ ಧರ್ಮ ಅವನಿಗೆ ಜಾಣನಾಗಲು, ಸೌಮ್ಯನಾಗಲು, ಪರಿಶುದ್ಧನಾಗಲು ಉದಾತ್ತ ಮಾರ್ಗವನ್ನು ತೋರಿಸಿದೆ; ಯೆಹೂದಿ ಮತ್ತು ಮುಸ್ಲಿಮ್ ಧರ್ಮಗಳು ಅವನಿಗೆ ಧಾರ್ಮಿಕವಾಗಿ ನಿಷ್ಠಾವಂತನಾಗಿರುವುದನ್ನು, ಉತ್ಸಾಹದಿಂದ ದೇವನಲ್ಲಿ ಭಕ್ತಿ

ಹೊಂದಿರುವುದನ್ನು ತೋರಿಸಿವೆ; ಹಿಂದೂ ಧರ್ಮ ಅವನಿಗೆ ಅತ್ಯಂತ ಭವ್ಯ ಮತ್ತು ಗಹನವಾದ ಜ್ಞಾನವುಳ್ಳ ಆಧ್ಯಾತ್ಮಿಕ ಸಾಧ್ಯತೆಗಳನ್ನು ತೆರೆದುತೋರಿಸಿದೆ. ಈ ಎಲ್ಲ ದೈವದರ್ಶನಗಳು ಒಂದನ್ನೊಂದು ಅಪ್ಪಿಕೊಳ್ಳುವಂತಾದರೆ ಮತ್ತು ಅವು ತಮ್ಮನ್ನು ಇತರ ಧರ್ಮಗಳಲ್ಲಿ ಚೆಲ್ಲಿಕೊಡುವಂತಾದರೆ ಶ್ರೇಷ್ಠ ಕಾರ್ಯವಾಗುವುದು[1], ಆದರೆ ಬೌದ್ಧಿಕ ಧರ್ಮಾಂಧತೆ ಮತ್ತು ಪಂಥೀಯ ಅಹಂಮನ್ಯತೆ ಇವು ಮಾರ್ಗದಲ್ಲಿ ಅಡ್ಡಬರುತ್ತವೆ.

ಎಲ್ಲ ಧರ್ಮಗಳು ಕೆಲವೊಂದು ಆತ್ಮಗಳನ್ನು ರಕ್ಷಿಸಿವೆ, ಆದರೆ ಯಾವ ಧರ್ಮಕ್ಕೂ ಇಲ್ಲಿಯವರೆಗೆ ಮಾನವ ಕುಲವನ್ನು ಆಧ್ಯಾತ್ಮಿಕವಾದದ್ದನ್ನಾಗಿ ಮಾಡಲಾಗಿಲ್ಲ, ಅದಕ್ಕಾಗಿ ಪಂಥ, ಮತಗಳ ಆವಶ್ಯಕತೆ ಇಲ್ಲ, ಆದರೆ ಆಧ್ಯಾತ್ಮಿಕ ಉತ್ಕ್ರಾಂತಿಗಾಗಿ ಪೋಷಿಸಿಕೊಂಡು ಬಂದ, ಎಲ್ಲವನ್ನೂ ಒಳಗೊಳ್ಳುವ ಪ್ರಯತ್ನದ ಆವಶ್ಯಕತೆ ಇದೆ.

ಜಗತ್ತಿನಲ್ಲಿ ನಾವು ಈಗ ನೋಡುತ್ತಿರುವ ಬದಲಾವಣೆಗಳು ಅವುಗಳ ಆದರ್ಶ ಹಾಗೂ ಉದ್ದೇಶಗಳಲ್ಲಿ ಬೌದ್ಧಿಕ, ನೈತಿಕ ಮತ್ತು ಭೌತಿಕವಾಗಿವೆ, ಆಧ್ಯಾತ್ಮಿಕ ಕ್ರಾಂತಿ ತನ್ನ ಗಳಿಗೆ ಬರುವುದಕ್ಕಾಗಿ ಕಾದುಕೊಂಡಿದೆ ಮತ್ತು ಈ ಮಧ್ಯೆ ತನ್ನ ತರಂಗಗಳನ್ನು ಅಲ್ಲಿ, ಇಲ್ಲಿ ಚೆಲ್ಲಿಕೊಡುತ್ತಿದೆ. ಅಲ್ಲಿಯವರೆಗೆ ಸದ್ಯ ಸಂಭವಿಸುತ್ತಿರುವುದೆಲ್ಲದರ ವಿವರಣೆ ಮತ್ತು ಪೂರ್ವಾನುಮಾನ ವ್ಯರ್ಥ ವಿಷಯಗಳಾಗಿರುತ್ತವೆ. ಏಕೆಂದರೆ

1. ಶ್ರೀಮಾತೆಯವರು ಸ್ಪಷ್ಟ ಪಡಿಸುತ್ತಾರೆ: ಮಾನಸಿಕ ಪ್ರಜ್ಞೆಯಲ್ಲಿ ಈ ವಿಷಯಗಳು ಸಾಮರಸ್ಯದಿಂದ ಇರುವಂತೆ, ಸಮನ್ವಯಗೊಳ್ಳುವಂತೆ ಮಾಡಲಾಗದು. ಇದಕ್ಕಾಗಿ ಮೇಲ್ಗಡೆಗೆ ಸಾಗಿ ಆ ಚಿಂತನದ ಹಿಂದಿರುವ ವಿಚಾರವನ್ನು ಕಂಡುಹಿಡಿಯಬೇಕು. ಉದಾಹರಣೆಗೆ ಇಲ್ಲಿ ಶ್ರೀ ಅರವಿಂದರು ಪ್ರತಿಯೊಂದು ಧರ್ಮ ಮಾನವ ಪ್ರಯತ್ನದಲ್ಲಿ, ಅಭೀಪ್ಸೆಯಲ್ಲಿ ಮತ್ತು ಸಿದ್ಧಿಯಲ್ಲಿ ಏನನ್ನು ಪ್ರತಿನಿಧಿಸುತ್ತದೆ ಎಂಬುದನ್ನು ತೋರಿಸಿದ್ದಾರೆ. ನಿಖರವಾಗಿ ಮತತತ್ವದ ಮತ್ತು ಬೌದ್ಧಿಕ ಕಲ್ಪನೆಗಳಿರುವ ಈ ಧರ್ಮಗಳನ್ನು ಅವುಗಳ ಬಾಹ್ಯ ರೂಪದಲ್ಲಿ ಸ್ವೀಕರಿಸುವುದರ ಬದಲಾಗಿ ಅವುಗಳ ಮನೋಧರ್ಮದಲ್ಲಿ ಮತ್ತು ಅವು ಪ್ರತಿನಿಧಿಸುವ ತತ್ವದಲ್ಲಿ ಸ್ವೀಕರಿಸಿದರೆ ಅವುಗಳನ್ನು ಒಂದುಗೂಡಿಸುವುದರಲ್ಲಿ ತೊಂದರೆ ಇರುವುದಿಲ್ಲ. ಅವು ಸರಳ ರೀತಿಯಲ್ಲಿ ಮಾನವ ಪ್ರಗತಿಯ ಭಿನ್ನ ಮುಖಗಳಾಗಿವೆ, ಒಂದು ಇನ್ನೊಂದನ್ನು ಪರಿಪೂರ್ಣವಾಗಿ ಪೂರ್ಣಗೊಳಿಸುತ್ತದೆ.

**(9/76)** **– ಶ್ರೀಮಾತೆ**

*



ಅದರ (ಆಧ್ಯಾತ್ಮಿಕ ಕ್ರಾಂತಿಯ) ಸ್ವಭಾವ, ಸಾಮರ್ಥ್ಯ ಹಾಗೂ ಘಟನೆ ಇವೆಲ್ಲ ನಮ್ಮ ಮಾನವ ಕುಲದ ಮುಂದಿನ ಕಾಲಚಕ್ರವನ್ನು ನಿರ್ಧರಿಸುವ ವಿಷಯಗಳಾಗಿರುತ್ತವೆ.

**(16/393–94)** **– ಶ್ರೀ ಅರವಿಂದರು**

*

## ಸಮಗ್ರ ಯೋಗವೆಂದರೇನು?

ಸಮಗ್ರ ಯೋಗವೆಂದರೇನು?

ಅದು ಸಂಪೂರ್ಣವಾಗಿ ಭಗವಂತನ ಸಾಕ್ಷಾತ್ಕಾರ ಹಾಗೂ ಆತ್ಮ–ಸಾಕ್ಷಾತ್ಕಾರಗಳನ್ನು ಸಿದ್ಧಿಸಿಕೊಳ್ಳುವುದಾಗಿದೆ, ಸತ್ತೆಯ ಹಾಗೂ ಪ್ರಜ್ಞೆಯ ಸಂಪೂರ್ಣ ನೆರವೇರಿಕೆ ಕಂಡುಕೊಳ್ಳುವುದಾಗಿದೆ, ನಮ್ಮ ಸ್ವಭಾವ ಪರಿಪೂರ್ಣ ಪರಿವರ್ತನೆ ಹೊಂದುವುದಾಗಿದೆ – ಮತ್ತು ಇಲ್ಲಿ (ಪೃಥ್ವಿಯ ಮೇಲೆ) ಜೀವನವು ಪರಿಪೂರ್ಣತೆ ಪಡೆಯುವುದನ್ನು ಒಳಗೊಳ್ಳುತ್ತದೆ, ಕೇವಲ ಬೇರೆ ಇನ್ನೆಲ್ಲಿಯೋ ದೊರಕಬಹುದಾದ ಸನಾತನ ಪರಿಪೂರ್ಣತೆಯನ್ನಲ್ಲ.

ಇದೇ ಅದರ ಉದ್ದೇಶವಾಗಿದೆ, ಅದರ ವಿಧಾನದಲ್ಲಿಯೂ ಕೂಡ ಅದೇ ಬಗೆಯ ಸಮಗ್ರತೆ ಇದೆ, ಏಕೆಂದರೆ ಉದ್ದೇಶದ ಸಂಪೂರ್ಣತೆಯನ್ನು ವಿಧಾನದ ಸಂಪೂರ್ಣತೆಯಿಲ್ಲದೆ ಸಿದ್ಧಿಸಿಕೊಳ್ಳಲಾಗುವುದಿಲ್ಲ. ವಿಧಾನದ ಸಂಪೂರ್ಣತೆ ಎಂದರೆ ನಾವು ಸಿದ್ಧಿಸಿಕೊಳ್ಳಲು ಬಯಸುವುದಕ್ಕೆ ನಮ್ಮ ಸತ್ತೆ ಹಾಗೂ ಸ್ವಭಾವ ಇವುಗಳಲ್ಲಿಯ ಎಲ್ಲ ಭಾಗಗಳಲ್ಲಿ, ರೀತಿಗಳಲ್ಲಿ ಹಾಗೂ ಚಲನೆಗಳಲ್ಲಿ ಸಂಪೂರ್ಣ ಹೊರಳುವಿಕೆ, ತೆರೆದಿರಿಸಿಕೊಳ್ಳುವಿಕೆ, ಸ್ವ–ಅರ್ಪಣ ಇರುವುದಾಗಿದೆ.

ನಮ್ಮ ಮನಸ್ಸು, ಸಂಕಲ್ಪ, ಹೃದಯ, ಪ್ರಾಣ, ದೇಹ, ನಮ್ಮ ಬಾಹ್ಯ, ಆಂತರಿಕ ಹಾಗೂ ಆಳಾತಿ ಆಳದ ಅಸ್ತಿತ್ವ, ನಮ್ಮ ಅತಿಮಾನಸದ, ಅವಚೇತನದ ಹಾಗೆಯೇ ನಮ್ಮ ಅರಿವಿಗೆ ಬರುವ ಭಾಗಗಳು ಇವೆಲ್ಲವನ್ನೂ ಹೀಗೆ ಕೊಟ್ಟುಬಿಡಬೇಕಾಗುತ್ತದೆ ಮತ್ತು ಇವೆಲ್ಲವೂ ಈ ಸಿದ್ಧಿಗಾಗಿ, ಪರಿವರ್ತನೆಗಾಗಿ ಒಂದು ಸಾಧನ, ಒಂದು ಕ್ಷೇತ್ರ ಆಗಬೇಕಾಗಿರುತ್ತದೆ. ಮತ್ತು ಮಾನವ ಪ್ರಜ್ಞೆ ಹಾಗೂ ಸ್ವಭಾವ ದೈವಿಕವಾಗಿ ಬದಲಾಗುವ ಹಾಗೂ ಜ್ಞಾನೋದಯ ಪಡೆಯುವ ಕ್ರಿಯೆಯಲ್ಲಿ ಭಾಗವಹಿಸಬೇಕಾಗುತ್ತದೆ.

ಇದು ಸಮಗ್ರ ಯೋಗದ ಗುಣಲಕ್ಷಣ.

*

ಸಮಗ್ರ ಯೋಗ ಏಕೈಕವಾದದ್ದು, ಆದರೆ ನಮ್ಮ ಆತ್ಮದ ಬೆಳವಣಿಗೆ ಹಾಗೂ ಸ್ವಭಾವದ ಅಭಿವೃದ್ಧಿಗಾಗಿ ಬಹುಮುಖವಿರುವ ರೀತಿಯದಾಗಿದೆ. ಇಡಿಯಾದ ಅನುಭವ ಮತ್ತು ಸಮಗ್ರ ದೈವೀ ನೈಜತೆಯನ್ನು ಕುರಿತು ಏಕೈಕ ಮತ್ತು ಎಲ್ಲವನ್ನೂ ಅಪ್ಪಿಕೊಳ್ಳುವ ಸಿದ್ಧಿ ಇವು ಅದರ ಪರಿಣಾಮಗಳಾಗಿರುತ್ತವೆ. ಅದು ಇಡೀ ಸತ್ತೆಯ ಹಾಗೂ ಸ್ವಭಾವದ ಎಲ್ಲ ಭಾಗದ ಮೂಲಭೂತ ಬದಲಾವಣೆ ಮತ್ತು ಪರಿವರ್ತನೆಗಳನ್ನು ಒಳಗೊಂಡಿರುತ್ತದೆ. ನಮ್ಮ ಸತ್ತೆ ಅವಿದ್ಯೆಯ ಮಾನವ ಮಾನಸಿಕ–ಪ್ರಾಣಿಕ–ಭೌತಿಕ ಸ್ವಭಾವದ ಜೋಡಣೆಯಾಗಿರುತ್ತದೆ, ಅದು ಆಧ್ಯಾತ್ಮಿಕ ಹಾಗೂ ಅತಿಮಾನಸ ಪ್ರಜ್ಞೆಯಲ್ಲಿ ರೂಪಪರಿವರ್ತನೆಗೆ ಒಳಗಾಗುತ್ತದೆ: ಅದು ಅನಂತ ಮತ್ತು ವಿಶ್ವಂಭರವಾದ ಸಾಮರಸ್ಯ, ಸಮಗ್ರವಾಗಿರುವ ಸಂಕಲ್ಪ, ಪ್ರೇಮ, ದಿವ್ಯಾನಂದ ಹಾಗೂ ಜ್ಞಾನ ಇವುಗಳಲ್ಲಿ ದೈವೀ ಏಕತೆಯಾಗುತ್ತದೆ.

*

ವಿಶ್ವವನ್ನು ಕುರಿತು ನಾನು ಕೊಟ್ಟ ವಿವರಣೆಯಲ್ಲಿ ಆಧ್ಯಾತ್ಮಿಕ ಉತ್ಕ್ರಾಂತಿಯ ಪ್ರಮುಖ ವಾಸ್ತವ ಸಂಗತಿ ಇಲ್ಲಿ ನಮ್ಮ ಅಸ್ತಿತ್ವದ ಅರ್ಥ ಎಂದು ಹೇಳಿದ್ದೇನೆ. ಅದು ಆರೋಹಣಗಳ ಒಂದು ಶ್ರೇಣಿ: ಭೌತಿಕ ಸತ್ತೆಯಿಂದ ಹಾಗೂ ಪ್ರಜ್ಞೆಯಿಂದ ಪ್ರಾಣ–ಆತ್ಮದ ಪ್ರಾಬಲ್ಯವಿರುವ ಪ್ರಾಣಿಕದವರೆಗಿನ ಆರೋಹಣ, ಅಲ್ಲಿಂದ ಪೂರ್ತಿ ಅಭಿವೃದ್ಧಿ ಹೊಂದಿದ ಮನುಷ್ಯನಲ್ಲಿ ಸಿದ್ಧಿಸಿಕೊಂಡ ಮಾನಸಿಕ ಸತ್ತೆಯವರೆಗಿನ ಆರೋಹಣ, ಮತ್ತು ಅಲ್ಲಿಂದ ಮಾನಸಿಕ ಪ್ರಜ್ಞೆಯಾಚೆಗಿರುವ ಪರಿಪೂರ್ಣ ಪ್ರಜ್ಞೆ ಎಂದರೆ ಅತಿಮಾನಸ ದೈವೀ ಪ್ರಜ್ಞೆಯವರೆಗಿನ ಆರೋಹಣ, ಈ ಅತಿಮಾನಸ ಪ್ರಜ್ಞೆ ಸತ್ಯಪ್ರಜ್ಞೆ (ಋತ್‌ಚಿತ್) ಆಗಿದ್ದು ಅದು ಆಧ್ಯಾತ್ಮಿಕ ಸತ್ತೆಯ ಸಮಗ್ರ ಪ್ರಜ್ಞೆಯಾಗಿರುತ್ತದೆ. ಮನಸ್ಸು ನಮ್ಮ ಕೊನೆಯ ಅಭಿವ್ಯಕ್ತಿಯಾಗುವುದು ಸಾಧ್ಯವಿಲ್ಲ, ಏಕೆಂದರೆ ಮನಸ್ಸು ಜ್ಞಾನಕ್ಕಾಗಿ ಅಜ್ಞಾನದಲ್ಲಿ ಅರಸುತ್ತದೆ, ಕೇವಲ ಅತಿಮಾನಸ ಪ್ರಜ್ಞೆ, ನಿಜವಾದ ಮತ್ತು ಇಡಿಯಾದ ಆತ್ಮ–ಜ್ಞಾನವನ್ನು, ಜಗತ್ತಿನ ಬಗೆಗಿನ ಜ್ಞಾನವನ್ನು ತಂದುಕೊಡಬಲ್ಲುದು; ಅದರ ಮೂಲಕ ಮಾತ್ರ ನಾವು ನಮ್ಮ ನಿಜವಾದ ಸತ್ತೆಯನ್ನು ಮತ್ತು ನಮ್ಮ ಆಧ್ಯಾತ್ಮಿಕ ಉತ್ಕ್ರಾಂತಿಯ ನೆರವೇರಿಕೆಯನ್ನು ದೊರಕಿಸಬಲ್ಲೆವು.

*

ನನ್ನ ಯೋಗ, ಅದರ ಎಲ್ಲ ಅಂಶಗಳಲ್ಲಿ, ಪೂರ್ತಿ ಹೊಸದಾದುದೆಂದು ನಾನು ಎಂದೂ ಹೇಳಿಲ್ಲ, ಅದನ್ನು ಸಮಗ್ರ ಯೋಗವೆಂದು ಕರೆದಿದ್ದೇನೆ ಮತ್ತು



ಅದರ ಅರ್ಥ ಅದು ಹಳೆಯ ಯೋಗಗಳ ಸಾರವನ್ನು ಮತ್ತು ಹಲವಾರು ಕಾರ್ಯ ವಿಧಾನಗಳನ್ನು ಕೈಗೆತ್ತಿಕೊಳ್ಳುತ್ತದೆ – ಅದರ ಹೊಸತನ ಅದರ ಗುರಿಯಲ್ಲಿದೆ, ನಿಲುವಿನಲ್ಲಿದೆ ಮತ್ತು ಅದರ ವಿಧಾನ ಇಡಿಯಾಗಿರುವುದರಲ್ಲಿದೆ. ...

ಸಾಧಕರಲ್ಲಿ ಕೆಲವರಿಗೆ ಬರೆದ ಪತ್ರದಲ್ಲಿ ಅದು (ಯೋಗ) ಹೊಸದೆಂದು ಒತ್ತುಕೊಟ್ಟು ಹೇಳಿದ್ದೆ. ನನ್ನ ದೃಷ್ಟಿಯಲ್ಲಿ ಹಳೆಯ ಯೋಗಗಳಿಗಿದ್ದ ಗುರಿಗಳ ಹಾಗೂ ವಿಚಾರಗಳ ಪುನರಾವರ್ತನೆಯಷ್ಟೇ ಸಾಲದು ಎಂಬುದನ್ನು, ಇನ್ನೂ ಸಿದ್ಧಿಸಿಕೊಂಡಿರದ, ಕಣ್ಣಮುಂದೆ ಸ್ಪಷ್ಟವಾಗಿ ತಂದುಕೊಂಡಿರದ ಆದರೆ ಸಿದ್ಧಿಸಿಕೊಳ್ಳಬೇಕಾದ ವಿಷಯವನ್ನು ಮುಂದಿರಿಸುತ್ತಿದ್ದೇನೆ ಎಂಬುದನ್ನು ವಿವರಿಸಿ ಹೇಳಬೇಕಾಗಿತ್ತು. ಆ ವಿಷಯ ಸ್ವಾಭಾವಿಕವಾದದ್ದು. ಆದರೆ ಅದು ಎಲ್ಲ ಗತಕಾಲದ ಆಧ್ಯಾತ್ಮಿಕ ಪ್ರಯತ್ನದ ರಹಸ್ಯ ಫಲಿತಾಂಶ.

ಹಳೆಯ ಯೋಗಗಳಿಗೆ ಹೋಲಿಸಿದರೆ ಅದು ನವೀನ.

1. ಏಕೆಂದರೆ ಅದರ ಗುರಿ ಜಗತ್ತಿನಿಂದ ಹಾಗೂ ಜೀವನದಿಂದ ಸ್ವರ್ಗ ಇಲ್ಲವೆ ನಿರ್ವಾಣದತ್ತ ಪಲಾಯನ ಮಾಡುವುದಲ್ಲ, ಆದರೆ ಜೀವನದ ಹಾಗೂ ಅಸ್ತಿತ್ವದ ಬದಲಾವಣೆ ಮಾಡುವುದಾಗಿದೆ, ಅದನ್ನು ಗೌಣವೆಂದಾಗಲಿ, ಪ್ರಾಸಂಗಿಕವೆಂದಾಗಲಿ ಪರಿಗಣಿಸುವುದಲ್ಲ, ಆದರೆ ಭಿನ್ನವಾದ ಹಾಗೂ ಪ್ರಮುಖ ಉದ್ದೇಶವೆಂದು ಭಾವಿಸುವುದಾಗಿದೆ. ಇತರ ಯೋಗಗಳಲ್ಲಿ ಅವರೋಹಣ ಎಂಬುದಿದ್ದರೆ ಅದು ಕೇವಲ ಮಾರ್ಗದಲ್ಲಿ ಒಂದು ಪ್ರಸಂಗ ಇಲ್ಲವೆ ಆರೋಹಣದ ಪರಿಣಾಮ – ಆರೋಹಣವೇ ನಿಜವಾದ ವಿಷಯ. ಇಲ್ಲಿ ಆರೋಹಣ ಪ್ರಥಮ ಹೆಜ್ಜೆ, ಆದರೆ ಅದು ಅವರೋಹಣಕ್ಕೆ ಒಂದು ಸಾಧನ, ಆರೋಹಣದಿಂದ ಸಿದ್ಧಿಸಿಕೊಂಡ ಹೊಸ ಪ್ರಜ್ಞೆಯ ಅವರೋಹಣವೇ ಸಾಧನೆಯ ಮೊಹರು ಹಾಗೂ ಮುದ್ರೆ.

2. ಏಕೆಂದರೆ ಅರಸುತ್ತಿರುವ ಗುರಿಯಾದ ವ್ಯಕ್ತಿಗತ ದೈವೀ ಸಿದ್ಧಿ ವ್ಯಕ್ತಿಯ ಸಲುವಾಗಿ ಅಲ್ಲ. ಆದರೆ ಇಲ್ಲಿ, ಪೃಥ್ವಿಯ ಪ್ರಜ್ಞೆಗೆ ಗಳಿಸಬೇಕಾದ ಏನೋ ಒಂದು, ವಿಶ್ವವ್ಯಾಪಿಯಾದದ್ದು, ಕೇವಲ ವಿಶ್ವವನ್ನು ಮೀರಿಹೋದ ಸಿದ್ಧಿಯಲ್ಲ. ಗಳಿಸಬೇಕಾದುದೇನೆಂದರೆ ಪೃಥ್ವಿಯ ಸ್ವಭಾವದಲ್ಲಿ, ಆಧ್ಯಾತ್ಮಿಕ ಜೀವನದಲ್ಲಿಯೂ ಕೂಡ ಇನ್ನೂ ಸಂಘಟಿತವಾಗಿರದ ಇಲ್ಲವೆ ನೇರವಾಗಿ ಕ್ರಿಯಾಶೀಲವಾಗಿರದ ದೈವೀ ಪ್ರಜ್ಞೆಯ ಸಾಮರ್ಥ್ಯ(ಅತಿಮಾನಸ)ವನ್ನು

ಕೆಳಗಿಳಿಸಿ ತರುವುದಾಗಿದೆ, ಇನ್ನೂ ಆ ಸಾಮರ್ಥ್ಯವನ್ನು ಸಂಘಟಿಸಿ ಅದು ನೇರವಾಗಿ ಕ್ರಿಯಾಶೀಲವಾಗುವಂತೆ ಮಾಡಬೇಕಾಗಿದೆ.

3. ಈ ಉದ್ದೇಶವನ್ನು ಸಿದ್ಧಿಸಿಕೊಳ್ಳುವುದಕ್ಕಾಗಿ ವಿಧಾನವೊಂದನ್ನು ಬಹಿರಂಗವಾಗಿ ಸಾರಲಾಗಿದೆ, ಅದು ನಾವಿರಿಸಿಕೊಂಡ ಗುರಿಯಷ್ಟೇ ಇಡಿಯಾದದ್ದು ಮತ್ತು ಸಮಗ್ರವಾದದ್ದು, ಎಂದರೆ ಪ್ರಜ್ಞೆಯ ಹಾಗೂ ಸ್ವಭಾವದ ಇಡಿಯಾದ, ಸಮಗ್ರವಾದ ಬದಲಾವಣೆ, ಕ್ರಿಯೆಯ ಒಂದು ಭಾಗವೆಂದು, ಭಿನ್ನವಾದ ಇತರ ಭಾಗಗಳಿಗೆ ಸಹಾಯ ಒದಗಿಸಲೆಂದು ಹಳೆಯ ವಿಧಾನಗಳನ್ನು ಕೈಗೆತ್ತಿಕೊಳ್ಳುವಿಕೆ ಇದೆಲ್ಲ ಇದೆ. ಈ ವಿಧಾನವನ್ನು (ಇಡಿಯಾಗಿ) ಇಲ್ಲವೆ ಇದರಂತಹದನ್ನು ಹಳೆಯ ಯೋಗದಲ್ಲಿ ನಾನು ಕಂಡಿಲ್ಲ, ಅಂತಹದನ್ನು ಕಂಡಿದ್ದರೆ ಹೊಸ ಮಾರ್ಗವನ್ನು ಮಾಡಿಕೊಳ್ಳುವುದಕ್ಕೆ ಅದರ ಶೋಧದಲ್ಲಿ ಹಾಗೂ ಆಂತರಿಕ ಸೃಷ್ಟಿಯಲ್ಲಿ ಮೂವತ್ತು ವರ್ಷಗಳ ಸಮಯವನ್ನು ಹಾಳು ಮಾಡುತ್ತಿರಲಿಲ್ಲ, ಬದಲಾಗಿ ತೀವ್ರಗತಿಯಿಂದ ನಾನು ತಲುಪಬೇಕಾದ ಗುರಿಯಿರುವ ನೆಲೆಯತ್ತ ಸಾಗುತ್ತಿದ್ದೆ, ಅಲ್ಲಿಗೆ ಸಾಗಲು ಸಿದ್ಧಪಡಿಸಿದ ಮಾರ್ಗಗಳು ಮತ್ತು ಅವುಗಳನ್ನು ಕುರಿತು ಪರಿಪೂರ್ಣಗೊಳಿಸಿದ ನಕಾಶ ಇತ್ಯಾದಿಗಳಿರುತ್ತಿದ್ದವು, ಮಾರ್ಗ ಸುರಕ್ಷಿತ ಹಾಗೂ ಸಾರ್ವತ್ರಿಕವಾಗುತ್ತಿತ್ತು.

**(CWSA 12/358, 35/54–56)** **– ಶ್ರೀ ಅರವಿಂದರು**

*

## ಆಧ್ಯಾತ್ಮಿಕ ಜೀವನವನ್ನು ಜೀವಿಸುವುದು ಹೇಗೆ?

ಆಧ್ಯಾತ್ಮಿಕ ಜೀವನವನ್ನು ಜೀವಿಸುವುದಕ್ಕಾಗಿ ಮನುಷ್ಯ ತನ್ನೊಳಗೇ ಇರುವ ಇನ್ನೊಂದು ಜಗತ್ತಿಗೆ ತನ್ನನ್ನು ತೆರೆದಿಟ್ಟುಕೊಳ್ಳಬೇಕು. ಅದು ಪ್ರಜ್ಞೆ ಹಿಮ್ಮೊಗವಾಗುವಂತೆ ಮಾಡುವುದಾಗಿದೆ. ಅತಿ ಹೆಚ್ಚು ಅಭಿವೃದ್ಧಿ ಹೊಂದಿದವರಲ್ಲಿ, ಶ್ರೇಷ್ಠ ಪ್ರತಿಭೆ ಮತ್ತು ಶ್ರೇಷ್ಠ ಸಿದ್ಧಿಗಳು ಇದ್ದವರಲ್ಲಿಯೂ ಕೂಡ ಸಾಮಾನ್ಯ ಮಾನವ ಪ್ರಜ್ಞೆ ಬಾಹ್ಯದತ್ತ ಹೊರಳಿಕೊಂಡ ಚಲನೆಯಾಗಿರುತ್ತದೆ – ಎಲ್ಲ ಚೈತನ್ಯಗಳು ಬಾಹ್ಯದತ್ತ ನಿರ್ದೇಶಿತವಾಗಿರುತ್ತವೆ, ಇಡೀ ಪ್ರಜ್ಞೆ ಬಾಹ್ಯದಲ್ಲಿ ಹರಡಿಕೊಂಡಿರುತ್ತದೆ; ಏನಾದರೂ ಅಂತರಂಗದತ್ತ ಹೊರಳಿಕೊಂಡಿದ್ದರೆ ಅದು ಅತಿ ಅಲ್ಪವಾದದ್ದಾಗಿರುತ್ತದೆ, ಬಹಳ ಅಪರೂಪಕ್ಕೆ ಕಂಡುಬರುತ್ತದೆ, ತುಂಡು ತುಂಡಾಗಿರುವಂತಹದಾಗಿರುತ್ತದೆ, ಅದು ಬಹಳ ವಿಶೇಷ ಪರಿಸ್ಥಿತಿಗಳ ಒತ್ತಡದಿಂದ



ಸಂಭವಿಸುತ್ತದೆ. ತೀವ್ರ ಆಘಾತವಿರುವಂತಹ ಪರಿಸ್ಥಿತಿಗಳು, ಜೀವನ ತಂದುಕೊಡುವ ಆಘಾತಗಳು, ನಿಖರವಾಗಿ, ಪ್ರಜ್ಞೆಯನ್ನು ಬಾಹ್ಯದಿಂದ ಅಂತರಂಗದತ್ತ ಸ್ವಲ್ಪಮಟ್ಟಿಗೆ ಹೊರಳಿಸುವ ಉದ್ದೇಶ ಹೊಂದಿರುತ್ತವೆ.

... ಆಧ್ಯಾತ್ಮಿಕ ಜೀವನವನ್ನು ಜೀವಿಸಿದ ಎಲ್ಲರಿಗೂ ಅದೇ ಬಗೆಯ ಅನುಭವವಾಗಿರುತ್ತದೆ, ಒಮ್ಮಿಂದೊಮ್ಮೆಗೆ ಅವರ ಸತ್ತೆಯಲ್ಲಿರುವ ಏನೋ ಒಂದು ಹಿಮ್ಮೊಗವಾಗಿರುತ್ತದೆ ಎಂದು ಹೇಳಬಹುದು, ಆ ಸತ್ತೆಯನ್ನು, ಕೆಲವೊಮ್ಮೆ, ಸಂಪೂರ್ಣವಾಗಿ ಅಂತರಂಗದತ್ತ ಹೊರಳಿಸಲಾಗಿರುತ್ತದೆ ಮತ್ತು ಅದೇ ವೇಳೆಗೆ ಅದು ಮೇಲ್ಮುಖವಾಗುವಂತೆ ಮಾಡಲಾಗಿರುತ್ತದೆ, ಅದು ಆಳದಲ್ಲಾಗುವ ಮೇಲ್ಮುಖವಾಗುವಿಕೆ, ಭೌತಿಕವಾಗಿ ಕಲ್ಪಿಸಿಕೊಳ್ಳಬಹುದಾದ ಎತ್ತರಗಳಿಂದ ಅದು ಭಿನ್ನವಾದುದು. ಅಕ್ಷರಶಃ ಏನೋ ಒಂದನ್ನು ಹೊರಳಿಸಲಾಗಿರುತ್ತದೆ.

...

ಸತ್ತೆಯ ಹಿಮ್ಮೊಗವಾಗುವಿಕೆ ಸಂಭವಿಸಿದ ನಂತರ ಎಲ್ಲವೂ ಮುಕ್ತಾಯಗೊಳ್ಳುತ್ತದೆ. ಮನುಷ್ಯ ಅರಸುವುದಿಲ್ಲ ಕಾಣುತ್ತಾನೆ, ಊಹೆ ಮಾಡುವುದಿಲ್ಲ ತಿಳಿದುಕೊಳ್ಳುತ್ತಾನೆ, ತಡಕಾಡುವುದಿಲ್ಲ ನೇರವಾಗಿ ಗುರಿಯತ್ತ ಸಾಗುತ್ತಾನೆ. ಮನುಷ್ಯ ದೂರ ಸಾಗಿ ಹೋದಾಗ – ಕೇವಲ ಸ್ವಲ್ಪ ದೂರ – ಪರಮೋಚ್ಚ ಸತ್ಯ ಮಾತ್ರ ಕಾರ್ಯ ಕೈಕೊಳ್ಳುತ್ತದೆ, ಪರಮೋಚ್ಚ ಪ್ರಭು ಮಾತ್ರ ಸಂಕಲ್ಪಿಸುತ್ತಾನೆ, ತಿಳಿದಿರುತ್ತಾನೆ, ಮಾನವ ಸತ್ತೆಗಳ ಮೂಲಕ ಕಾರ್ಯ ಕೈಕೊಳ್ಳುತ್ತಾನೆ ಎಂಬ ಪರಮೋಚ್ಚ ಸತ್ಯವನ್ನು ಮನುಷ್ಯ ತಿಳಿದುಕೊಳ್ಳುತ್ತಾನೆ, ಭಾವನೆಗೆ ತಂದುಕೊಳ್ಳುತ್ತಾನೆ, ಜೀವಿಸುತ್ತಾನೆ. ಅದರಲ್ಲಿ ದೋಷವಿರುವ ಸಾಧ್ಯತೆ ಎಲ್ಲಿರುತ್ತದೆ? ದೈವೀಪ್ರಭು ಕೈಕೊಳ್ಳಬೇಕೆಂದು ಸಂಕಲ್ಪಿಸಿದ್ದನ್ನು ಕೈಕೊಳ್ಳುತ್ತಾನೆ.

ತಪ್ಪಾಗಿ ನೋಡುವ ನಮ್ಮ ದೃಷ್ಟಿಗೆ ಇವು ಗ್ರಹಿಸಲಾಗದಂತಹ ಕ್ರಿಯೆಗಳು, ಆದರೆ ಅವುಗಳಿಗೆ ಒಂದು ಅರ್ಥವಿದೆ, ಒಂದು ಗುರಿಯಿದೆ, ಮತ್ತು ಎಲ್ಲಿಗೆ ಕರೆದೊಯ್ಯಬೇಕೋ ಅಲ್ಲಿಗೆ ಕರೆದೊಯ್ಯುತ್ತವೆ.

*

ನಿಮ್ಮ ಯೋಚನೆಗಳನ್ನು ನಿಯಂತ್ರಿಸಿ ಅವುಗಳನ್ನು ಸಾಧನೆಯತ್ತ ಪ್ರತ್ಯೇಕವಾಗಿ ಹೊರಳಿಸುವುದರ ಮೂಲಕ, ನಿಮ್ಮ ಕ್ರಿಯೆಗಳನ್ನು ನಿಯಂತ್ರಿಸಿ ಅವುಗಳನ್ನು ಪ್ರತ್ಯೇಕವಾಗಿ ಸಾಧನೆಯತ್ತ ಹೊರಳಿಸುವುದರ ಮೂಲಕ, ಎಲ್ಲ ಆಸೆಗಳನ್ನು ಮತ್ತು

ಎಲ್ಲ ನಿರುಪಯುಕ್ತ, ಬಾಹ್ಯ ಸಾಮಾನ್ಯ ಚಟುವಟಿಕೆಗಳನ್ನು ಅಂತ್ಯಗೊಳಿಸಿ ಹೆಚ್ಚು ಗಾಢವಾದ ಆಂತರಿಕ ಜೀವನವನ್ನು ಜೀವಿಸುವುದರ ಮೂಲಕ ಮತ್ತು ನಿಮ್ಮನ್ನು ಸಾಮಾನ್ಯ ವಿಷಯಗಳು, ಸಾಮಾನ್ಯ ಪ್ರತಿಕ್ರಿಯೆಗಳು ಹಾಗೂ ಸಾಮಾನ್ಯ ಕ್ರಿಯೆಗಳು ಇವೆಲ್ಲವುಗಳಿಂದ ಪ್ರತ್ಯೇಕಗೊಳಿಸುವುದರ ಮೂಲಕ ನಿಮ್ಮ ಸುತ್ತ ಒಂದು ಬಗೆಯ ವಾತಾವರಣವನ್ನು ಸೃಷ್ಟಿಸುತ್ತೀರಿ.

ಉದಾಹರಣೆಗೆ ಯಾವುದೋ ವಿಲಕ್ಷಣವಾದ ವಿಷಯವನ್ನು ಓದುವುದು, ಹರಟೆ ಹೊಡೆಯುವುದು, ಏನನ್ನೋ ಕೈಕೊಳ್ಳುತ್ತಿರುವುದು ಇದೆಲ್ಲದರ ಬದಲಾಗಿ ನಿಮ್ಮ ಮಾರ್ಗಕ್ಕೆ ಸಹಾಯಕವಾಗುವ ವಿಷಯವನ್ನು ಓದಿದರೆ, ದೈವೀಸಿದ್ಧಿಯತ್ತ ಕರೆದೊಯ್ಯುವುದಕ್ಕೆ ಅನುರೂಪವಾದ ಕ್ರಿಯೆಯನ್ನು ಕೈಕೊಂಡರೆ, ನಿಮ್ಮಲ್ಲಿರುವ ಎಲ್ಲ ಆಸೆಗಳನ್ನು, ಬಾಹ್ಯ ವಿಷಯಗಳತ್ತ ಹೊರಳಿಸುವ ಪ್ರಚೋದನೆಗಳನ್ನು ಅಂತ್ಯಗೊಳಿಸಿದರೆ, ನಿಮ್ಮ ಮಾನಸಿಕ ಸತ್ತೆಯನ್ನು ಸ್ಥಿರಗೊಳಿಸಿದರೆ, ಪ್ರಾಣಿಕ ಸತ್ತೆಯನ್ನು ಸಮಾಧಾನಗೊಳಿಸಿದರೆ, ಬಾಹ್ಯದಿಂದ ಬರುವ ಸೂಚನೆಗಳ ವಿರುದ್ಧ ನಿಮ್ಮನ್ನು ಮುಚ್ಚಿಹಾಕಿಕೊಂಡರೆ, ಮತ್ತು ನಿಮ್ಮನ್ನು ಸುತ್ತುವರಿದ ಜನರ ಕ್ರಿಯೆಯಿಂದ ವಿಮುಕ್ತರಾದರೆ ನೀವು ಎಂತಹ ಆಧ್ಯಾತ್ಮಿಕ ವಾತಾವರಣವನ್ನು ಸೃಷ್ಟಿಸುತ್ತೀರೆಂದರೆ ಅದನ್ನು ಯಾವುದೂ ಸ್ಪರ್ಶಿಸಲಾರದು, ಮತ್ತು ಅದು ಇನ್ನುಮುಂದೆ ಪರಿಸ್ಥಿತಿಗಳ ಮೇಲೆ, ಇಲ್ಲವೆ ನಿಮ್ಮೊಡನೆ ಜೀವಿಸುತ್ತಿರುವವರ ಮೇಲೆ ಇಲ್ಲವೆ ನೀವು ಜೀವಿಸುತ್ತಿರುವ ಸ್ಥಿತಿಗಳ ಮೇಲೆ ಅವಲಂಬಿಸಿರುವುದಿಲ್ಲ, ಏಕೆಂದರೆ ನಿಮ್ಮದೇ ಆಧ್ಯಾತ್ಮಿಕ ವಾತಾವರಣ ನಿಮ್ಮನ್ನು ಸುತ್ತುವರಿದಿರುತ್ತದೆ. ಮತ್ತು ಮನುಷ್ಯ ಅದನ್ನು ಆ ರೀತಿ ದೊರಕಿಸುತ್ತಾನೆ, ಎಂದರೆ ತನ್ನ ಲಕ್ಷ್ಯವನ್ನು ಕೇವಲ ಆಧ್ಯಾತ್ಮಿಕ ಜೀವನದತ್ತ ಹೊರಳಿಸುವುದರ ಮೂಲಕ, ಆಧ್ಯಾತ್ಮಿಕ ಜೀವನದಲ್ಲಿ ಸಹಾಯಕವಾಗುವುದನ್ನು ಮಾತ್ರ ಓದುವುದರ ಮೂಲಕ, ಆಧ್ಯಾತ್ಮಿಕ ಜೀವನದತ್ತ ಕರೆದೊಯ್ಯುವುದನ್ನು ಮಾತ್ರ ಕೈಕೊಳ್ಳುವುದರ ಮೂಲಕ ಅವನು ಅದನ್ನು ದೊರಕಿಸುತ್ತಾನೆ. ಆಗ ನೀವು ನಿಮ್ಮದೇ ವಾತಾವರಣವನ್ನು ಸೃಷ್ಟಿಸುತ್ತೀರಿ. ಆದರೆ, ಸ್ವಾಭಾವಿಕವಾಗಿ, ನೀವು ಎಲ್ಲ ದ್ವಾರಗಳನ್ನು ತೆರೆದಿರಿಸಿದರೆ, ಜನರು ಹೇಳುವುದಕ್ಕೆ ಕಿವಿಗೊಟ್ಟರೆ, ಈ ಒಬ್ಬನ ಉಪದೇಶವನ್ನು, ಇನ್ನೊಬ್ಬನ ಸ್ಫೂರ್ತಿಯನ್ನು ಅನುಸರಿಸಿದರೆ ಮತ್ತು ಬಾಹ್ಯ ವಸ್ತುಗಳಿಗಾಗಿ ಆಸೆಗಳಿಂದ ತುಂಬಿಕೊಂಡಿದ್ದರೆ ನೀವು ನಿಮಗಾಗಿ ಆಧ್ಯಾತ್ಮಿಕ ವಾತಾವರಣವನ್ನು ಸೃಷ್ಟಿಸಲಾರಿರಿ. ಇನ್ನಿತರರೆಲ್ಲರಿಗೂ ಇರುವಂತಹ ಸರ್ವಸಾಧಾರಣ ವಾತಾವರಣ ನಿಮ್ಮದಾಗಿರುತ್ತದೆ.

*



ಯೋಗಿ ಹೊಂದಿರಬೇಕಾದ ಏಕಮಾತ್ರ ಮನೋಧರ್ಮ ನಮ್ರನಾಗಿರುವುದಾಗಿದೆ, ಹಾಗೂ ದೈವಾಜ್ಞೆ ಏನೇ ಆಗಿದ್ದರೂ ಅದಕ್ಕೆ ವಿಧೇಯನಾಗಿರುವುದಾಗಿದೆ. ಅವನಿಗೆ ಅತ್ಯಗತ್ಯವಾದದ್ದು ಏನೂ ಇರಬಾರದು, ಯಾವುದೂ ಭಾರವಾದದ್ದೆನಿಸಬಾರದು. ಬಹಳಷ್ಟು ಸಲ, ಆಧ್ಯಾತ್ಮಿಕ ಜೀವನವನ್ನು ಜೀವಿಸಲು ಬಯಸುವವರಿಗೆ ಮೊದಲ ಪ್ರಚೋದನೆ ತಮ್ಮಲ್ಲಿರುವುದನ್ನೆಲ್ಲ ಚೆಲ್ಲಿಕೊಡುವುದಾಗಿರುತ್ತದೆ. ಅದನ್ನು ಕೈಕೊಳ್ಳುವುದೇಕೆಂದರೆ ಅವರು ಭಾರ ಹೊತ್ತುಕೊಳ್ಳುವುದನ್ನು ಇಷ್ಟಪಡುವುದಿಲ್ಲ, ಭಗವಂತನಿಗೆ ಶರಣಾಗತರಾಗ–ಬೇಕಾಗಿದೆ ಎಂಬ ಕಾರಣಕ್ಕಾಗಿಯಲ್ಲ. ಆದರೆ ಅದು ತಪ್ಪಾದ ಚಲನೆ. ನಿಮ್ಮಲ್ಲಿರುವ ವಸ್ತುಗಳು ನಿಮ್ಮವೆಂದು ನೀವು ಯೋಚಿಸಬಾರದು – ಅವು ಭಗವಂತನಿಗೆ ಸೇರಿರುತ್ತವೆ. ನೀವು ಯಾವುದರಿಂದ ಸಂತೋಷಪಡಲಿ ಎಂಬುದು ಭಗವಂತನ ಬಯಕೆಯಾಗಿರುತ್ತದೆಯೋ, ಅದರಿಂದ ನೀವು ಸಂತೋಷ ಪಡೆಯಿರಿ, ಆದರೆ ಅದನ್ನು ಮುಂದಿನ ಕ್ಷಣ ಮುಗುಳ್ನಗೆಯೊಂದಿಗೆ ಬಿಟ್ಟುಕೊಡಲು ನೀವು ಸಿದ್ಧರಾಗಿರಬೇಕು.

*

**ಪ್ರಶ್ನೆ :** *ಮಧುರ ಮಾತೆಯವರೆ, ನಮ್ಮ ಆಧ್ಯಾತ್ಮಿಕ ಜೀವನ ಎಲ್ಲಿಂದ ಪ್ರಾರಂಭವಾಗುತ್ತದೆ?*

**ಶ್ರೀಮಾತೆ :** ಮನುಷ್ಯ ಚೈತ್ಯದಲ್ಲಿರುವ ಭಗವಂತನೊಡನೆ ಸಂಸರ್ಗದಲ್ಲಿದ್ದಾಗ, ಚೈತ್ಯದಲ್ಲಿರುವ ದೈವೀ ಸಾನ್ನಿಧ್ಯದ ಬಗ್ಗೆ ಪ್ರಜ್ಞೆಯುಳ್ಳವನಾದಾಗ ಮತ್ತು ಸತತ ಚೈತ್ಯದೊಡನೆ ಸಂಸರ್ಗದಲ್ಲಿದ್ದಾಗ ಅವನ ಆಧ್ಯಾತ್ಮಿಕ ಜೀವನ ಪ್ರಾರಂಭವಾಗುತ್ತದೆ, ಅದಕ್ಕೂ ಮೊದಲಲ್ಲ. ಅದು ನಿಜವಾದ ಆಧ್ಯಾತ್ಮಿಕ ಜೀವನವಾಗಿರುತ್ತದೆ.

ಮನುಷ್ಯ ತನ್ನ ಚೈತ್ಯಸತ್ತೆಯೊಂದಿಗೆ ಏಕತೆ ಪಡೆದಾಗ, ಮತ್ತು ದೈವೀ ಸಾನ್ನಿಧ್ಯದ ಬಗ್ಗೆ ಅರಿವುಳ್ಳವನಾದಾಗ ಮತ್ತು ತನ್ನ ಕಾರ್ಯಕ್ಕಾಗಿ ಪ್ರಚೋದನೆ–ಯನ್ನು ಈ ದೈವೀ ಸಾನ್ನಿಧ್ಯದಿಂದ ಪಡೆದಾಗ, ಮತ್ತು ಅವನ ಸಂಕಲ್ಪ ದೈವೀ ಸಂಕಲ್ಪದೊಡನೆ ಪ್ರಜ್ಞಾವಂತ ಸಹಯೋಗಿಯಾದಾಗ – ಅದು ಪ್ರಾರಂಭ ಬಿಂದು.

ಅದಕ್ಕೂ ಮೊದಲು ಆಧ್ಯಾತ್ಮಿಕ ಜೀವನಕ್ಕಾಗಿ ಮನುಷ್ಯ ಅಭೀಪ್ಸೆ ಪಡುವವನಾಗಿರಬಹುದು, ಆದರೆ ಅವನದು ಆಧ್ಯಾತ್ಮಿಕ ಜೀವನವಾಗಿರುವುದಿಲ್ಲ.

**(9/415–16; 6/356–57, 3/54–55; 8/136)** **– ಶ್ರೀಮಾತೆ**

*

# ಆಧ್ಯಾತ್ಮಿಕ ಪುನರ್ಜನ್ಮ

ಆಧ್ಯಾತ್ಮಿಕ ಪುನರ್ಜನ್ಮದ ಅರ್ಥ ಸತತ ನಮ್ಮ ಭೂತಕಾಲದ ಸಹವಾಸಗಳನ್ನು ಮತ್ತು ಪರಿಸ್ಥಿತಿಗಳನ್ನು ದೂರ ಚೆಲ್ಲಿಕೊಡುವುದಾಗಿದೆ ಮತ್ತು ಪ್ರತಿಯೊಂದು ನಿಷ್ಕಲಂಕ (virgin) ಕ್ಷಣದಲ್ಲಿ ನಾವು ಹೊಸದಾಗಿ ಜೀವನವನ್ನು ಪ್ರಾರಂಭಿಸುತ್ತಿರುವೆವೆಂಬ ಭಾವನೆಯಿಂದ ಮುಂದುವರಿಯುವುದಾಗಿದೆ. ಅದು ನಮ್ಮ ಭೂತಕಾಲದ ಕರ್ಮಗಳ ಪ್ರವಾಹದಿಂದ ಮುಕ್ತವಾಗುವುದಾಗಿದೆ. ಬೇರೆ ಶಬ್ದಗಳಲ್ಲಿ ಹೇಳುವುದಾದರೆ ಅದು ಪ್ರಕೃತಿಯ ಕಾರಣ–ಪರಿಣಾಮಗಳ ಸರ್ವಸಾಮಾನ್ಯ ಚಟುವಟಿಕೆಯ ಬಂಧನದಿಂದ ವಿಮೋಚನೆ ಪಡೆಯುವುದಾಗಿದೆ. ಭೂತಕಾಲವನ್ನು ಪ್ರಜ್ಞೆಯಿಂದ ಕತ್ತರಿಸಿ ಹಾಕುವುದನ್ನು ಯಶಸ್ವಿಯಾಗಿ ಸಿದ್ಧಿಸಿಕೊಂಡಾಗ ಇನ್ನೂ ನಮ್ಮ ಸ್ಮರಣೆಯಲ್ಲಿ ಸ್ಪಷ್ಟವಾಗಿದ್ದುಕೊಂಡು ಜಿಗಳೆಗಳ ಹಾಗೆ ನಮ್ಮ ರಕ್ತವನ್ನು ಹೀರುತ್ತ ಇರುವ ಆ ಎಲ್ಲ ತಪ್ಪುಗಳು, ಪ್ರಮಾದಗಳು, ದೋಷಗಳು ಮತ್ತು ಮೂರ್ಖತನಗಳು ನಾವು ಹೆಚ್ಚಿನ ಸಂತೋಷದಿಂದ ಮುಕ್ತವಾಗಿರಲು ನಮ್ಮನ್ನು ಬಿಟ್ಟುಕೊಟ್ಟು ಕಳಚಿಹೋಗುತ್ತವೆ. ಈ ಸ್ವಾತಂತ್ರ್ಯ ಕೇವಲ ಯೋಚನೆಯಲ್ಲಿರುವ ಸಂಗತಿಯಲ್ಲ, ಅದು ಅತ್ಯಂತ ಘನರೂಪದ, ವ್ಯಾವಹಾರಿಕ ಹಾಗೂ ಪ್ರಾಪಂಚಿಕ ವಾಸ್ತವ ಸಂಗತಿ. ನಾವು ನಿಜವಾಗಿ ಮುಕ್ತರಾಗಿರುತ್ತೇವೆ, ಯಾವುದೂ ನಮ್ಮನ್ನು ಬಂಧಿಸುವುದಿಲ್ಲ, ಯಾವುದೂ ನಮ್ಮ ಮೇಲೆ ಪರಿಣಾಮ ಬೀರುವುದಿಲ್ಲ, ಜವಾಬ್ದಾರಿ ಕುರಿತು ಗೀಳಿರುವುದಿಲ್ಲ (obscession). ನಮ್ಮ ಭೂತಕಾಲವನ್ನು ನಿಷ್ಪರಿಣಾಮಗೊಳಿಸಲು, ನಿರ್ಮೂಲಮಾಡಲು ಇಲ್ಲವೆ ದಾಟಿ ಬೆಳೆಯುತ್ತ ಅದನ್ನು ಕಳೆದುಕೊಳ್ಳಲು ಬಯಸಿದರೆ, ಅದನ್ನು ಕೇವಲ ಪಶ್ಚಾತ್ತಾಪ ಪಡುವುದರ ಮೂಲಕ ಇಲ್ಲವೆ ಇತರ ಅಂತಹ ಸಾಧನಗಳ ಮೂಲಕ ಮಾಡಲಾಗುವುದಿಲ್ಲ, ಪರಿವರ್ತನೆಗೊಳಗಾಗದ ಭೂತಕಾಲ ಎಂದಾದರೂ ಇದ್ದಿತೆಂಬುದನ್ನು ನಾವು ಮರೆತುಬಿಡಬೇಕು ಮತ್ತು ಜ್ಞಾನೋದಯ ಪಡೆದ ಪ್ರಜ್ಞೆಯ ಸ್ಥಿತಿಯಲ್ಲಿ ಪ್ರವೇಶಿಸಬೇಕು, ಆ ಪ್ರಜ್ಞೆ, ಸ್ಥಾಯಿಯಾಗಿ ಕಟ್ಟಿಹಾಕುವ ಎಲ್ಲ ಆಧಾರಗಳು ಸಡಿಲುಗೊಳ್ಳುವಂತೆ ಮಾಡುವುದು. ಪುನರ್ಜನ್ಮ ತಾಳುವುದೆಂದರೆ, ಮೊಟ್ಟಮೊದಲಿಗೆ, ನಮ್ಮ ಚೈತ್ಯಪ್ರಜ್ಞೆಯಲ್ಲಿ ಪ್ರವೇಶಿಸುವುದಾಗಿದೆ, ಅಲ್ಲಿ ನಾವು ಭಗವಂತನೊಡನೆ ಏಕತೆಯಲ್ಲಿರುತ್ತೇವೆ ಮತ್ತು ಶಾಶ್ವತವಾಗಿ ಕರ್ಮದಿಂದ ಮುಕ್ತರಾಗಿರುತ್ತೇವೆ. ಚೈತ್ಯದ ಅರಿವು ತಂದುಕೊಳ್ಳದೆ ಹಾಗೆ ಮಾಡಲು ಸಾಧ್ಯವಾಗುವುದಿಲ್ಲ, ಆದರೆ ಒಮ್ಮೆ ನಾವು ಸುರಕ್ಷಿತವಾಗಿ ನಮ್ಮೊಳಗಿರುವ,



ಭಗವಂತನಿಗೆ ಶಾಶ್ವತವಾಗಿ ಶರಣಾಗತವಾಗಿರುವ, ನಿಜವಾದ ಆತ್ಮದ ಬಗ್ಗೆ ಪ್ರಜ್ಞೆ ತಂದುಕೊಂಡ ನಂತರ ಎಲ್ಲ ಬಂಧನ ನಿಂತುಹೋಗುತ್ತದೆ. ಆಗ ಜೀವನ ನಿಲ್ಲದ ರೀತಿಯಲ್ಲಿ ಹೊಸದಾಗಿ ಪ್ರಾರಂಭವಾಗತೊಡಗುತ್ತದೆ ಮತ್ತು ಭೂತಕಾಲ ಅಂಟಿಕೊಳ್ಳುವುದು ನಿಂತುಹೋಗುತ್ತದೆ. ಆಧ್ಯಾತ್ಮಿಕ ಪುನರ್ಜನ್ಮ ಕುರಿತು ಹೇಳಬಹುದಾದ ವಿಚಾರವೊಂದು ಹೀಗಿದೆ: ಇಡೀ ವಿಶ್ವ ಪ್ರತಿಕ್ಷಣ ಮಾಯವಾಗಿ ಹೋಗುವುದರ ಹಾಗೂ ಪ್ರತಿಕ್ಷಣ ಪುನಃ ಸೃಷ್ಟಿಯಾಗುವುದರ ಸತತ ಅನುಭವ ನಿಮಗಾಗಬಹುದು.

**(3/176–77)** **– ಶ್ರೀಮಾತೆ**

*



## The Mother's Guidance

*Q: Mother, what is it that will help me always remember that I am living a spiritual life?*

The Mother's Answer:

The awareness of the Divine Presence in all things and always.

**(16:155) 1st ed.**

*

## A Prayer Given by the Mother

Supreme Lord... Grant that I may become conscious of Your presence.

**(17:379) 1st ed.**

The Mother

*

**ಅನುಬಂಧ:**

### ಮನಸ್ಸಿನಲ್ಲಿ ನಿಶ್ಚಲ ನೀರವತೆಯನ್ನು ಸ್ಥಾಪಿಸುವುದು ಹೇಗೆ?

**ಪ್ರಶ್ನೆ :** *ಶ್ರೀಮಾತೆಯವರೆ, "ಮನುಷ್ಯ ತನ್ನ ಪ್ರಜ್ಞೆಯನ್ನು ಉಚ್ಚವಾಗಿರಿಸುವುದರ ಅರ್ಥ" ಉಚ್ಚತರ ಯೋಚನೆಗಳನ್ನು ಹೊಂದುವುದಾಗಿರುತ್ತದೆಯೆ?*

**ಶ್ರೀಮಾತೆ :** ಇದು ವಾಸ್ತವ ಸಂಗತಿಗಿಂತ ಹೆಚ್ಚಾಗಿ ಒಂದು ಪರಿಣಾಮ. ಮನುಷ್ಯ ತನ್ನ ಪ್ರಜ್ಞೆಯನ್ನು ಉಚ್ಚ ಸ್ತರದಲ್ಲಿ ಇರಿಸಿದಾಗ, ಸ್ವಾಭಾವಿಕವಾಗಿ ಅದು ಯೋಚನೆಗಳನ್ನು ಸೋಸಿ ಕಳಿಸುವ ಕಾರ್ಯ ಮಾಡುತ್ತದೆ ಮತ್ತು ಉಚ್ಚತರ ಯೋಚನೆಗಳಿಗೆ ಮಾತ್ರ ಅನುವು ಮಾಡಿಕೊಡುತ್ತದೆ, ಆದರೆ ಅದು ವಾಸ್ತವ ಸಂಗತಿಗಿಂತ ಹೆಚ್ಚಾಗಿ ಒಂದು ಪರಿಣಾಮವಾಗಿರುತ್ತದೆ. ಮನುಷ್ಯ ತನ್ನ ಪ್ರಜ್ಞೆಯನ್ನು ಉಚ್ಚ ಹಂತದಲ್ಲಿ ಇರಿಸುವುದೆಂದರೆ ಅದನ್ನು ಸತ್ತೆಯಲ್ಲಿಯ ನಿಮ್ನತರ ಹಂತಗಳಿಂದ ಮೇಲ್ಗಡೆಗೆ ಏರಿಸುವುದಾಗಿರುತ್ತದೆ, ಅದು ಪ್ರಜ್ಞೆಯನ್ನು ಪ್ರಕಾಶದಲ್ಲಿ, ಶಾಂತಿಯಲ್ಲಿ, ಉಚ್ಚತರ ಜ್ಞಾನದಲ್ಲಿ ಮತ್ತು ಸಾಮರಸ್ಯದಲ್ಲಿ ಇರಿಸುವುದಾಗಿರುತ್ತದೆ, ಎಂದರೆ ಅವನು ತನ್ನ ಪ್ರಜ್ಞೆಯನ್ನು ಸಾಧ್ಯವಿದ್ದಷ್ಟು ತನ್ನ ಸತ್ತೆಯ ಎತ್ತರದಲ್ಲಿ, ನಿಮ್ನತರ ಚಲನೆಗಳಿಂದ ಮುಕ್ತವಾದ ಸ್ಥಿತಿಯಲ್ಲಿ ಇರಿಸುವುದಾಗಿರುತ್ತದೆ. ಆಗ, ಸ್ವಾಭಾವಿಕವಾಗಿ, ಪ್ರಜ್ಞೆ ಅಲ್ಲಿದ್ದರೆ ಅದು ಸ್ವೀಕರಿಸುವ ಯೋಚನೆಗಳು ಉಚ್ಚತರವಾಗಿರುತ್ತವೆ. ಯೋಚನೆ ಪ್ರಜ್ಞೆಯ ಕೇವಲ ಒಂದು ಬಗೆಯ ಚಟುವಟಿಕೆ, ಅದು ಪ್ರಜ್ಞೆಯ ದ್ರವ್ಯ(stuff)ವಾಗಿರುವುದಿಲ್ಲ. ಯೋಚನಾರಹಿತ ಪ್ರಜ್ಞೆ ಇರುತ್ತದೆ. ಪ್ರಜ್ಞೆಯ ಬಹಳ ಎತ್ತರವಾದ ಸ್ಥಿತಿಯಿದೆ, ಅಲ್ಲಿ ಯೋಚನೆಗಳಿರುವುದಿಲ್ಲ. ಆ ಪ್ರಜ್ಞೆ ವಿಷಯಗಳನ್ನು ಕುರಿತು ಪರಿಪೂರ್ಣ ಜ್ಞಾನ ಹೊಂದಬಲ್ಲದು, ಅದನ್ನು ಯೋಚನೆಗಳಲ್ಲಿ ಇಲ್ಲವೆ ಶಬ್ದಗಳಲ್ಲಿ ಅಭಿವ್ಯಕ್ತಪಡಿಸದೆ ಇರಬಹುದು. ಯೋಚನೆ ಕೇವಲ ಪ್ರಜ್ಞೆಯ ಒಂದು ಬಗೆಯ ಚಟುವಟಿಕೆ.



**ಪ್ರಶ್ನೆ :** *"ಮೇಲಿನಿಂದಾಗುವ ಅವರೋಹಣದಿಂದ ನಿಶ್ಚಲ ನೀರವತೆ ಹೆಚ್ಚು ಸುಲಭವಾಗಿ ಸ್ಥಾಪಿತಗೊಳ್ಳುತ್ತದೆ", "ಮೇಲಿನಿಂದ" ಎಂಬುದರ ಅರ್ಥವೇನು?*

**ಶ್ರೀಮಾತೆ :** ಪ್ರಜ್ಞೆಯ ಉಚ್ಚತರ ಪ್ರಾಂತಗಳಿಂದ ಎಂದರ್ಥ. ನೀವು ಪ್ರಜ್ಞೆಯ ಉಚ್ಚತರ ಪ್ರಾಂತಗಳಿಗೆ ನಿಮ್ಮನ್ನು ತೆರೆದಿರಿಸಿಕೊಂಡಾಗ ಮತ್ತು ಮೇಲಿನಿಂದ ಶಕ್ತಿ ಅವರೋಹಣ ಮಾಡಿದಾಗ ಬಹಳ ಸ್ವಾಭಾವಿಕವಾಗಿ ಅದು ನಿಮ್ನತರ ಪ್ರಾಂತಗಳಲ್ಲಿ ನಿಶ್ಚಲ ನೀರವತೆಯನ್ನು ಸ್ಥಾಪಿಸುತ್ತದೆ. ಏಕೆಂದರೆ ಈ ಪ್ರಾಂತಗಳು ಅವರೋಹಣ ಸಾಮರ್ಥ್ಯದ ಆಳಿಕೆಗೆ ಒಳಪಟ್ಟಿರುತ್ತವೆ. ಇದು ಮನಸ್ಸಿನ ಉಚ್ಚತರ ಪ್ರಾಂತಗಳಿಂದ ಇಲ್ಲವೆ ಅವುಗಳಾಚೆಗಿರುವುದರಿಂದ, ಅತಿಮನಸ್ಸಿನಿಂದಲೂ ಕೂಡ ಬರುತ್ತದೆ. ಹಾಗಾಗಿ ಈ ಶಕ್ತಿ ಹಾಗೂ ಪ್ರಜ್ಞೆ ಕೆಳಗಿಳಿದು ಬಂದಾಗ ಮತ್ತು ನಿಮ್ನತರ ಪ್ರಜ್ಞೆಯಲ್ಲಿ ಪ್ರವೇಶಿಸಿದಾಗ ಈ ಪ್ರಜ್ಞೆ ಅಚಂಚಲವಾಗುತ್ತದೆ, ಏಕೆಂದರೆ ಅದನ್ನು ಪರಿವರ್ತನೆಗೊಳಪಡಿಸುವ ಉಚ್ಚತರ ಪ್ರಕಾಶದಿಂದ ಅದು ಮುತ್ತಿಗೆಗೆ, ಪ್ರವಾಹದ ರಭಸಕ್ಕೆ ಒಳಗಾದ ಹಾಗಿರುತ್ತದೆ.

ವಾಸ್ತವದಲ್ಲಿ ಮಾನವನ ಮನಸ್ಸಿನಲ್ಲಿ ಸತತ ಉಳಿದುಕೊಳ್ಳುವ ನಿಶ್ಚಲ ನೀರವತೆಯನ್ನು ಸ್ಥಾಪಿಸುವುದಕ್ಕೆ ಇದು ಮಾತ್ರ ಒಂದು ರೀತಿಯಾಗಿರುತ್ತದೆ. ಅದು ಉಚ್ಚತರ ಪ್ರಜ್ಞೆ, ಶಕ್ತಿ ಹಾಗೂ ಪ್ರಕಾಶ ಇವು ನಿಮ್ನತರ ಮನಸ್ಸಿನಲ್ಲಿ ಇಳಿದು ಬರಲೆಂದು ಮತ್ತು ತಮ್ಮ ವಶಕ್ಕೆ ತೆಗೆದುಕೊಳ್ಳಲೆಂದು ಅವುಗಳಿಗೆ ಮನುಷ್ಯ ತನ್ನನ್ನು ತೆರೆದಿರಿಸಿಕೊಳ್ಳುವುದಾಗಿದೆ. ಮತ್ತು ಇಲ್ಲಿ ಅದು ಸಂಭವಿಸಿದಾಗ ಈ ನಿಮ್ನತರ ಮನಸ್ಸು ಸತತ ಅಚಂಚಲವಾಗಿ, ನಿಶ್ಚಲ ನೀರವತೆಯಲ್ಲಿ ಉಳಿದುಕೊಳ್ಳಬಲ್ಲದು, ಏಕೆಂದರೆ ಇದೊಂದೇ ಕಾರ್ಯ ಕೈಕೊಳ್ಳುತ್ತದೆ ಮತ್ತು ಇಡೀ ಸತ್ತೆಯನ್ನು ತುಂಬಿಬಿಡುತ್ತದೆ. ಮೇಲಿನಿಂದ ಬರುವ ಈ ಶಕ್ತಿ ಮನಸ್ಸಿನಲ್ಲಿ ಒಳನುಗ್ಗಿದಾಗ ಮತ್ತು ಅದನ್ನು ಉಪಯೋಗಿಸಿದಾಗ ಮನುಷ್ಯ ಕ್ರಿಯಾಶೀಲವಾಗಿರದಂತೆ ಮನಸ್ಸನ್ನು ಬಿಟ್ಟುಕೊಟ್ಟು ಕ್ರಿಯೆ ಕೈಕೊಳ್ಳಬಲ್ಲ, ಬರೆಯಬಲ್ಲ ಮತ್ತು ಮಾತನಾಡಬಲ್ಲ, ಮನಸ್ಸು ಕೇವಲ ನಿಷ್ಕ್ರಿಯ ಉಪಕರಣವಾಗಿಬಿಡುತ್ತದೆ. ವಾಸ್ತವದಲ್ಲಿ ನಿಶ್ಚಲ ನೀರವತೆಯನ್ನು ಸ್ಥಾಪಿಸುವುದಕ್ಕೆ ಇರುವ ಮಾರ್ಗ ಇದೊಂದೇ, ಏಕೆಂದರೆ ಇದು ಸ್ಥಾಪಿತಗೊಂಡಾಗ, ನಿಶ್ಚಲ ನೀರವತೆಯೂ ಸ್ಥಾಪಿತಗೊಳ್ಳುತ್ತದೆ, ಮನಸ್ಸು ಈ ನಂತರ ಅಲುಗಾಡುವುದಿಲ್ಲ, ಈ ಶಕ್ತಿ ಮನಸ್ಸಿನಲ್ಲಿ ಪ್ರಕಟವಾದಾಗ ಅದರ ಪ್ರೇರಣೆಯಡಿಯಲ್ಲಿ ಮಾತ್ರ ಅದು ಕಾರ್ಯ ಕೈಕೊಳ್ಳುತ್ತದೆ. ಅದು ಅತ್ಯಂತ ಅಚಂಚಲತೆಯ ಹಾಗೂ ನಿಶ್ಚಲ ನೀರವತೆಯ ಕ್ಷೇತ್ರವಿದ್ದ ಹಾಗಿರುತ್ತದೆ, ಮತ್ತು ಆ ಶಕ್ತಿ ಬಂದಾಗ ಮನಸ್ಸಿನ ಅಂಶಗಳು ಕಾರ್ಯದಲ್ಲಿ ತೊಡಗಿಕೊಳ್ಳುವಂತೆ

ಮಾಡುತ್ತದೆ ಮತ್ತು ಅವುಗಳನ್ನು ಉಪಯೋಗಿಸುತ್ತದೆ ಮತ್ತು ಮನಸ್ಸಿನ ಸತ್ತೆ ತಳಮಳಕ್ಕೊಳಗಾಗದಂತೆ ಮನಸ್ಸಿನ ಮೂಲಕ ಅಭಿವ್ಯಕ್ತಿಯನ್ನು ಕಂಡುಕೊಳ್ಳುತ್ತದೆ. ಅದು ಬಹಳ ಅಚಂಚಲವಾಗಿ ಉಳಿದುಕೊಳ್ಳುತ್ತದೆ.

**ಪ್ರಶ್ನೆ :** *ಮಧುರ ಮಾತೆಯವರೆ, ಮಿಶ್ರಣಗೊಂಡ ವಿಷಯಗಳಿಂದ ಪ್ರಜ್ಞೆ ಬರಿದಾಗುವಂತೆ ಮಾಡುವುದು ಹೇಗೆ?* [1]

**ಶ್ರೀಮಾತೆ :** ಅದನ್ನು ಅಭೀಪ್ಸೆಯ ಮೂಲಕ, ನಿಮ್ನತರ ಚಲನೆಗಳನ್ನು ತಿರಸ್ಕರಿಸುವುದರ ಮೂಲಕ ಮತ್ತು ಉಚ್ಚತರ ಶಕ್ತಿಗೆ ಕರೆಕೊಡುವುದರ ಮೂಲಕ ಕೈಕೊಳ್ಳಬಹುದು. ಕೆಲವೊಂದು ಚಲನೆಗಳನ್ನು ನೀವು ಒಪ್ಪಿಕೊಳ್ಳದಿದ್ದರೆ, ಆಗ ಸ್ವಾಭಾವಿಕವಾಗಿ, ಅವು ಪ್ರಕಟವಾಗಲಾರವು ಎಂಬುದನ್ನು ಕಂಡುಕೊಂಡು ಕ್ರಮೇಣ ಶಕ್ತಿಗುಂದುತ್ತವೆ ಮತ್ತು ಅವು ಬರುವುದು ನಿಂತು ಹೋಗುತ್ತದೆ. ಕೆಳಸ್ತರದ ಪ್ರತಿಯೊಂದನ್ನು ಆಭಿವ್ಯಕ್ತಪಡಿಸಲು ನಿರಾಕರಿಸಿದರೆ, ಸ್ವಲ್ಪ ಸ್ವಲ್ಪವಾಗಿ ಆ ವಿಷಯ ಮಾಯವಾಗುತ್ತದೆ ಮತ್ತು ಪ್ರಜ್ಞೆಯಲ್ಲಿ ಕೆಳಸ್ತರದ ವಿಷಯಗಳು ಉಳಿದುಕೊಳ್ಳುವುದಿಲ್ಲ. ಕ್ರಿಯೆಯಲ್ಲಿ ಮಾತ್ರವಷ್ಟೇ ಅಲ್ಲ, ಆದರೆ ಯೋಚನೆಯಲ್ಲಿ ಹಾಗೂ ಭಾವನೆಯಲ್ಲಿ ಅಭಿವ್ಯಕ್ತಪಡಿಸದೆ ಇರುವುದು ಎಂಬುದು ನಾನು ಹೇಳುತ್ತಿರುವುದರ ಅರ್ಥ. ಪ್ರಚೋದನೆ, ಯೋಚನೆ ಹಾಗೂ ಭಾವನೆ ಇವು ಬಂದಾಗ ನೀವು ಅವುಗಳನ್ನು ನಿರಾಕರಿಸಿದರೆ ಬದಿಗೆ ದೂಡಿಬಿಟ್ಟದರೆ ಮತ್ತು ಆಂತರಿಕ ಅಭೀಪ್ಸೆಯ ಹಾಗೂ ಸ್ಥಿರತೆಯ ಸ್ಥಿತಿಯಲ್ಲಿ ಉಳಿದುಕೊಂಡುಬಿಟ್ಟರೆ ಕ್ರಮೇಣ ಅವು ಶಕ್ತಿಯನ್ನು ಕಳೆದುಕೊಳ್ಳುತ್ತವೆ ಮತ್ತು ಬರುವುದು ನಿಂತು ಹೋಗುತ್ತದೆ. ಹೀಗೆ ಪ್ರಜ್ಞೆಯನ್ನು ಕೆಳಸ್ತರದ ಚಲನೆಗಳಿಂದ ಬರಿದಾಗಿಸಲಾಗುತ್ತದೆ.

ಆದರೆ ಉದಾಹರಣೆಗೆ ಅನಪೇಕ್ಷಣೀಯ ಯೋಚನೆಗಳು ಬಂದಾಗ ನೀವು ಅವುಗಳತ್ತ ನೋಡಿದರೆ, ಅವಲೋಕಿಸಿದರೆ, ಅವುಗಳನ್ನು ಅನುಸರಿಸುವುದರಲ್ಲಿ ಸಂತೋಷ ಕಂಡುಕೊಂಡರೆ ಅವು ಬರುವುದು ಎಂದಿಗೂ ನಿಂತು

1. "ಶಾಂತಸ್ಥಿತಿಯನ್ನು ಕಾಪಾಡಿಕೊಂಡು ಬರಬೇಕು – ಮತ್ತು ಕೆಲಕಾಲ ಅದು ಶೂನ್ಯಭಾವವಿರುವ ಶಾಂತಸ್ಥಿತಿಯಾಗಿದ್ದರೂ ಅದಕ್ಕೆ ಮಹತ್ವಕೊಡಬಾರದು. ಪ್ರಜ್ಞೆ ಒಂದು ಪಾತ್ರೆಯಿದ್ದಂತೆ, ಅದರಲ್ಲಿರುವ ಮಿಶ್ರಣಗೊಂಡ ಇಲ್ಲವೆ ಅನಪೇಕ್ಷಣೀಯ ವಿಷಯಗಳನ್ನು ಬರಿದುಮಾಡಬೇಕು. ನಿಜವಾದ, ಸರಿಯಾದ ಹಾಗೂ ಪರಿಶುದ್ಧವಾದ ಹೊಸ ವಿಷಯಗಳಿಂದ ಅದು ತುಂಬಿಕೊಳ್ಳುವವರೆಗೆ ಕೆಲಕಾಲ ಅದನ್ನು ಬರಿದಾಗಿರಿಸಬೇಕು."

**(23/640)** **– ಶ್ರೀ ಅರವಿಂದರು**



ಹೋಗುವುದಿಲ್ಲ, ಅನಪೇಕ್ಷಣೀಯ ಭಾವನೆಗಳು ಇಲ್ಲವೆ ಸಂವೇದನೆಗಳು ನಿಮ್ಮಲ್ಲಿದ್ದಾಗ ವಿಷಯ ಅದೇ ಆಗಿರುತ್ತದೆ, ನೀವು ಅವುಗಳತ್ತ ಲಕ್ಷ್ಯಗೊಟ್ಟರೆ, ಒಂದು ಬಗೆಯ ಲೋಲುಪತೆಯಿಂದ ಅವುಗಳತ್ತ ನೋಡಿದರೂ ಕೂಡ ಅವು ಎಂದಿಗೂ ನಿಂತು ಹೋಗುವುದಿಲ್ಲ. ಆದರೆ ನೀವು ಅವುಗಳನ್ನು ಸ್ವೀಕರಿಸುವುದನ್ನು ಮತ್ತು ಅಭಿವ್ಯಕ್ತಪಡಿಸುವುದನ್ನು ಸಂಪೂರ್ಣವಾಗಿ ನಿರಾಕರಿಸಿದರೆ, ಕೆಲಕಾಲದ ನಂತರ, ಅವು ನಿಂತು ಹೋಗುತ್ತವೆ. ನೀವು ತಾಳ್ಮೆಯುಳ್ಳವರು ಹಾಗೂ ಪಟ್ಟುಹಿಡಿಯುವವರು ಆಗಬೇಕು.

ಉಚ್ಚತರವಾದ ಏನೋ ಒಂದರ, ನಿಮ್ಮ ಚೈತ್ಯಸತ್ತೆಯ ಪ್ರಭಾವದ ಒಂದಿಷ್ಟರ ಇಲ್ಲವೆ ಮೇಲ್ಗಡೆಗಿರುವ ಪ್ರಕಾಶದ ಸ್ವಲ್ಪ ಭಾಗದ ಸಂಪರ್ಕದಲ್ಲಿ ನಿಮ್ಮನ್ನು ಶ್ರೇಷ್ಠ ಅಭೀಪ್ಸೆಯೊಂದಿಗೆ ಇರಿಸಿಕೊಳ್ಳಬಲ್ಲಿರಾದರೆ ಮತ್ತು ಈ ಸಂಪರ್ಕದ ಸ್ಪರ್ಶ ಕೆಳಸ್ತರದ ಚಲನೆಗಳೊಂದಿಗೆ ಆಗುವಂತೆ ನೀವು ಮಾಡಬಲ್ಲಿರಾದರೆ ಸ್ವಾಭಾವಿಕವಾಗಿ ಆ ಚಲನೆಗಳು ಹೆಚ್ಚಿನ ತೀವ್ರಗತಿಯಿಂದ ನಿಂತು ಹೋಗುತ್ತವೆ. ಆದರೆ ಈ ವಿಷಯಗಳನ್ನು ನಿಮ್ಮೆಡೆಗೆ ಎಳೆದುಕೊಳ್ಳುವ ಮೊದಲೇ ನೀವು ಪಟ್ಟುಹಿಡಿಯುವ ಮತ್ತು ತಾಳ್ಮೆಯಿಂದ ಕೂಡಿದ ನಿರಾಕರಣೆಗಳ ಮೂಲಕ ಈ ಚಲನೆಗಳು ಅಭಿವ್ಯಕ್ತಿಪಡೆಯುವುದನ್ನು ನಿಲ್ಲಿಸಬಲ್ಲಿರಿ. ನಿಮಗೆ ಇಷ್ಟವಿಲ್ಲದ ಯೋಚನೆಗಳು ಬಂದಾಗ ಮತ್ತು ನೀವು ಅವುಗಳನ್ನು ಹೊರಗಟ್ಟಿದಾಗ ಮತ್ತು ಅವುಗಳತ್ತ ಕಿಂಚಿತ್ತೂ ಲಕ್ಷ್ಯಕೊಡದೆ ಇದ್ದಾಗ, ಕೆಲಕಾಲದ ನಂತರ ಅವು ಮರಳಿ ಬರುವುದಿಲ್ಲ. ಆದರೆ ನೀವು ಅದನ್ನು ಪಟ್ಟುಹಿಡಿದು ಹಾಗೂ ಕ್ರಮಬದ್ಧವಾಗಿ ಕೈಕೊಳ್ಳಬೇಕು.

**(6/328–30)** **– ಶ್ರೀಮಾತೆ**

*

## ಹೃದಯದ ಶುದ್ಧೀಕರಣ

ನೀನು ಪ್ರಯತ್ನ ಪಡುತ್ತಿದ್ದ ಹೃದಯದ ಶುದ್ಧೀಕರಣದ ಕಾರ್ಯದಲ್ಲಿ ಅಸಾಧ್ಯವೆನಿಸುವಂತಹದೇನೂ ಇಲ್ಲ. ಮತ್ತು ಹೃದಯ ಪರಿಶುದ್ಧಗೊಂಡ ನಂತರ ಅಸಾಧ್ಯವೆನಿಸಿದ ಇತರ ವಿಷಯಗಳು ಸುಲಭವಾಗುತ್ತವೆ. – ಈಗ ನಿನಗೆ ಕಾರ್ಯ ಸಾಧ್ಯವಲ್ಲದ ವಿಷಯ ಎನಿಸುತ್ತಿರುವ ಆಂತರಿಕ ಶರಣಾಗತಿಯೂ ಕೂಡ ಸುಲಭವಾದ ವಿಷಯವಾಗುತ್ತದೆ.

ವಿನಮ್ರತೆ ಮತ್ತು ಸಮರ್ಪಣ ಇವು ಹೃದಯದಲ್ಲಿ ದೃಢವಾಗಿ ಸ್ಥಾಪಿತಗೊಂಡರೆ ವಿಶ್ವಾಸದಂತಹ ಇತರ ವಿಷಯಗಳು ನಂತರ ಸ್ವಾಭಾವಿಕವಾಗಿ ಬರುತ್ತವೆ. ಈ ವಿಷಯಗಳು ನೀಡುವ ವರಪ್ರಸಾದವಾದ ಚೈತ್ಯದ ಬೆಳಕು ಮತ್ತು ಸಂತೋಷ ಸ್ಥಾಪಿತಗೊಂಡ ನಂತರ ಆ ಸ್ಥಿತಿಯ ಮೇಲೆ ಇತರ ಶಕ್ತಿಗಳು ಮೋಡ ಗವಿಯುವುದು ಸುಲಭವಾಗಿರುವುದಿಲ್ಲ ಮತ್ತು ಅದನ್ನು ನಾಶಮಾಡಲು ಅವುಗಳಿಗೆ ಸಾಧ್ಯವಾಗುವುದಿಲ್ಲ. ಅದು ಸಾಮಾನ್ಯ ಅನುಭವ.

ಪರಿಶುದ್ಧತೆ ಹಾಗೂ ಮುಡಿಪಾಗಿರಿಸಿಕೊಳ್ಳುವಿಕೆ ಇವು ಸಾಧನೆಗೆ ಎರಡು ದೊಡ್ಡ ಆವಶ್ಯಕತೆಗಳು. ಶುದ್ಧೀಕರಣಗೊಳ್ಳುವುದಕ್ಕಿಂತ ಮೊದಲು ಅನುಭವ ಪಡೆದವರು ಹೆಚ್ಚಿನ ಅಪಾಯ ಎದುರಿಸುತ್ತಾರೆ. ಹೃದಯವನ್ನು ಮೊದಲು ಪರಿಶುದ್ಧಗೊಳಿಸಿಕೊಳ್ಳುವುದು ಬಹಳ ಒಳ್ಳೆಯದು, ಏಕೆಂದರೆ ನಂತರ ಮಾರ್ಗ ಸುರಕ್ಷಿತವಾಗುತ್ತದೆ. ಆ ಕಾರಣದಿಂದಾಗಿಯೆ ಚೈತ್ಯದ ಬದಲಾವಣೆ ಸ್ವಭಾವದಲ್ಲಿ ಬರುವುದಕ್ಕೆ ನಾನು ಸಮರ್ಥನೆ ನೀಡುತ್ತೇನೆ – ಏಕೆಂದರೆ ಅದರರ್ಥ ಹೃದಯದ ಶುದ್ಧೀಕರಣವಾಗಿರುತ್ತದೆ: ಅದು ಭಗವಂತನತ್ತ ಇಡಿಯಾಗಿ ಹೊರಳುವು–ದಾಗಿರುತ್ತದೆ, ಆಂತರಿಕ ಸತ್ತೆಯಾದ ಆತ್ಮಕ್ಕೆ ಮನಸ್ಸು ಹಾಗೂ ಪ್ರಾಣಿಕ ಇವು ಅಧೀನವಾಗುವುದಾಗಿರುತ್ತದೆ. ಆತ್ಮ ಮುಂಭಾಗದಲ್ಲಿದ್ದಾಗ ಯಾವುದನ್ನು ಕೈಕೊಳ್ಳಬೇಕು, ಯಾವುದನ್ನು ಬಿಟ್ಟುಬಿಡಬೇಕು, ಯೋಚನೆಯಲ್ಲಿ, ಭಾವನೆಯಲ್ಲಿ, ಕ್ರಿಯೆಯಲ್ಲಿ ತಪ್ಪಾದದ್ದು ಯಾವುದು, ನಿಜವಾದದ್ದು ಯಾವುದು ಎಂಬುದರ ಬಗ್ಗೆ ಮನುಷ್ಯ ಸರಿಯಾದ ಮಾರ್ಗದರ್ಶನ ಪಡೆಯುತ್ತಾನೆ. ಆದರೆ ಪ್ರಜ್ಞೆ ಹೆಚ್ಚು ಹೆಚ್ಚಾಗಿ ಪರಿಶುದ್ಧಗೊಳ್ಳುವ ಪ್ರಮಾಣದಲ್ಲಿ ಈ ಆಂತರಿಕ ಇಂಗಿತ ಸೂಚನೆ ಹೊರಹೊಮ್ಮುತ್ತದೆ.

ನಾನು ಸೂಕ್ಷ್ಮ ವಿಧಾನಗಳೆಂದು ಹೇಳುವುದರ ಅರ್ಥ ಯಾಂತ್ರಿಕವಲ್ಲದ ವಿಧಾನಗಳು ಎಂದಿದೆ, ಉದಾಹರಣೆಗೆ ಹೃದಯದಲ್ಲಿ ಏಕಾಗ್ರತೆ, ಶರಣಾಗತಿ, ಸ್ವ–ಶುದ್ಧೀಕರಣ, ಆಂತರಿಕ ಸಾಧನದಿಂದ ಪ್ರಜ್ಞೆಯ ಬದಲಾವಣೆ. ಇದರರ್ಥ ಯಾವ ಬಾಹ್ಯ ಬದಲಾವಣೆ ಇಲ್ಲ ಎಂದಲ್ಲ. ಬಾಹ್ಯ ಬದಲಾವಣೆ ಅವಶ್ಯವಿದೆ, ಆದರೆ ಅದು ಆಂತರಿಕ ಬದಲಾವಣೆಯ ಭಾಗವೆಂದಾಗಿದೆ. ಅಂತರಂಗದಲ್ಲಿ ಅಶುದ್ಧತೆ ಇಲ್ಲವೆ ಕಪಟಾಚರಣೆ ಇದ್ದರೆ ಬಾಹ್ಯ ಬದಲಾವಣೆ ಪರಿಣಾಮಕಾರಿ–ಯಾಗುವುದಿಲ್ಲ, ಆದರೆ ನಿಷ್ಕಾಪಟ್ಯದ ಆಂತರಿಕ ಕಾರ್ಯಗತಿ ಇದ್ದರೆ ಬಾಹ್ಯ ಬದಲಾವಣೆ ಅದಕ್ಕೆ ಸಹಾಯ ಮಾಡುತ್ತದೆ ಮತ್ತು ಆ ವಿಧಾನ ತ್ವರಿತಗೊಳ್ಳುವಂತೆ ಮಾಡುತ್ತದೆ. ಪರಿಪೂರ್ಣ ನಿಷ್ಕಾಪಟ್ಯ ಹೃದಯದ ಶುದ್ಧೀಕರಣಕ್ಕೆ ಅತ್ಯಂತ ಮಹತ್ವದ ವಿಷಯವಾಗಿದೆ. ಮನುಷ್ಯ ತನ್ನೊಡನೆ ನಟನೆ ಮಾಡಬಾರದು,



ಭಗವಂತನಿಂದ, ತನ್ನಿಂದ ಹಾಗೂ ಗುರುವಿನಿಂದ ಏನನ್ನೂ ಮುಚ್ಚಿಡಬಾರದು, ತನ್ನ ಚಲನೆಗಳತ್ತ ನೇರ ನೋಟವನ್ನಿರಿಸಿರಬೇಕು, ಅವುಗಳನ್ನು ನೇರವಾಗಿರುವಂತೆ ಮಾಡುವುದಕ್ಕೆ ನೇರ ಸಂಕಲ್ಪವಿರಬೇಕು. ಅದಕ್ಕೆ ಹೆಚ್ಚಿನ ಕಾಲ ಅವಶ್ಯವೆನಿಸಿದರೆ, ಅದೇನೂ ಅಷ್ಟು ಮಹತ್ವದ ವಿಷಯವಲ್ಲ, ಭಗವಂತನನ್ನು ಅರಸುವುದನ್ನು ಕುರಿತು ಮನುಷ್ಯ ಅದನ್ನು ತನ್ನ ಇಡೀ ಜೀವನದ ಕಾರ್ಯವನ್ನಾಗಿ ಮಾಡಿಕೊಳ್ಳಲು ಸಿದ್ಧನಾಗಿರಬೇಕು. ಹೃದಯವನ್ನು ಶುದ್ಧೀಕರಣಗೊಳಿಸಿಕೊಳ್ಳುವುದರ ಅರ್ಥ ಒಟ್ಟಿನಲ್ಲಿ ಬಹಳ ಅಸಾಧಾರಣ ಸಿದ್ಧಿಯನ್ನು ಪಡೆಯುವುದಾಗಿರುತ್ತದೆ, ಅದಕ್ಕಾಗಿ ಎದೆಗುಂದುವುದಾಗಲಿ, ಹತಾಶನಾಗುವುದಾಗಲಿ ಉಪಯೋಗವಿಲ್ಲದ್ದು, ಏಕೆಂದರೆ ಮನುಷ್ಯ ಇನ್ನೂ ತನ್ನಲ್ಲಿಯೇ ಬದಲು ಮಾಡಬೇಕಾದ ವಿಷಯಗಳನ್ನು ಕಂಡುಕೊಳ್ಳುತ್ತಾನೆ. ಮನುಷ್ಯ ನಿಜವಾದ ಸಂಕಲ್ಪ ಹಾಗೂ ಮನೋಭಾವ ಕಾಪಾಡಿಕೊಂಡು ಬಂದರೆ ಆಗ ಅಂತರಂಗದೊಳಗಿಂದ ಅಂತರ್ಬೋಧೆಗಳು ಹಾಗೂ ಇಂಗಿತ ಸೂಚನೆಗಳು ಬೆಳೆಯಲು, ಸ್ಪಷ್ಟವಾಗಲು, ನಿಖರವಾಗಲು, ನಿಸ್ಸಂದಿಗ್ಧವಾಗಲು ಪ್ರಾರಂಭಿಸುತ್ತವೆ ಮತ್ತು ಅವುಗಳನ್ನು ಅನುಸರಿಸುವ ಬಲವೂ ಕೂಡ ಬೆಳೆಯುವುದು ಮತ್ತು ಆಗ ನೀವು ನಿಮ್ಮೊಂದಿಗೆ ತೃಪ್ತಿ ಕಂಡು–ಕೊಳ್ಳುವುದಕ್ಕಿಂತ ಮೊದಲೇ ಭಗವಂತನಿಗೆ ನಿಮ್ಮ ಬಗ್ಗೆ ತೃಪ್ತಿಯುಂಟಾಗಿರುತ್ತದೆ ಮತ್ತು ಅವನ ಹಾಗೂ ನಿಮ್ಮ ನಡುವಿರುವ ಪರದೆಯನ್ನು ಹಿಂದೆ ತೆಗೆದುಕೊಳ್ಳಲು ಪ್ರಾರಂಭಿಸುತ್ತಾನೆ, ಮಾನವತೆ ಅಭೀಪ್ಸೆಪಡಬಲ್ಲುದಾದ ಅತ್ಯಂತ ಶ್ರೇಷ್ಠ ವಿಷಯವನ್ನು ಅತ್ಯಾತುರದ ಹಾಗೂ ಅಪಾಯಕಾರಕ ರೀತಿಯಲ್ಲಿ ಗ್ರಹಿಸುವುದರ ವಿರುದ್ಧ ತನ್ನನ್ನು ಹಾಗೂ ಅನ್ವೇಷಕರನ್ನು ರಕ್ಷಿಸುವುದಕ್ಕಾಗಿ ಅವನು ಆ ಪರದೆಯನ್ನಿರಿಸುತ್ತಾನೆ.

**(23/902–04)** **– ಶ್ರೀ ಅರವಿಂದರು**

*

ಶ್ರೀಮಾತೆಯವರನ್ನು ಕೇವಲ ಕನಸಿನಲ್ಲಿ ನೋಡಬಾರದು, ಆದರೆ ಎಲ್ಲ ಕಾಲದಲ್ಲಿ ಅವರು ನಿನ್ನೊಳಗಿರುವುದನ್ನು ನೋಡುವುದನ್ನು ಮತ್ತು ಭಾವನೆಗೆ ತಂದುಕೊಳ್ಳುವುದನ್ನು ಕಲಿತುಕೊಳ್ಳಬೇಕು. ಆಗ ನಿನ್ನನ್ನು ನಿಯಂತ್ರಿಸುವುದು ಮತ್ತು ಬದಲು ಮಾಡುವುದು ಸುಲಭವಾಗುವುದೆಂಬುದನ್ನು ಕಂಡುಕೊಳ್ಳುವಿ–ಏಕೆಂದರೆ ಅವರು ಅಲ್ಲಿದ್ದುಕೊಂಡು ಅದನ್ನು ನಿನಗಾಗಿ ಮಾಡಬಲ್ಲರು.

**(32/453)** **– ಶ್ರೀ ಅರವಿಂದರು**

*

## ಶುದ್ಧೀಕರಣ ಹಾಗೂ ಏಕಾಗ್ರತೆ – ಇವೆರಡೂ ಅವಶ್ಯವಾಗಿವೆ

ಶುದ್ಧೀಕರಣದ ಉದ್ದೇಶ ಇಡೀ ಮಾನಸಿಕ ಸತ್ತೆಯನ್ನು ಒಂದು ನಿರ್ಮಲ ಕನ್ನಡಿಯಾಗುವಂತೆ ಮಾಡುವುದಾಗಿದೆ, ಅದರಲ್ಲಿ ದೈವೀ ನೈಜತೆ ಪ್ರತಿಫಲನಗೊಳ್ಳಬಲ್ಲದು, ಆ ಸತ್ತೆ ದೈವೀ ಸಾನ್ನಿಧ್ಯಕ್ಕೆ ಒಂದು ನಿರ್ಮಲ ಪಾತ್ರೆ ಹಾಗೂ ಅಡೆತಡೆಯೊಡ್ಡದ ವಾಹಿನಿಯಾಗುವುದು, ಅದರ ಮೂಲಕ ದೈವೀ ಪ್ರಭಾವ ಸುರಿಯಬಲ್ಲದು, ಅದು ಸೂಕ್ಷ್ಮೀಕರಿಸಿದ ದ್ರವ್ಯವಾಗಿದ್ದು ಅದನ್ನು ದೈವೀ ಸ್ವಭಾವ ತನ್ನ ವಶಕ್ಕೆ ತೆಗೆದುಕೊಳ್ಳಬಲ್ಲದು ಮತ್ತು ಅದಕ್ಕೆ ಹೊಸ ರೂಪಕೊಟ್ಟು ದೈವೀ ಹೊರಹರಿತಕ್ಕೆ ಉಪಯೋಗಿಸಬಲ್ಲದು. ಏಕೆಂದರೆ ಸದ್ಯ ಮಾನಸಿಕ ಸತ್ತೆ ಜಗತ್ತನ್ನು ಕುರಿತು ಮಾನಸಿಕ ಹಾಗೂ ಭೌತಿಕ ದೃಷ್ಟಿಕೋನಗಳು ಸೃಷ್ಟಿಸಿದ ಗೊಂದಲಗಳನ್ನು ಮಾತ್ರ ಪ್ರತಿಫಲಿಸಬಲ್ಲದು, ಮತ್ತು ಅದು ಅಜ್ಞಾನದಿಂದ ಕೂಡಿದ, ಕೆಳಸ್ತರದ ಸ್ವಭಾವದ ಅವ್ಯವಸ್ಥೆಗಳಿಗೆ ಮಾತ್ರ ವಾಹಿನಿಯಾಗಿದೆ ಹಾಗೂ ಅಡೆತಡೆಗಳಿಂದ, ಅಶುದ್ಧತೆಗಳಿಂದ ತುಂಬಿಕೊಂಡಿದೆ, ಅದರಿಂದಾಗಿ ಉಚ್ಚತರವಾದದ್ದು ಕಾರ್ಯ ಕೈಕೊಳ್ಳುವುದಕ್ಕೆ ತಡೆಯುಂಟಾಗಿದೆ, ಹಾಗಾಗಿ ನಮ್ಮ ಸತ್ತೆಯ ಇಡೀ ಆಕಾರ ವಿರೂಪಕ್ಕೊಳಗಾಗಿದೆ, ಅಪರಿಪೂರ್ಣವಾಗಿದೆ, ಉಚ್ಚತರ ಪ್ರಭಾವಗಳಿಗೆ ಅವಿಧೇಯವಾಗಿದೆ, ಮತ್ತು ಕಾರ್ಯದಲ್ಲಿ ಅಜ್ಞಾನದ ಹಾಗೂ ಕೆಳಮಟ್ಟದ ಉಪಯುಕ್ತತೆಗಳತ್ತ ಹೊರಳಿದೆ, ಜಗತ್ತನ್ನು ಮಿಥ್ಯಾರೂಪದಲ್ಲಿ ಪ್ರತಿಫಲಿಸುತ್ತದೆ, ಭಗವಂತನನ್ನು ಪ್ರತಿಫಲಿಸಲು ಅಸಮರ್ಥವಾಗಿದೆ.

ಇಡೀ ಸ್ವಭಾವ ಹಾಗೂ ಮನಸ್ಸು ಇವುಗಳಿಗೆ ಸ್ವಾಭಾವಿಕವಾದ ಅಲೆದಾಡುವ, ವಿಷಯ ಬಿಟ್ಟುಕೊಡುವ ಪ್ರವೃತ್ತಿಯಿಂದ, ಯೋಚನೆಗಳ ಚೆದುರಿದ ಚಲನೆಗಳನ್ನು ಅನುಸರಿಸುವುದರಿಂದ, ಆಸೆಯ ಅನೇಕ ಶಾಖೆಗಳ ಹಿಂದೆ ಓಡುವುದರಿಂದ, ಇಂದ್ರಿಯಗಳ ಜಾಡನ್ನು ಹಿಡಿಯುವುದರಿಂದ ಮತ್ತು ಗೋಚರ ವಿಷಯಗಳಿಗೆ ಬಾಹ್ಯ ಮನಸ್ಸಿನ ಪ್ರತಿಸ್ಪಂದನದಿಂದ ಮನಸ್ಸನ್ನು ಮತ್ತು ಸಂಕಲ್ಪವನ್ನು ಹೊರಳಿಸಲು ಏಕಾಗ್ರತೆ ಮೊದಲು ಅವಶ್ಯವಾದ ವಿಷಯವಾಗಿದೆ. ನಾವು ಸಂಕಲ್ಪವನ್ನು ಮತ್ತು ಯೋಚನೆಯನ್ನು ಎಲ್ಲದರ ಹಿಂದಿರುವ ಸನಾತನ ಹಾಗೂ ನೈಜವಾದುದರ ಮೇಲೆ ಸ್ಥಿರಗೊಳಿಸಬೇಕಾಗಿರುತ್ತದೆ, ಅದು ಭವ್ಯ ಪ್ರಯತ್ನವನ್ನು, ಏಕಮುಖವಾದ ಏಕಾಗ್ರತೆಯನ್ನು ಒತ್ತಾಯದಿಂದ ಬೇಡುತ್ತದೆ. ಎರಡನೆಯದಾಗಿ ನಮ್ಮ ಹಾಗೂ ಸತ್ಯದ ನಡುವೆ ನಮ್ಮ ಸರ್ವ ಸಾಮಾನ್ಯ ಮನೋಭಾವದಿಂದ ನಿರ್ಮಿಸಲಾದ ಪರದೆಯನ್ನು ಹರಿದು ಹಾಕುವುದಕ್ಕಾಗಿ ಆ ಏಕಾಗ್ರತೆ ಆವಶ್ಯವಾಗಿದೆ, ಏಕೆಂದರೆ



ಸಾಮಾನ್ಯ ರೀತಿಯಲ್ಲಿ ಲಕ್ಷ್ಯಕೊಡುವುದರ ಮೂಲಕ ಹಾಗೂ ಸ್ವೀಕರಿಸುವುದರ ಮೂಲಕ ಬಾಹ್ಯ ಜ್ಞಾನವನ್ನು ಪ್ರಾಸಂಗಿಕವಾಗಿ ಪಡೆಯಬಹುದು. ಆದರೆ ತನ್ನ ಗುರಿಯ ಮೇಲೆ ಪರಿಪೂರ್ಣ ಏಕಾಗ್ರತೆ ವಹಿಸಿದಾಗ ಮತ್ತು ಸಿದ್ಧಿಸಿಕೊಳ್ಳಲು ಪರಿಪೂರ್ಣ ಸಂಕಲ್ಪವಿದ್ದಾಗ ಮಾತ್ರ ಅಡಗಿದ, ಆಂತರಿಕ ಉಚ್ಚತರ ಸತ್ಯವನ್ನು ಹಿಡಿದುಕೊಳ್ಳಬಹುದು, ಒಮ್ಮೆ ಅದನ್ನು ಸಿದ್ಧಿಸಿಕೊಂಡ ನಂತರ ರೂಢಿಗತವಾಗಿ ಹಾಗೂ ಸುರಕ್ಷಿತವಾಗಿ ಹಿಡಿದುಕೊಳ್ಳುವುದಕ್ಕೆ ಹಾಗೂ ಅದರೊಡನೆ ಏಕತೆ ಪಡೆಯುವುದಕ್ಕೆ ಕೂಡ ಆ ಏಕಾಗ್ರತೆ ಬೇಕಾಗುತ್ತದೆ. ಏಕೆಂದರೆ ಸಂಪೂರ್ಣ ಜ್ಞಾನಕ್ಕಾಗಿ ಹಾಗೂ ವಶದಲ್ಲಿರಿಸಿಕೊಳ್ಳುವುದಕ್ಕಾಗಿ ತಾದಾತ್ಮ್ಯ ಷರತ್ತಾಗಿರುತ್ತದೆ; ಅದು ರೂಢಿಗತವಾದ, ಪರಿಶುದ್ಧಗೊಂಡ ನೈಜತೆಯ ಪ್ರತಿಫಲನದ ಮತ್ತು ಅದರ ಮೇಲೆ ಇಡಿಯಾಗಿ ಏಕಾಗ್ರತೆ ವಹಿಸಿದುದರ ಗಾಢ ಪರಿಣಾಮ, ಭಗವಂತನ ಸನಾತನ ನೈಜತೆ ಹಾಗೂ ನಮ್ಮ ನಡುವೆ ನಮ್ಮ ಪಶ್ಚಾತ್ತಾಪವಿಲ್ಲದ ಹಾಗೂ ಅಜ್ಞಾನದ ಮನೋವೃತ್ತಿಯ ಸಾಮಾನ್ಯ ಸ್ಥಿತಿಯಿಂದ ಉಂಟಾದ ಪ್ರತ್ಯೇಕತೆಯನ್ನು ಇಡಿಯಾಗಿ ತೊಡೆದು ಹಾಕುವುದಕ್ಕೆ ಆ ಏಕಾಗ್ರತೆ ಅವಶ್ಯವಿದೆ.

**(21/494)** **– ಶ್ರೀ ಅರವಿಂದರು**

*

### (ಶಿಷ್ಯಂದಿರುಗಳಿಗೆ ಬರೆದ ಪತ್ರಗಳಿಂದ ಆಯ್ದುಕೊಂಡದ್ದು)

ಪ್ರತಿಯೊಂದರ ಎದುರು ರಾಜಯೋಗಿಗಳು ಶುದ್ಧೀಕರಣವನ್ನು ಇರಿಸಿರುವುದು ಸರಿಯಾಗಿದೆ – ಹಾಗೆಯೇ ನಾನೂ ಕೂಡ 'ಯೋಗ ಸಮನ್ವಯ' ಗ್ರಂಥದಲ್ಲಿ ಅದನ್ನು ಏಕಾಗ್ರತೆಯೊಂದಿಗೆ ಮುಂದಿರಿಸಿದ್ದು ಸರಿಯಾಗಿದೆ. ಇದನ್ನು ಕೈಕೊಳ್ಳದಿದ್ದರೆ ಅನುಭವಗಳು ಹಾಗೂ ಸಿದ್ಧಿಗಳು ಮನುಷ್ಯನನ್ನು ಗುರಿಯತ್ತ ಕರೆತರಲಾರವು ಎಂಬುದನ್ನು ಕಂಡುಕೊಳ್ಳಲು ನಿಮ್ಮ ಸುತ್ತಲೂ ನೋಡಬೇಕು – ಯಾವುದೇ ಕ್ಷಣದಲ್ಲಿ ಅವು ಪತನಗೊಳ್ಳಬಲ್ಲವು, ಏಕೆಂದರೆ ಪ್ರಾಣಿಕ ಇನ್ನೂ ಅಶುದ್ಧ ಹಾಗೂ ಅಹಂಕಾರಯುಕ್ತವಾಗಿರುತ್ತದೆ.

*

ಸಾಧನೆಯಲ್ಲಿ ಮಾನಸಿಕ ಇಲ್ಲವೆ ನೈತಿಕ ನಿಯಂತ್ರಣದ ಸ್ಥಾನದಲ್ಲಿ ಆಧ್ಯಾತ್ಮಿಕ ಪ್ರಭುತ್ವ ಬರಬೇಕು. – ಏಕೆಂದರೆ ಮಾನಸಿಕ ನಿಯಂತ್ರಣ ಭಾಗಶಃ ನಿಯಂತ್ರಣವಾಗಿರುತ್ತದೆ ಮತ್ತು ಅದು ನಿಯಂತ್ರಿಸುತ್ತದೆಯಾದರೂ ವಿಮೋಚನೆ ತಂದುಕೊಡುವುದಿಲ್ಲ. ಚೈತ್ಯಾತ್ಮಿಕ ಮತ್ತು ಆಧ್ಯಾತ್ಮಿಕವಾದದ್ದು ಮಾತ್ರ ಅದನ್ನು

ಮಾಡಬಹುದು. ಇದೇ ಸಾಮಾನ್ಯ ಮತ್ತು ಆಧ್ಯಾತ್ಮಿಕ ಜೀವನಗಳ ನಡುವೆ ಇರುವ ಮುಖ್ಯ ವ್ಯತ್ಯಾಸ.

*

ಮನುಷ್ಯನ ಸ್ವಭಾವದಲ್ಲಿ ಚೈತ್ಯಾತ್ಮಿಕ ಅಂಶ ಬೆಳೆಯುತ್ತ ಹೋದ ಹಾಗೆ ಅವನು ಮೇಲ್ಗಡೆಗಿರುವ ತನ್ನ ಕೇಂದ್ರ ಸತ್ತೆಯೊಡನೆ ಪ್ರಜ್ಞಾಪೂರ್ವಕ ಸಂಪರ್ಕದಲ್ಲಿ ಬರಲು ಪ್ರಾರಂಭಿಸುತ್ತಾನೆ. ಅದು ಸಂಭವಿಸಿದಾಗ ಮತ್ತು ಕೇಂದ್ರ ಸತ್ತೆ ಪ್ರಜ್ಞಾಪೂರ್ವಕವಾದ ಸಂಕಲ್ಪವನ್ನು, ಸ್ವಭಾವದ ಚಲನೆಗಳನ್ನು ನಿಯಂತ್ರಿಸಲು ಮತ್ತು ಸಂಘಟಿಸಲು ಉಪಯೋಗಿಸಿದಾಗ ಮನುಷ್ಯನಲ್ಲಿ ನಿಜವಾದ ಆಧ್ಯಾತ್ಮಿಕ ಸ್ವ–ಪ್ರಭುತ್ವವಿರುತ್ತದೆ, ಇದು ಕೇವಲ ಮಾನಸಿಕ ಇಲ್ಲವೆ ನೈತಿಕ ಭಾಗಶಃ ಸ್ವ–ಪ್ರಭುತ್ವಕ್ಕೆ ವಿರುದ್ಧವಾಗಿರುತ್ತದೆ.

**(23/574–75, 24/1928, 22/302)** **– ಶ್ರೀ ಅರವಿಂದರು**

*

## ಸ್ವಭಾವವನ್ನು ಪರಿಶುದ್ಧಗೊಳಿಸಲು ಮತ್ತು ತಯಾರು ಮಾಡಲು ಸರಳತರ ಸಾಧನ

ಮನಸ್ಸನ್ನು ಅಚಂಚಲಗೊಳಿಸಲು ಮತ್ತು ಆಧ್ಯಾತ್ಮಿಕ ಅನುಭವ ಪಡೆಯಲು ಸ್ವಭಾವವನ್ನು ಮೊದಲು ಪರಿಶುದ್ಧಗೊಳಿಸುವ ಹಾಗೂ ತಯಾರು ಮಾಡುವ ಆವಶ್ಯಕತೆ ಇದೆ. ಕೆಲವೊಮ್ಮೆ ಇದಕ್ಕೆ ಹಲವಾರು ವರ್ಷಗಳು ಬೇಕಾಗುತ್ತವೆ. ಸರಿಯಾದ ಮನೋಭಾವದೊಂದಿಗೆ ಕೈಕೊಂಡ ಕಾರ್ಯ ಅದಕ್ಕೆ ಅತ್ಯಂತ ಸುಲಭ ಸಾಧನ, ಎಂದರೆ ಆಸೆ ಇಲ್ಲವೆ ಅಹಂಕಾರವನ್ನಿರಿಸಿಕೊಳ್ಳದೆ, ಆಸೆಯ ಒತ್ತಾಯದ ಬೇಡಿಕೆಯ ಇಲ್ಲವೆ ಅಹಂಕಾರದ ಚಲನೆಗಳು ಬಂದಾಗ ಅವುಗಳನ್ನು ತಿರಸ್ಕರಿಸಿ ಕೈಕೊಂಡ ಕಾರ್ಯ, ಅದು ಶ್ರೀಮಾತೆಯವರಿಗೆ ಅರ್ಪಣ ರೂಪದಲ್ಲಿದ್ದು, ಅವರು ತಮ್ಮ ಶಕ್ತಿಯನ್ನು ಪ್ರಕಟಿಸಿ ಆ ಕಾರ್ಯವನ್ನು ಕೈಗೆತ್ತಿಕೊಳ್ಳಲೆಂದು ಅವರನ್ನು ನೆನಪಿಸಿಕೊಳ್ಳುವುದರೊಂದಿಗೆ ಪ್ರಾರ್ಥನೆ ಮಾಡಬೇಕಾದದ್ದು, ಅದರಿಂದಾಗಿ ಕಾರ್ಯದಲ್ಲೂ ಕೂಡ, ಕೇವಲ ಆಂತರಿಕ ನಿಶ್ಚಲನೀರವತೆಯಲ್ಲಷ್ಟೇ ಅಲ್ಲ, ನೀವು ಅವರ ಸಾನ್ನಿಧ್ಯ ಹಾಗೂ ಕಾರ್ಯಗತಿಯನ್ನು ಭಾವನೆಗೆ ತಂದುಕೊಳ್ಳಬಲ್ಲಿರಿ.

*

ಎರಡು ಸಾಧ್ಯತೆಗಳಿವೆ, ಒಂದು ವೈಯಕ್ತಿಕ ಪ್ರಯತ್ನದೊಂದಿಗೆ ಶುದ್ಧೀಕರಣ ಮಾಡಿಕೊಳ್ಳುವುದು, ಅದಕ್ಕೆ ಬಹಳ ಕಾಲ ಬೇಕಾಗುತ್ತದೆ, ಇನ್ನೊಂದು



ದೈವೀಕೃಪೆಯು ನೇರವಾದ ಮಧ್ಯಸ್ಥಿಕೆಯಿಂದ ಕೈಕೊಂಡದ್ದು, ಅದು ತನ್ನ ಕಾರ್ಯದಲ್ಲಿ ಸಾಮಾನ್ಯವಾಗಿ ತೀವ್ರಗತಿಯದಾಗಿರುತ್ತದೆ. ಎರಡನೆಯ ರೀತಿಗಾಗಿ ಸಂಪೂರ್ಣ ಶರಣಾಗತಿ ಮತ್ತು ಸ್ವ–ಅರ್ಪಣ ಇರಲೇಬೇಕು, ಮತ್ತೆ ಅದಕ್ಕಾಗಿ, ಸಾಮಾನ್ಯವಾಗಿ, ಅವಶ್ಯವಾದದ್ದೆಂದರೆ, ಬಹಳ ಅಚಂಚಲವಾಗಿ ಉಳಿದುಕೊಳ್ಳುವ ಮತ್ತೆ ತನಗೆ ಆಧಾರವೆಂದು ದೈವೀಶಕ್ತಿ ಕಾರ್ಯಕೈಕೊಳ್ಳುವುದಕ್ಕೆ ಅನುವು ಮಾಡಿಕೊಡುವ ಹಾಗೂ ಪ್ರತಿಯೊಂದು ಹೆಜ್ಜೆಯಲ್ಲಿ ಆ ಶಕ್ತಿಗೆ ಅಂಟಿಕೊಂಡಿರುವ ಮನಸ್ಸನ್ನು ಹೊಂದಿರುವುದು, ಆದರೆ ಅದಿಲ್ಲದೆ ಇದ್ದಾಗ ನಿಶ್ಚಲವಾಗಿ ಮತ್ತು ಅಚಂಚಲವಾಗಿ ಉಳಿದುಕೊಳ್ಳುವುದು.

*

ಮುಂದೆ ಸಾಗಿ ಹೋಗುವುದಕ್ಕಾಗಿ ಒಂದಿಷ್ಟು ಶುದ್ಧೀಕರಣಗೊಂಡಿರುವುದು ಅತ್ಯಗತ್ಯ ಎಂಬುದು ತೀರಾ ಸತ್ಯವಾದ ವಿಷಯ. ಶುದ್ಧೀಕರಣ ಹೆಚ್ಚು ಸಂಪೂರ್ಣವಾದಷ್ಟು ಹೆಚ್ಚು ಒಳ್ಳೆಯದು, ಏಕೆಂದರೆ ಸಿದ್ಧಿಗಳು ಬರಲು ಪ್ರಾರಂಭವಾದಾಗ ಅವು ತೊಂದರೆಗಳಿಲ್ಲದೆ ಇಲ್ಲವೆ ಹಿಂದೆ ಬಿದ್ದು ಬಿಡುವಿಕೆಗಳಿಲ್ಲದೆ ಮುಂದುವರಿದು–ಕೊಂಡು ಹೋಗುವವು ಮತ್ತು ಪತನದ ಇಲ್ಲವೆ ವಿಫಲತೆಯ ಸಾಧ್ಯತೆ ಇರುವುದಿಲ್ಲ. ಬಹಳಷ್ಟು ಜನರಿಗೆ ಶುದ್ಧೀಕರಣ ಮೊದಲ ಆವಶ್ಯಕತೆ ಎಂಬುದು ಕೂಡ ಸತ್ಯವಾದದ್ದು – ಮನುಷ್ಯ ನಿರಂತರವಾಗಿ ಆಂತರಿಕ ಅನುಭವ ಪಡೆಯಲು ಪ್ರಾರಂಭಿಸುವುದಕ್ಕಿಂತ ಮೊದಲು ಕೆಲವೊಂದು ವಿಷಯಗಳನ್ನು ಮಾರ್ಗ–ದಿಂದಾಚೆಗೆ ಇರಿಸಬೇಕಾಗುತ್ತದೆ. ಆದರೆ ಪ್ರಜ್ಞೆಯ ಒಂದು ಬಗೆಯ ತಯಾರಿ ಮುಖ್ಯವಾದ ಆವಶ್ಯಕತೆಯಾಗಿರುತ್ತದೆ, ಅದರಿಂದಾಗಿ ಆ ಪ್ರಜ್ಞೆ ಉಚ್ಚತರ ದೈವೀ ಶಕ್ತಿಗೆ ಹೆಚ್ಚು ಮುಕ್ತವಾಗಿ ಪ್ರತಿಸ್ಪಂದಿಸಲು ಶಕ್ತವಾಗುತ್ತದೆ. ಈ ತಯಾರಿಯಲ್ಲಿ ಬಹಳಷ್ಟು ವಿಷಯಗಳು ಉಪಯುಕ್ತವಾಗಿರುತ್ತವೆ. ನೀನು ಕೈಕೊಳ್ಳುತ್ತಿರುವ ಕಾವ್ಯ ರಚನೆ, ಸಂಗೀತಾಭ್ಯಾಸ ಇವು ಸಹಾಯಕವಾಗಬಲ್ಲವು, ಏಕೆಂದರೆ ಅದೆಲ್ಲ ಒಂದು ಬಗೆಯ ಶ್ರವಣ ಮತ್ತು ಮನನ ರೀತಿಯ ಕಾರ್ಯ ಕೈಕೊಳ್ಳುವುದಾಗಿದೆ, ಹಾಗೆಯೇ ಕೆರಳಿಸಿದ ಭಾವನೆ ಗಾಢವಾಗಿದ್ದರೆ ಅದು ಒಂದು ಬಗೆಯ ಸ್ವಾಭಾವಿಕ ನಿಧಿಧ್ಯಾಸವಾಗಿರುತ್ತದೆ. ಚೈತ್ಯಾತ್ಮಿಕ ತಯಾರಿ, ಒರಟು ರೀತಿಯ ಮಾನಸಿಕ ಹಾಗೂ ಪ್ರಾಣಿಕ ಅಹಂಕಾರದ ರೂಪಗಳನ್ನು ತೆಗೆದು ಹಾಕುವುದು, ಗುರುವಿಗೆ ಮನಸ್ಸನ್ನು ಹೃದಯವನ್ನು ತೆರೆದಿಡುವುದು ಮತ್ತು ಇನ್ನೂ ಅನೇಕ ಸಂಗತಿಗಳು ಶ್ರೇಷ್ಠ ರೀತಿಯಲ್ಲಿ ಸಹಾಯಕವಾಗಬಲ್ಲವು. ಪರಿಪೂರ್ಣತೆ ಇಲ್ಲವೆ ದ್ವಂದ್ವಗಳಿಂದ ಇಲ್ಲವೆ ಅಹಂಕಾರದಿಂದ ಸಂಪೂರ್ಣ ಸ್ವಾತಂತ್ರ್ಯ ಇದೆಲ್ಲ ಅತ್ಯಗತ್ಯದ್ದಾದ ಪೂರ್ವಸಿದ್ಧತೆ

ಅಲ್ಲ, ಆದರೆ ಸಿದ್ಧವಾಗಿರುವಿಕೆ, ಆಂತರಿಕ ಸತ್ತೆಯ ಯೋಗ್ಯತೆ ಇವು ಆಧ್ಯಾತ್ಮಿಕ ಪ್ರತಿಸ್ಪಂದನ ಮತ್ತು ಸ್ವೀಕರಿಸುವಿಕೆ ಸಾಧ್ಯವಾಗುವಂತೆ ಮಾಡುತ್ತವೆ.

*

ಕೆಳಸ್ತರದ ಸ್ವಭಾವ ಹಾಗೂ ಅದರ ಅಡೆತಡೆಗಳು ಇವುಗಳಿಗೆ ಹೆಚ್ಚಿನ ಒತ್ತುಕೊಡುವುದು ತಪ್ಪಾದದ್ದು, ಅದು ಸಾಧನೆಯ ನಕಾರಾತ್ಮಕ ಬದಿ. ಅವುಗಳತ್ತ ಲಕ್ಷ್ಯಕೊಡಬೇಕು ಮತ್ತು ಪರಿಶುದ್ಧಗೊಳಿಸಬೇಕು, ಆದರೆ ಅದೇ ಒಂದು ಮಹತ್ವದ ಸಂಗತಿ ಎಂದು ಅವುಗಳಲ್ಲಿ ಪೂರ್ವಮಗ್ನರಾಗಿರುವುದು ಸಹಾಯಕವಾಗುವುದಿಲ್ಲ. ಅವರೋಹಣ ಕುರಿತು ಅನುಭವದ ಸಕಾರಾತ್ಮಕ ಬದಿ ಹೆಚ್ಚು ಮಹತ್ವದ್ದು. ಸಕಾರಾತ್ಮಕ ಅನುಭವಕ್ಕೆ ಕರೆಕೊಡುವುದಕ್ಕಿಂತ ಮೊದಲು ಕೆಳಸ್ತರದ ಸ್ವಭಾವ ಇಡಿಯಾಗಿ ಮತ್ತು ಎಲ್ಲ ಕಾಲಕ್ಕೂ ಪರಿಶುದ್ಧಗೊಳ್ಳಲೆಂದು ಮನುಷ್ಯ ಕಾದು–ಕೊಂಡಿದ್ದರೆ ಅವನು ಎಂದೆಂದಿಗೂ ಕಾದುಕೊಂಡಿರಬೇಕಾಗುವುದು. ಕೆಳಸ್ತರದ ಸ್ವಭಾವ ಹೆಚ್ಚು ಹೆಚ್ಚಾಗಿ ಪರಿಶುದ್ಧಗೊಂಡಂತೆ ಉಚ್ಚತರ ಸ್ವಭಾವದ ಅವರೋಹಣ ಹೆಚ್ಚು ಸುಲಭ ರೀತಿಯಲ್ಲಾಗುವುದು ಆದರೆ ಉಚ್ಚತರ ಪ್ರಕೃತಿಯ ಅವರೋಹಣ ಹೆಚ್ಚಾದ ಹಾಗೆ ಕೆಳಸ್ತರದ್ದು ಹೆಚ್ಚಿನ ರೀತಿಯಲ್ಲಿ ಪರಿಶುದ್ಧಗೊಳ್ಳುತ್ತದೆ ಎಂಬುದು ಕೂಡ ಸತ್ಯವಾದದ್ದು. ಸಂಪೂರ್ಣ ಪರಿಶುದ್ಧತೆಯಾಗಲಿ ಇಲ್ಲವೆ ಶಾಶ್ವತ ಪರಿಪೂರ್ಣ ಪ್ರಕಟಣೆಯಾಗಲಿ ಒಮ್ಮೆಗೆ ಬರುವುದು ಸಾಧ್ಯವಿಲ್ಲ, ಅದು ಕಾಲಗತಿಗೆ ಹಾಗೂ ತಾಳ್ಮೆಯಿಂದ ಸಾಧಿಸಿದ ಪ್ರಗತಿಗೆ ಸಂಬಂಧಿಸಿದ ವಿಷಯ. ಅವೆರಡೂ (ಪರಿಶುದ್ಧತೆ ಮತ್ತು ಪ್ರಕಟಣೆ) ಪರಸ್ಪರ ನೆರವಾಗುವ ರೀತಿಯಲ್ಲಿ ಪ್ರಗತಿ ಹೊಂದುತ್ತ ಸಾಗುತ್ತವೆ ಮತ್ತು ಹೆಚ್ಚು ಹೆಚ್ಚಾಗಿ ಒಂದು ಇನ್ನೊಂದರ ಕೈಯಲ್ಲಿ ಲೀಲೆ ನಡೆಸುತ್ತ ಬಲವುಳ್ಳವಾಗುತ್ತವೆ–ಅದೇ ಸಾಧನೆಯ ಸಾಮಾನ್ಯ ಗತಿ.

**(23/533, 591, 905, 906)** **– ಶ್ರೀ ಅರವಿಂದರು**

*

## ಭರವಸೆ ನೀಡುವ ಒಂದು ಶಬ್ದ

ನಮ್ಮ ಸ್ವಭಾವ ಸಂಕಲ್ಪದಲ್ಲಿ ತಪ್ಪಾಗಿದೆ, ಜ್ಞಾನದ ವಿಷಯದಲ್ಲಿ ಅಜ್ಞಾನಿ–ಯಾಗಿದೆಯಷ್ಟೇ ಅಲ್ಲ, ಸಾಮರ್ಥ್ಯದಲ್ಲಿ ದುರ್ಬಲವಾಗಿದೆ, ಆದರೆ ದೈವೀ ಸಾಮರ್ಥ್ಯವಿದೆ ಅದರಲ್ಲಿ ನಾವು ನಂಬಿಕೆಯನ್ನಿರಿಸಿದರೆ ಅದು ನಮ್ಮನ್ನು ಮುಂದೆ ಕರೆದೊಯ್ಯುವುದು ಮತ್ತು ಅದು ನಮ್ಮ ಕೊರತೆಗಳನ್ನು ಹಾಗೂ ಸಾಮರ್ಥ್ಯಗಳನ್ನು ದೈವೀ ಉದ್ದೇಶಕ್ಕಾಗಿ ಉಪಯೋಗಿಸುವುದು. ಕೂಡಲೆ ನಮ್ಮ



ಮುಂದಿರುವ ಗುರಿಯಲ್ಲಿ ನಾವು ವಿಫಲರಾದರೆ ಅದಕ್ಕೆ ಕಾರಣ ಭಗವಂತ ಹಾಗಾಗಲಿ ಎಂಬ ಉದ್ದೇಶವನ್ನಿಟ್ಟುಕೊಂಡಿರುತ್ತಾನೆ. ಬಹಳಷ್ಟು ಸಲ ನಮ್ಮ ವಿಫಲತೆ ಇಲ್ಲವೆ ಕೆಟ್ಟ ಪರಿಣಾಮ, ಕೂಡಲೆ ಮತ್ತು ಸಂಪೂರ್ಣವಾಗಿ ದೊರಕುವ ಯಶಸ್ಸು ನಮ್ಮಳವಿನಲ್ಲಿ ಇರಿಸಬಹುದಾದ ಫಲಿತಾಂಶಕ್ಕಿಂತ ಹೆಚ್ಚು ಸರಿಯಾದ ಫಲಿತಾಂಶಕ್ಕೆ ಮಾರ್ಗ ಮಾಡಿಕೊಡುತ್ತದೆ. ನಾವು ವೇದನೆಗೆ ಒಳಗಾದರೆ ಅದಕ್ಕೆ ಕಾರಣ ನಮ್ಮೊಳಗಿರುವ ಏನೋ ಒಂದು ದಿವ್ಯಾನಂದದ ಹೆಚ್ಚು ಅಪರೂಪದ ಸಾಧ್ಯತೆಗಾಗಿ ತಯಾರಾಗಬೇಕಾಗಿರುತ್ತದೆ. ನಾವು ಎಡವಿದರೆ, ಕೊನೆಯಲ್ಲಿ ಪರಿಪೂರ್ಣ ರೀತಿಯಲ್ಲಿ ನಡೆದಾಡುವುದರ ರಹಸ್ಯವನ್ನು ಕಲಿಯುವುದಿರುತ್ತದೆ, ಶಾಂತಿ, ಪರಿಶುದ್ಧತೆ ಹಾಗೂ ಪರಿಪೂರ್ಣತೆ ಇವುಗಳನ್ನು ದೊರಕಿಸು–ವುದಕ್ಕಾಗಿಯೂ ಕೂಡ ನಾವು ರೋಷಾವೇಶದ ಅವಸರದಲ್ಲಿರುವುದು ಬೇಡ. ಶಾಂತಿ ನಮ್ಮದಾಗಲೇಬೇಕು, ಆದರೆ ಆ ಶಾಂತಿ ಶೂನ್ಯ, ವಿಧ್ವಂಸಗೊಂಡ ಸ್ವಭಾವದ್ದು, ಇಲ್ಲವೆ ಹತವಾದ ಇಲ್ಲವೆ ಊನಗೊಂಡ ಕ್ಷಮತೆಗಳಿರುವಂತಹದು, ತಳಮಳವನ್ನು ಹೊಂದುವ ಕ್ಷಮತೆಯಿಲ್ಲದ್ದು ಆಗಿರಬಾರದು, ಏಕೆಂದರೆ ಅವುಗಳನ್ನು ನಾವು ಗಾಢತೆ, ಆವೇಶ ಮತ್ತು ಶಕ್ತಿ ಇವುಗಳನ್ನು ಹೊಂದುವುದಕ್ಕೆ ಅಸಮರ್ಥವಾಗಿರುವಂತೆ ಮಾಡಿರುತ್ತೇವೆ. ಪರಿಶುದ್ಧತೆ ನಮ್ಮ ಗುರಿಯಾಗಿರಬೇಕು, ಆದರೆ ಆ ಪರಿಶುದ್ಧತೆ ಶೂನ್ಯವಾದದ್ದು, ಗೆಲುವಿಲ್ಲದ್ದು ಇಲ್ಲವೆ ಕಟ್ಟುನಿಟ್ಟಿನ ಔದಾಸೀನ್ಯಕ್ಕೊಳಗಾದದ್ದು ಆಗಿರಬಾರದು. ಪರಿಪೂರ್ಣತೆಯನ್ನು ನಮ್ಮಿಂದ ಒತ್ತಾಯಪೂರ್ವಕವಾಗಿ ಬೇಡಲಾಗಿದೆ, ಆದರೆ ಆ ಪರಿಪೂರ್ಣತೆಯ ವ್ಯಾಪ್ತಿ ಸಂಕುಚಿತ ಸೀಮಿತತೆಗಳ ಕಟ್ಟಿಗೊಳಗಾಗಿ ಅಸ್ತಿತ್ವದಲ್ಲಿರುವಂತಹದಲ್ಲ ಇಲ್ಲವೆ ಎಂದೆಂದಿಗೂ ವಿಸ್ತರಣಗೊಳ್ಳುತ್ತಿರುವ ಅನಂತದ ಸುರುಳಿ ವಿನ್ಯಾಸ (scroll)ಕ್ಕೆ ಸ್ವೇಚ್ಛಾನುಸಾರ ಪೂರ್ಣವಿರಾಮವನ್ನಿರಿಸುವಂತಹದಲ್ಲ. ನಮ್ಮ ಉದ್ದೇಶ ದೈವೀ ಸ್ವಭಾವದಲ್ಲಿ ಬದಲಾವಣೆ ಹೊಂದುವುದಾಗಿದೆ, ಆದರೆ ಆ ದೈವೀ ಸ್ವಭಾವ ಮಾನಸಿಕವಾದದ್ದಾಗಲಿ ಇಲ್ಲವೆ ನೈತಿಕವಾದದ್ದಾಗಲಿ ಅಲ್ಲ, ಆದರೆ ಅದೊಂದು ಆಧ್ಯಾತ್ಮಿಕ ಸ್ಥಿತಿ, ಸಿದ್ಧಿಸಿಕೊಳ್ಳಲು ಕಠಿಣವಾದದ್ದು, ಬುದ್ಧಿಮತ್ತೆಯಿಂದ ಕಲ್ಪಿಸಿಕೊಳ್ಳಲೂ ಕೂಡ ಕಠಿಣವಾದದ್ದು. ನಮ್ಮ ಕಾರ್ಯದ ಹಾಗೂ ಯೋಗದ ದೈವೀ ಪ್ರಭು ಕೈಕೊಳ್ಳಬೇಕಾದ ಕಾರ್ಯದ ಬಗ್ಗೆ ಅರಿವುಳ್ಳವನಾಗಿದ್ದಾನೆ, ಮತ್ತು ಅವನು ತನ್ನದೇ ಸಾಧನದಿಂದ, ತನ್ನದೇ ರೀತಿಯಲ್ಲಿ ಆ ಕಾರ್ಯವನ್ನು ನಮ್ಮಲ್ಲಿ ಕೈಕೊಳ್ಳಲು ನಾವು ಅನುವು ಮಾಡಿಕೊಡಬೇಕು.

**(20/234)** **– ಶ್ರೀ ಅರವಿಂದರು**

*

## ವಾರ್ತಾಪತ್ರ

### ಶ್ರೀ ಅರವಿಂದೋ ಸೊಸೈಟಿ, ಲೋಣಿ (ಬಿ.ಕೆ.) ಕೇಂದ್ರ (ಕೆ.ಸಿ. 22)

ಕೇಂದ್ರದ ವಾರ್ಷಿಕ ಕಾರ್ಯಕ್ರಮವನ್ನು ದಿನಾಂಕ 20–1–2014 ರಂದು ಆಚರಿಸಲಾಯಿತು. ಶ್ರೀ ಕಲ್ಯಾಣಶೆಟ್ಟಿ ಎಲ್ಲರನ್ನೂ ಸ್ವಾಗತಿಸಿದರು. ಶ್ರೀ ಶ್ರೀನಿವಾಸ ಕುಲಕರ್ಣಿಯವರು ಪ್ರಾಸ್ತವಿಕ ನುಡಿಗಳನ್ನಾಡುತ್ತ, ಕೇವಲ ಮಹಿಳೆಯರಿಂದಲೇ ನಡೆಯುವ ಈ ಕೇಂದ್ರವು ಇಷ್ಟು ಬೇಗನೆ ಸ್ವತಂತ್ರ ಕಟ್ಟಡವನ್ನು ಹೊಂದಿರುವುದು ಶ್ರೀ ತಾಯಿಯವರ ದಿವ್ಯ ಕೃಪೆ. ಎಲ್ಲ ಜ್ಞಾನಗಳಲ್ಲಿ ಆತ್ಮಜ್ಞಾನ ಶ್ರೇಷ್ಠ. ಆ ಸಾಧನೆಯನ್ನು ಈ ಹಳ್ಳಿಯ ಅಕ್ಕತಂಗಿಯರು, ಮಾತೆಯರು ಇಲ್ಲಿ ಧ್ಯಾನ, ಪ್ರಾರ್ಥನೆಗಳ ಮೂಲಕ ಮಾಡುತ್ತಿರುವುದು ಶ್ಲಾಘನೀಯ ಎಂದು ಹೇಳಿದರು. ವೇ. ಭದ್ರಯ್ಯ ಸ್ವಾಮಿಗಳು ಮಾತನಾಡುತ್ತ, ಈ ವಾರ್ಷಿಕ ಕಾರ್ಯಕ್ರಮ ಈ ಸಂಘದ ಹುಟ್ಟು ಹಬ್ಬ. ನಮ್ಮ ಪ್ರೀತಿ ಮಕ್ಕಳ ಹುಟ್ಟು ಹಬ್ಬವನ್ನು ಆಚರಿಸುವ ಆನಂದ, ಸಂಭ್ರಮಗಳು ಇಲ್ಲಿ ಕಾಣುತ್ತಿವೆ ಎಂದು ಹೇಳಿದರು. ಮುಖ್ಯ ಅತಿಥಿಗಳಾದ ನಿವೃತ್ತ ಪ್ರಾಚಾರ್ಯ ಪ್ರೊ. ಎಸ್.ಎಂ. ಜೋಳಖೆಯವರು ಶ್ರೀ ತಾಯಿಯವರ ಸಮಗ್ರ ಚರಿತ್ರೆಯನ್ನು ವಿವರವಾಗಿ ತಿಳಿಸಿದರು. ಶ್ರೀಮಾತೆಯವರು ಬಾಲ್ಯದಿಂದಲೂ ಯೋಗಿ ಶಕ್ತಿಯನ್ನು ಹೊಂದಿದರಾಗಿದ್ದರು. ಅವರಿಗೆ ಸೂಕ್ಷ್ಮ ಲೋಕದ ಶಕ್ತಿಗಳೂ ಸಿದ್ಧಿಸಿದ್ದವು. 1920 ರಿಂದ ಶ್ರೀ ಅರವಿಂದರ ಸಹಯೋಗಿಯಾಗಿ ಅತಿಮಾನಸ ಶಕ್ತಿಯನ್ನು ಭೂಮಿಗೆ ಇಳಿಸುವುದರಲ್ಲಿ ಯಶಸ್ವಿಯಾದರು. ಶ್ರೀಮಾತಾರವಿಂದರು ಹಾಕಿಕೊಟ್ಟ ದಾರಿಯಲ್ಲಿ ನಡೆಯಲು ಉದ್ಯುಕ್ತವಾಗಿರುವ ಕೇಂದ್ರದ ಎಲ್ಲಾ ಮಹಿಳಾ ಸದಸ್ಯರು ಅಭಿನಂದನಾರ್ಹರು ಎಂದು ಹೇಳಿದರು. ವಲಯ ಉಪಾಧ್ಯಕ್ಷರಾದ ಶ್ರೀ ಪುರುಷೋತ್ತಮ ಗಲಗಲಿಯವರು ಮಾತುಬೇಡ, ಕೃತಿಯಾಗಲಿ' ಎಂದು ಶ್ರೀಮಾತೆಯವರು ಹೇಳಿದ್ದನ್ನು ನಾವೆಲ್ಲ ಸದಾಕಾಲ ಗಮನದಲ್ಲಿಟ್ಟುಕೊಂಡು, ಅವರ ಉಪದೇಶದಂತೆ ನಾವು ಜೀವನ ಸಾಗಿಸಬೇಕಾದದ್ದು ತೀರ ಅವಶ್ಯವಾಗಿದೆ ಯಾಕೆಂದರೆ ತಿಳಿದುಕೊಂಡದ್ದನ್ನು ಆಚರಣೆಯಲ್ಲಿ ತರದಿದ್ದರೆ ತಿಳಿದುಕೊಂಡುದರ ಪ್ರಯೋಜನವೇನು? ನಮ್ಮ ಪ್ರತಿಯೊಂದು ಕಾರ್ಯವೂ ಯೋಗಮಯ–ವಾಗಬೇಕು ಎಂದರು. ಅಧ್ಯಕ್ಷತೆಯನ್ನು ವಹಿಸಿದ್ದ ಶ್ರೀ ಸಿದ್ಧೇಶ್ವರ ಶಿಕ್ಷಣ ಸಂಸ್ಥೆಯ ಹಾಗೂ ಪಿ.ಎಲ್.ಡಿ. ಬ್ಯಾಂಕಿನ ಅಧ್ಯಕ್ಷರಾದ ಶ್ರೀ ಬಿ.ಎಂ. ಕೋರೆಯವರು ಮಾತನಾಡಿ, ನಮ್ಮ ರಾಜ್ಯದಲ್ಲಿಯೇ ಇದೊಂದೇ ಮಹಿಳಾ ಕೇಂದ್ರವಾಗಿರುವುದು ಹೆಮ್ಮೆಯ ಸಂಗತಿ. ಈ ಕೇಂದ್ರಕ್ಕೆ ನನ್ನಿಂದಾದಷ್ಟು ಸಹಾಯ ಮಾಡಲು ನಾನು



ಸದಾ ಸಿದ್ಧ. ಈ ಕಟ್ಟಡಕ್ಕೆ ಕಾಂಪೌಂಡನ್ನು ಬೇಗನೆ ಕಟ್ಟಿಸುವ ಪ್ರಯತ್ನ ಮಾಡುತ್ತೇನೆ ಎಂದು ಭರವಸೆ ನೀಡಿದರು. ಸಾನ್ನಿಧ್ಯ ವಹಿಸಿದ್ದ ಪೂಜ್ಯ ಶ್ರೀ ಶ್ರೀ ಮಹಾಂತಯ್ಯ ಸ್ವಾಮಿಗಳವರು, ಉಪದೇಶ ಮಾಡುವುದು ಸರಳ ಆದರೆ ಆಚರಣೆ ಕಠಿಣ, ಶ್ರೀಮಾತಾರವಿಂದರ ಭಕ್ತರಾದ ನಮ್ಮ ಸೋದರಿಯರು ಧ್ಯಾನ, ಪ್ರಾರ್ಥನೆ, ಸತ್ಸಂಗಗಳ ಮೂಲಕ ಆಚರಣೆ ವ್ರತವನ್ನು ಕೈಕೊಂಡದ್ದು ಅಭಿನಂದನೀಯ. ಪ್ರಾರ್ಥನೆ ಭಗವಂತನತ್ತಣದ ಒಂದು ಒಳ್ಳೆಯ ದಾರಿ. ಆದರೆ ಭಯದಿಂದ ಯಾರೂ ಪ್ರಾರ್ಥನೆ ಮಾಡಬಾರದು. ಪ್ರೀತಿ, ಭಕ್ತಿಗಳಿಂದ ಪ್ರಾರ್ಥಿಸಬೇಕು ಎಂದು ಅಪ್ಪಣೆ ಕೊಡಿಸಿದರು.

ವಂದನಾರ್ಪಣೆಯೊಂದಿಗೆ ಕಾರ್ಯಕ್ರಮ ಮುಕ್ತಾಯಗೊಂಡಿತು. ನಂತರ ಎಲ್ಲರಿಗೂ ಪ್ರಸಾದವನ್ನು ವಿತರಿಸಲಾಯಿತು. ಕಾರ್ಯಕ್ರಮಕ್ಕೆ ವಿಜಾಪುರ, ಏಳಗಿ, ಹಲಸಂಗಿಯಿಂದ ಗುರುಬಂಧುಗಳು ಬಂದಿದ್ದರು. ಶ್ರೀ ಅರವಿಂದ ಸೊಸೈಟಿ, ರಾಜ್ಯ ಸಮಿತಿ, ಸಂಯೋಜಕರಾದ ಡಾ. ಜಗದೀಶ ಉಪಸ್ಥಿತರಿದ್ದರು.

ಶ್ರೀ ಪುರುಷೋತ್ತಮ ಗಲಗಲಿ
ಹಲಸಂಗಿ

### ಶ್ರೀ ಅರವಿಂದ ಸಂಕೀರ್ಣ

ಜೆ.ಪಿ. ನಗರ 1ನೇ ಹಂತ, ಬೆಂಗಳೂರು.

ಮೀರಾಂಬಿಕಾ ಸ್ಕೂಲ್ ಫಾರ್ ನ್ಯೂ ಏಜ್ ಶಿಕ್ಷಣ ಸಂಸ್ಥೆಯ ಜ್ಯೋತಿ ಪ್ರಸರಣ ಸಮಾರಂಭವು ದಿನಾಂಕ 15/02/2014 ರಂದು ಸಂಸ್ಥೆಯ ಶ್ರೀರಂಗ ಬಯಲು ಮಂದಿರದಲ್ಲಿ ನಡೆಯಿತು. ಮುಖ್ಯ ಅತಿಥಿಗಳು ಜ್ಯೋತಿ ಬೆಳಗುವುದರೊಂದಿಗೆ ಕಾರ್ಯಕ್ರಮ ಆರಂಭವಾಯಿತು. ಶ್ರೀಮತಿ ರೋಹಿಣಿ ನೀಲೇಕಣಿ (Fouder-Chairperson, Arghyam, A Charitable Foundation) ರವರು ವಿದ್ಯಾರ್ಥಿಗಳು ದೃತಿಗೆಡದೆ ಜೀವನದಲ್ಲಿ ಹೇಗೆ ಮುಂದೆ ಬರಬಹುದು ಎಂಬುದರ ಬಗ್ಗೆ ತಮ್ಮ ಸ್ವಂತ ಜೀವನದಲ್ಲಿ ನಡೆದ ಘಟನೆಗಳ ಆಧಾರದ ಮೂಲಕ ವಿವರಿಸಿದರು. ಅಧ್ಯಕ್ಷೀಯ ಭಾಷಣದಲ್ಲಿ ಸಂಸ್ಥೆಯ ಅಧ್ಯಕ್ಷರಾದ ಶ್ರೀಯುತ ಅಜಿತ್ ಸಬ್ನೀಸ್ ಮೀರಾಂಬಿಕ ಶಾಲೆಯಲ್ಲಿ ಓದುವ ವಿದ್ಯಾರ್ಥಿಗಳು ಇತರ ಶಿಕ್ಷಣ ಸಂಸ್ಥೆಯಲ್ಲಿ ಓದುವ ವಿದ್ಯಾರ್ಥಿಗಳಿಗಿಂತ ವಿಶಿಷ್ಟವಾಗಿರುತ್ತಾರೆ ಎಂದರು. ಶಾಲಾ ಶಿಕ್ಷಕ ಶಿಕ್ಷಕೇತರ ವೃಂದದವರು ಜ್ಯೋತಿಯನ್ನು ಹತ್ತನೇ ತರಗತಿಯ

ವಿದ್ಯಾರ್ಥಿಗಳಿಗೆ ಹಸ್ತಾಂತರಿಸಿದರು. ಹತ್ತನೇ ತರಗತಿಯವರು ಒಂಬತ್ತನೆಯ ತರಗತಿಯವರಿಗೆ ಹಣತೆಯನ್ನು ಹಸ್ತಾಂತರಿಸುವ ಮೂಲಕ ಸಾಂಕೇತಿಕವಾಗಿ ಜ್ಞಾನದ ಪ್ರಸರಣ ಮಾಡಲಾಯಿತು. ಸಂಸ್ಥೆಯ ಆಡಳಿತಾಧಿಕಾರಿ ಶ್ರೀಮತಿ ಪ್ರತಿಭಾ ಸಬ್ನೀಸ್ ವಿದ್ಯಾರ್ಥಿಗಳಿಗೆ ಪ್ರತಿಜ್ಞಾ ವಿಧಿ ಬೋಧಿಸಿದರು. ಹತ್ತನೆಯ ತರಗತಿಯ ವಿದ್ಯಾರ್ಥಿಗಳು ಶಾಲೆಯ ತಮ್ಮ ಅನುಭವಗಳನ್ನು ಹಂಚಿಕೊಂಡರು. ಶಾಲೆಯ ಪ್ರಾಂಶುಪಾಲರು ಶ್ರೀಮತಿ ಶಾರದಾಂಬ, ವಿದ್ಯಾರ್ಥಿಗಳ ಪೋಷಕರು ಕಾರ್ಯಕ್ರಮದಲ್ಲಿ ಉಪಸ್ಥಿತರಿದ್ದರು. ವಂದೇಮಾತರಂ ಗೀತೆಯೊಂದಿಗೆ ಕಾರ್ಯಕ್ರಮ ಮುಕ್ತಾಯವಾಯಿತು.

ದಿನಾಂಕ 16/02/2014 ರಂದು ಅರವಿಂದೋ ಕಾಂಪ್ಲೆಕ್ಸ್ ಟ್ರಸ್ಟ್‌ನಲ್ಲಿ ದಿ॥ ಶ್ರೀಜಿಯವರಿಗೆ ಶ್ರದ್ಧಾಂಜಲಿ ಕಾರ್ಯಕ್ರಮವನ್ನು ಏರ್ಪಡಿಸಲಾಗಿತ್ತು. ಧ್ಯಾನ ಮಂದಿರದಲ್ಲಿ ಧ್ಯಾನದೊಂದಿಗೆ ಆರಂಭವಾದ ಕಾರ್ಯಕ್ರಮದಲ್ಲಿ ಪೂಜ್ಯ ಶ್ರೀಜಿಯವರ ಕುರಿತ ಮಹತ್ವದ ಛಾಯಚಿತ್ರಗಳನ್ನು ತೋರಿಸಲಾಯಿತು. ಬಳಿಕ ಶ್ರೀಜಿಯವರನ್ನು ಕುರಿತು ಮೀರಾಂಬಿಕಾ ಸ್ಕೂಲ್ ಫಾರ್ ನ್ಯೂ ಏಜ್ ಶಿಕ್ಷಕ ವೃಂದದವರು ಹಾಗೂ ಇತರ ಸಾಧಕರು ಅವರ ಜೊತೆಗಿದ್ದ ಸಂಬಂಧದ ಅನುಭವದ ಭಾವನೆಗಳನ್ನು ಸಭೆಯಲ್ಲಿದ್ದವರೊಂದಿಗೆ ಹಂಚಿಕೊಂಡರು.

ದಿನಾಂಕ 21ನೇ ಫೆಬ್ರವರಿ 2014 ರ ಶುಕ್ರವಾರದಂದು ಶ್ರೀ ಅರವಿಂದ ಸಂಕೀರ್ಣದ ವತಿಯಿಂದ ಶ್ರೀಮಾತೆಯವರ ಜನ್ಮ ದಿನವನ್ನಾಗಿ ಆಚರಿಸಲಾಯಿತು. ಬೆಳಿಗ್ಗೆ 7.00 ರಿಂದ 7.30 ರವರೆಗೆ ಸಾಮೂಹಿಕ ಧ್ಯಾನ ಹಾಗೂ ಸಂದೇಶ ಪತ್ರವನ್ನು ವಿತರಿಸಲಾಯಿತು. ತತ್ಸಂಬಂಧ ಸಾಯಂಕಾಲ 5.00 ರಿಂದ 6.15 ರವರೆಗೆ On "The Mother" ವೀಡಿಯೋ ಮುಖಾಂತರ ತೋರಿಸಿದರು. ಈ ಕಾರ್ಯಕ್ರಮಕ್ಕೆ ಅನೇಕ ಗುರುಬಂಧುಗಳು ಹಾಗೂ ಸಂಕೀರ್ಣದ ಸಿಬ್ಬಂದಿ ವರ್ಗದವರು ಹಾಜರಿದ್ದರು. ತತ್ಸಂಬಂಧ 21ನೇ ಫೆಬ್ರವರಿ ಯಿಂದ 15ನೇ ಮಾರ್ಚ್ 2014 ರವರೆಗೂ "Adoration of The Divine Mother" ಎಂಬ ವಿಷಯದ ಬಗ್ಗೆ ವಸ್ತು ಪ್ರದರ್ಶನವನ್ನು ಆಯೋಜಿಸಲಾಗಿದೆ.

ಶ್ರೀಮಾತೆಯವರ ಜನ್ಮ ದಿನವನ್ನು ದಿನಾಂಕ 21/02/2014 ರಂದು ಮೀರಾಂಬಿಕಾ ಸ್ಕೂಲ್ ಫಾರ್ ನ್ಯೂ ಏಜ್‌ನಲ್ಲಿ ಆಚರಿಸಲಾಯಿತು. ಶಿಕ್ಷಕಿಯರು ಶ್ರೀಮಾತೆಯವರ ಹುಟ್ಟು ಹಬ್ಬದ ವಿಶೇಷ ಸಂದೇಶ ಪತ್ರ ಓದಿದರು, ಬಳಿಕ ಕನ್ನಡ ಮತ್ತು ಆಂಗ್ಲ ಭಾಷೆಯಲ್ಲಿ ಶ್ರೀಮಾತೆಯವರ ವಿಚಾರಧಾರೆಗಳ ಬಗ್ಗೆ ಮಾತನಾಡಿದರು. ನಂತರ ಶಿಕ್ಷಕಿಯರು 'ಸಾವಿತ್ರಿ'ಯನ್ನು ಪಠನೆ ಮಾಡಿದರು.




## STATEMENT ABOUT OWNERSHIP AND OTHER PARTICULARS ABOUT NEWSPAPER AKHIL BHARAT PATRIKA

**FORM IV**

| | | |
|---|---|---|
| 1. Place of Publication | : | Bangalore |
| 2. Periodicity of its Publication | : | Monthly |
| 3. Printer's Name | : | Ajit Sabnis |
| Nationality | : | Indian |
| Address | : | No. 39 & 38 (P) 30th Main, 9th Cross, Sri Aurobindo Marg, J P Nagar I Phase, Bangalore - 560 078. |
| 4. Publisher's Name | : | Ajit Sabnis |
| Nationality | : | Indian |
| Address | : | No. 39 & 38 (P) 30th Main, 9th Cross, Sri Aurobindo Marg, J P Nagar I Phase, Bangalore - 560 078. |
| 5. Editor's Name | : | Dr. K.S. Amur |
| Nationality | : | Indian |
| Address | : | No. 39 & 38 (P) 30th Main, 9th Cross, Sri Aurobindo Marg, J P Nagar I Phase, Bangalore - 560 078. |

6. Names and addresses of individuals who own the newspaper and partners or shareholders holding More than one per cent of the total capital.

| | | |
|---|---|---|
| Name | : | Sri Aurobindo Society |
| Nationality | : | |
| Address | : | No. 11, Saint Martin Street, Puducherry - 605 001. |

I, Ajit Sabnis, hereby declare that the particulars given above are true to the best of my knowledge and belief.

Sd/-

Date : 28-02-2014 Ajit Sabnis



My Lord, every day,
in all circumstances, let me repeat
with the full sincerity of my heart,
"May Thy Will be done and not mine."

- The Mother

**RNI No. 22511/1971**
No. of Pages **56 + 4 (Cov. Page)**
KAR Reg No : CPMG/KA/BGS/368/2012-2014
Permitted to Post 10th of Every Month. Reg. Valid till : 31-12-2014
Licensed to Post at MBC, Bangalore GPO, Bangalore - 560 001

ಶ್ರೀ ಅರವಿಂದ ಸಂಕೀರ್ಣದಲ್ಲಿ ನಿರ್ಮಿಸಲಾಗಿರುವ ಅತಿಥಿ ಗೃಹವು ಈಗಾಗಲೇ ತಿಳಿಸಿರುವಂತೆ ಗುರುಬಂಧುಗಳ ಉಪಯೋಗಕ್ಕಾಗಿ ತೆರೆಯಲಾಗಿದೆ. ಈ ಅತಿಥಿ ಗೃಹದಲ್ಲಿ ತಂಗಲು ಬರುವ ಗುರು-ಬಂಧುಗಳ ಅನುಕೂಲಕ್ಕಾಗಿ ಊಟ ಮತ್ತು ವಸತಿ ವ್ಯವಸ್ಥೆಯನ್ನು ಕೂಡ ಸೂಕ್ತ ದರಗಳಲ್ಲಿ ಅನುವುಗೊಳಿಸಲಾಗಿದೆ. ಶ್ರೀ ಅರವಿಂದ ಸೊಸೈಟಿ ಸದಸ್ಯರುಗಳಿಗೆ ರಿಯಾಯಿತಿಯಲ್ಲಿ ವಸತಿ ಊಟಗಳ ವ್ಯವಸ್ಥೆ ಇದೆ. ಇದಕ್ಕಾಗಿ ಸದಸ್ಯರು ತಮ್ಮ ಚಾಲ್ತಿಯಲ್ಲಿರುವ ಸದಸ್ಯತ್ವದ ಚೀಟಿಯನ್ನು ತೋರಿಸಬೇಕಾಗುತ್ತದೆ.

**ತತ್ಸಂಬಂಧ ಸಂಪರ್ಕಿಸಬೇಕಾದ ವಿಳಾಸ :**

ಆ್ಯಡ್‌ಮಿನಿಸ್ಟ್ರೇಟಿವ್ ಮ್ಯಾನೇಜರ್
ಶ್ರೀ ಅರವಿಂದ ಸಂಕೀರ್ಣ, ಶ್ರೀ ಅರವಿಂದ ಮಾರ್ಗ
ಜೆ.ಪಿ.ನಗರ ಮೊದಲನೇ ಹಂತ, ಬೆಂಗಳೂರು - 560 078
ದೂರವಾಣಿ : 080-22449882, 22459268

Ed. : Dr. K.S. Amur, M.Sc., PhD, Pub : Ajit S. Sabnis.
Ptd. by M/s Seshaasai e-forms Pvt. Ltd.,
on behalf of Sri Aurobindo Complex Trust, 'Sri Aurobindo Marg',
J.P. Nagar I Phase, Bangalore - 560 078. Phone : 080 - 2244 9882.